(ಸದನವು ಬೆಳಗ್ಗೆ 11 ಗಂಟೆ 10 ನಿಮಿಷಕ್ಕೆ ಪ್ರಾರಂಭವಾದಾಗ ಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ.ಜಿ.ಬೋಪಯ್ಯರವರು ಪೀಠದಲ್ಲಿ ಉಪಸ್ಥಿತರಿದ್ದರು)

1. ಸಂತಾಪ ಸೂಚನೆ

ಅಧ್ಯಕ್ಷರು:– ಈಗ ಸಂತಾಪ ಸೂಚನೆ.

ಸಮಾಜವಾದಿ ನೇತಾರ, ರಾಜ್ಯದ ಮಾಜಿ ಮುಖ್ಯಮಂತ್ರಿಯವರಾಗಿದ್ದ ಶ್ರೀ ಎಸ್.ಬಂಗಾರಪ್ಪ ಮತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮಂಚನಹಳ್ಳಿ ಮಹದೇವ, ರಾಮಾಸಿದ್ದಲಿಂಗ ನಡೋಣಿ, ಸೋಮಪ್ಪ ಸುವರ್ಣ ಹಾಗೂ ಖ್ಯಾತ ಸಾಹಿತಿ ಎಲ್. ಬಸವರಾಜು ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಎಸ್.ಬಂಗಾರಪ್ಪ

ಎಸ್. ಬಂಗಾರಪ್ಪ ಅವರು 1933 ಅಕ್ಟೋಬರ್ 26ರಂದು ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಕುಬಟೂರಿನಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರಲ್ಲದೆ, ಡಿಪ್ಲೋಮೊ ಇನ್ ಸೋಷಿಯಲ್ ಸೈನ್ಸ್ ಸಹ ವ್ಯಾಸಂಗ ಮಾಡಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ದಿವಂಗತರು ನ್ಯಾಯವಾದಿಯಾಗಿದ್ದರಲ್ಲದೇ ಸಮಾಜವಾದಿ ಚಿಂತಕರಾಗಿದ್ದರು.

1962ರಲ್ಲಿ ಪ್ರಜಾ ಸೋಷಿಯಲಿಸ್ಟ್ ಪಕ್ಷಕ್ಕೆ ಸೇರ್ಪಡೆಗೊಳ್ಳುವುದರ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿರುವ ಶ್ರೀಯುತರು, ಸೊರಬ ಕ್ಷೇತ್ರದಿಂದ ನಾಲ್ಕು, ಐದನೇ ವಿಧಾನ ಸಭೆಗೆ ಕ್ರಮವಾಗಿ 1967 ಮತ್ತು 1972ರಲ್ಲಿ ಸಂಯುಕ್ತ ಸಮಾಜವಾದಿ ಪಕ್ಷದಿಂದ ಹಾಗೂ ಆರು, ಏಳು, ಎಂಟು ಮತ್ತು ಒಂಭತ್ತನೇ ವಿಧಾನ ಸಭೆಗೆ ಅನುಕ್ರಮವಾಗಿ 1978, 1983, 1985, 1989ರಲ್ಲಿ ಕಾಂಗ್ರೆಸ್ ಪಕ್ಷದ ಮೂಲಕ ಸತತವಾಗಿ ವಿಧಾನಸಭೆಗೆ ಆಯ್ಕೆಯಾಗಿರುತ್ತಾರಲ್ಲದೆ, 1994ರಲ್ಲಿ ಹತ್ತನೇ ವಿಧಾನ ಸಭೆಗೆ ಕರ್ನಾಟಕ ಕಾಂಗ್ರೆಸ್ ಪಕ್ಷದಿಂದ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

1977ರಲ್ಲಿ ರಾಜ್ಯದ ಗೃಹ ಮತ್ತು ಬಂದೀಖಾನೆ ಖಾತೆ ರಾಜ್ಯ ಸಚಿವರಾಗಿ, 1978 ರಿಂದ 1979 ವರೆಗೆ ಲೋಕೋಪಯೋಗಿ ಸಚಿವರಾಗಿ, 1980ರಿಂದ 1981ರವರೆಗೆ ಕಂದಾಯ ಮತ್ತು ಕೃಷಿ ಸಚಿವರಾಗಿ, 1985 ರಿಂದ 1987ರವರೆಗೆ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿ, 1989 ರಿಂದ 1990 ರವರೆಗೆ ಕೃಷಿ ಮತ್ತು ತೋಟಗಾರಿಕೆ ಸಚಿವರಾಗಿ ಹಾಗೂ 1990 ರಿಂದ 1992ರವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿರುತ್ತಾರೆ.

1996 ರಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷದಿಂದ ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಸಂಸತ್‌ಗೆ ಆಯ್ಕೆಯಾಗಿದ್ದರಲ್ಲದೇ, 1999ರಲ್ಲಿ ಕಾಂಗ್ರೆಸ್ ಪಕ್ಷದಿಂದ ಮತ್ತು 2004ರಲ್ಲಿ ಬಿ.ಜೆ.ಪಿ.ಯಿಂದ ಸಂಸತ್‌ಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. 2005ರಲ್ಲಿ ಸಂಸತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಲ್ಲದೇ, ಅದೇ ಕ್ಷೇತ್ರದ ಉಪ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದಿಂದ ಪುನರಾಯ್ಕೆಗೊಂಡಿದ್ದರು.

ಎಸ್. ಬಂಗಾರಪ್ಪ ಅವರು 1979ರಿಂದ 1980 ರವರೆಗೆ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, 1982ರಲ್ಲಿ ಕರ್ನಾಟಕ ಕ್ರಾಂತಿರಂಗ ಪಕ್ಷವನ್ನು, 1994ರಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷ ಮತ್ತು 1998ರಲ್ಲಿ ಕರ್ನಾಟಕ ವಿಕಾಸ ಪಕ್ಷವನ್ನು ಸ್ಥಾಪಿಸಿ, ಅವುಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಪ್ರಭಾವಿ ರಾಜಕಾರಣಿಯಾಗಿದ್ದರಲ್ಲದೇ ರಾಜಕೀಯದುದ್ದಕ್ಕೂ ಕಾಂಗ್ರೆಸ್ ಪಕ್ಷ, ಭಾರತೀಯ ಜನತಾಪಕ್ಷ, ಸಮಾಜವಾದಿ ಪಕ್ಷ ಮತ್ತು ಜನತಾದಳ (ಜಾತ್ಯಾತೀತ) ಪಕ್ಷಗಳಲ್ಲಿ ಸೇವೆ ಸಲ್ಲಿಸಿದ ಧೀಮಂತ ನಾಯಕರಾಗಿದ್ದರು.

ರಾಜ್ಯದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಶ್ರೀಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಗ್ರಾಮೀಣ ನಿರುದ್ಯೋಗಿಗಳಿಗೆ ಸರ್ಕಾರಿ ನೇಮಕಾತಿಯಲ್ಲಿ ಶೇಕಡಾ 15ರಷ್ಟು ಗ್ರಾಮೀಣ ಕೃಪಾಂಕ, ಆರಾಧನಾ, ಆಶ್ರಯ ಹಾಗೂ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸುವ

ಮಹತ್ವಾಕಾಂಕ್ಷಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದ ರೂವಾರಿಯಾಗಿದ್ದರು.

ವಿಶಿಷ್ಟ ಸ್ವಭಾವದ, ರಾಜಕೀಯದಲ್ಲಿ ವರ್ಣರಂಜಿತ ವ್ಯಕ್ತಿತ್ವ ಹೊಂದಿದ್ದ ಶ್ರೀ ಎಸ್.ಬಂಗಾರಪ್ಪನವರ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟ ಉಂಟಾಗಿರುತ್ತದೆ. ಎಸ್.ಬಂಗಾರಪ್ಪನವರು ದಿನಾಂಕ 25.12.2011ರಂದು ನಿಧನಹೊಂದಿರುತ್ತಾರೆ.

2. ಮಹದೇವ

ಮಹದೇವ ಅವರು 1964 ಜೂನ್ 15ರಂದು ಮೈಸೂರಿನಲ್ಲಿ ಜನಿಸಿದ್ದು, ಕಾನೂನು ಪದವಿ ಪಡೆದು ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದರು. 1994ರಲ್ಲಿ ಜನತಾದಳ ಪಕ್ಷಕ್ಕೆ ಸೇರ್ಪಡೆಗೊಳ್ಳುವುದರ ಮೂಲಕ ರಾಜಕೀಯ ಪ್ರವೇಶಿಸಿದ್ದ ದಿವಂಗತರು, ಕರ್ನಾಟಕ ಪ್ರದೇಶ ಜನತಾದಳ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ.

ಜನತಾದಳ (ಜಾತ್ಯಾತೀತ) ಪಕ್ಷದ ವತಿಯಿಂದ ಕೃಷ್ಣರಾಜನಗರ ಕ್ಷೇತ್ರದಿಂದ 2004ರಲ್ಲಿ ಹನ್ನೆರಡನೇ ವಿಧಾನಸಭೆಗೆ ಆಯ್ಕೆಗಾಗಿ ಸೇವೆ ಸಲ್ಲಿಸಿರುತ್ತಾರೆ.

ಮಹದೇವ ಅವರು ದಿನಾಂಕ 17.12.2011ರಂದು ನಿಧನ ಹೊಂದಿರುತ್ತಾರೆ.

3. ರಾಮಾ ಸಿದ್ಧಲಿಂಗ ನಡೋಣಿ

ರಾಮಾ ಸಿದ್ಧಲಿಂಗ ನಡೋಣಿ ಅವರು 1943 ಮಾರ್ಚ್ 20 ರಂದು ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕು ಹಾರುಗೇರಿಯಲ್ಲಿ ಜನಿಸಿದ್ದು, ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ವೃತ್ತಿಯಲ್ಲಿ ಕೃಷಿಕರು, ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದ ದಿವಂಗತರು ಜನತಾ ಪಕ್ಷದ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಯುತರು, ಜನತಾಪಕ್ಷದಿಂದ 1978ರಲ್ಲಿ ರಾಯಭಾಗ ಕ್ಷೇತ್ರದಿಂದ 6ನೇ ವಿಧಾಸಭೆಗೆ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರೆ.

ರಾಮಾ ಸಿದ್ಧಲಿಂಗ ನಡೋಣಿ ಇವರು ದಿನಾಂಕ 18.01.2012 ರಂದು ನಿಧನ ಹೊಂದಿರುತ್ತಾರೆ.

4. ಸೋಮಪ್ಪ ಸುವರ್ಣ

ಸೋಮಪ್ಪ ಸುವರ್ಣ ಅವರು 1929ರ ಅಕ್ಟೋಬರ್ 07ರಂದು ಜನಿಸಿದ್ದು, ಹಿರಿಯ ಮೂಲ ಶಿಕ್ಷಣ ತರಬೇತಿ ಹಾಗೂ ರಾಷ್ಟ್ರ ಭಾಷಾ ಪ್ರವೀಣ ಶಿಕ್ಷಣವನ್ನು ಪಡೆದಿರುತ್ತಾರೆ. ವೃತ್ತಿಯಲ್ಲಿ ವ್ಯಾಪಾರಸ್ಥರು ಮತ್ತು ಕೃಷಿಕರಾಗಿದ್ದ ದಿವಂಗತರು 25 ವರ್ಷಗಳ ಕಾಲ ಮಾಧ್ಯಮಿಕ ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀ ನಾರಾಯಣ ಗುರು ಪ್ರೌಢಶಾಲೆಯ ನಿರ್ದೇಶಕರಾಗಿ ಹಾಗೂ ಬಿಲ್ಲವ ಸಮಾಜ ಸೇವಾ ಸಂಘ ಮತ್ತು ತಾಲ್ಲೂಕು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

ದಿವಂಗತರು 1989ರಲ್ಲಿ ಮೂಡಬಿದ್ರೆ ಕ್ಷೇತ್ರದಿಂದ 9ನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಸೋಮಪ್ಪ ಸುವರ್ಣ ಅವರು ದಿನಾಂಕ 29.01.2012 ರಂದು ನಿಧನ ಹೋಂದಿರುತ್ತಾರೆ.

5. ಎಲ್.ಬಸವರಾಜು

ಎಲ್. ಬಸವರಾಜು ಅವರು 1919ನೇ ಅಕ್ಟೋಬರ್ 7ರಂದು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಇಡಗನೂರಿನಲ್ಲಿ ಜನಿಸಿದ್ದು, ಎಂ.ಎ. ಪದವೀಧರರಾಗಿದ್ದರು.

ಶ್ರೀಯುತರು ದಾವಣಗೆರೆ ಡಿಆರ್‌ಎಂ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು.

ನೇರ, ನಡೆ–ನುಡಿಯ ವಿಚಾರಶೀಲ ವಿಧ್ವಾಂಸರಾಗಿದ್ದ ದಿವಂಗತರು ಕವಿ ಮತ್ತು ಸಂಶೋಧಕರಾಗಿದ್ದು, ಸುಮಾರು 56 ಕೃತಿಗಳನ್ನು ರಚಿಸಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ನಾಡೋಜ ಪ್ರಶಸ್ತಿಗಳು ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಶ್ರೀಯುತರು ಭಾಜನರಾಗಿದ್ದರು. ಅಖಿಲ ಭಾರತ 75ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀಯುತರು ವಹಿಸಿದ್ದರು.

ಎಲ್. ಬಸವರಾಜು ಅವರು ದಿನಾಂಕ 29.01.2012 ರಂದು ನಿಧನ ಹೊಂದಿರುತ್ತಾರೆ.

ಶ್ರೀ ಡಿ.ವಿ.ಸದಾನಂದಗೌಡ (ಮುಖ್ಯ ಮಂತ್ರಿಗಳು):– ಸನ್ಮಾನ್ಯ ಸಭಾಧ್ಯಕ್ಷರೆ, ಗಣ್ಯರ ಮರಣಾರ್ಥ ತಾವು ಮಂಡಿಸಿರುವಂಥ ಸಂತಾಪ ಸೂಚನೆ ನಿರ್ಣಯಕ್ಕೆ ನನ್ನ ಧ್ವನಿಯನ್ನು ಸಹ ಸೇರಿಸುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಎಸ್.ಬಂಗಾರಪ್ಪನವರ ಬಗ್ಗೆ ಹೇಳುವುದಾದರೆ, ಬಂಗಾರಪ್ಪ ಎಂಬ ಹೆಸರಿನಂತೆ ಅವರು ರಾಜಕಾರಣಕ್ಕೆ ಬಂಗಾರವೇ ಆಗಿದ್ದರೆಂದು ನಾನು ತಿಳಿದುಕೊಳ್ಳುತ್ತೇನೆ. ಕರ್ನಾಟಕ ಕಂಡಂಥ ಕೆಲವೇ ವರ್ಣರಂಜಿತ ರಾಜಕಾರಣಿಗಳಲ್ಲಿ ಅವರು ಕೂಡ ಒಬ್ಬರಾಗಿದ್ದಾರೆಂದು ಹೇಳುವುದಕ್ಕೆ ಬಯಸುತ್ತೇನೆ. ಸಮತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಬದ್ಧರಾಗಿ ಕೆಲಸ ಮಾಡಿರುವಂಥ ಒಬ್ಬ ಅಪರೂಪದ ರಾಜಕಾರಣಿಯಾಗಿದ್ದರು. ಹಿಂದುಳಿದ ವರ್ಗದವರ ಬಗ್ಗೆ ಅವರಿಗಿದ್ದ ಕಾಳಜಿ ಪ್ರಶ್ನಾತೀತವಾಗಿತ್ತು. ಆದರೆ, ಅವರು ಕೇವಲ ಹಿಂದುಳಿದ ವರ್ಗದವರಿಗೆ ಸೀಮಿತವಾಗದೆ, ರಾಜ್ಯದ ಸರ್ವ ಜನರ ಹಿತರಕ್ಷಣೆ ಮಾಡುವಂಥ ರೀತಿಯಲ್ಲಿ ಅವರ ಜವಾಬ್ದಾರಿಯನ್ನು ಬೇರೆ ಬೇರೆ ಸಂದರ್ಭದಲ್ಲಿ ನಡೆಸಿಕೊಂಡು ಬಂದಿರುವುದನ್ನು ನಾವು ಕಂಡಿದ್ದೇವೆ. ಶ್ರೀಯುತರು ವರ್ಣರಂಜಿತ ರಾಜಕಾರಣಿ ಎಂದು ನಾನು ಏತಕ್ಕೆ ಹೇಳಿದೆನೆಂದರೆ, ಅವರು ರಾಜಕೀಯ ಕ್ಷೇತ್ರದಲ್ಲಿ ಎಷ್ಟು ಗಾಂಭೀರ್ಯವಾಗಿ ನಡೆದುಕೊಳ್ಳುತ್ತಿದ್ದರು. ಆದರೆ, ಬೇರೆ ಎಲ್ಲ ಸಂದರ್ಭದಲ್ಲಿ ಕೂಡ ಆ

ಗಾಂಭೀರ್ಯವನ್ನು ಬಿಟ್ಟು ಸಾಮಾನ್ಯ ಮನುಷ್ಯನಂತೆ ಅವರು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ಅವರ ಡ್ರೆಸ್ ಕೋಡ್‌ನಿಂದ ಹಿಡಿದು ಇತರೆ ಎಲ್ಲ ಚಟುವಟಿಕೆಗಳನ್ನು ಎಲ್ಲರೂ ಮೆಚ್ಚುವಂತೆ ಮತ್ತು ನೋಡುವಂಥ ರೀತಿಯಲ್ಲಿ ಅವರು ಮಾಡಿಕೊಳ್ಳುತ್ತಿದ್ದರು. ಅಂದರೆ, ಸಾರ್ವಜನಿಕರಿಂದ attraction ಪಡೆದುಕೊಳ್ಳುವಂಥ ಒಂದು ವ್ಯವಸ್ಥೆಗೆ ಅವರನ್ನೇ ಅವರು ಜೋಡಣೆ ಮಾಡಿಕೊಂಡಂಥ ವ್ಯಕ್ತಿಯಾಗಿದ್ದರು. ಶ್ರೀಯುತರು ಸಮಾಜವಾದಿ ಹಿನ್ನೆಲೆಯಿಂದ ಬಂದಂಥ ವ್ಯಕ್ತಿಯಾಗಿದ್ದರು. ನೆಮ್ಮದಿಯ ಮತ್ತು ಸಂತೃಪ್ತ ಜೀವನ ನಡೆಸಬೇಕೆಂಬುದು ಅವರ ಕಲ್ಪನೆಯಾಗಿತ್ತು. ಈ ಒಂದು ಹಿನ್ನೆಲೆಯಲ್ಲಿ ಅವರು ಬೇರೆ ಬೇರೆ ಹಂತದಲ್ಲಿ ಹಲವಾರು ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದರು. ಶ್ರೀಯುತರು 7 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇವತ್ತಿನ ದಿವಸಗಳಲ್ಲಿ 7 ಬಾರಿ ಶಾಸಕರಾಗುವಂಥದ್ದನ್ನು ನಾವು ನೆನಪಿಸಿಕೊಳ್ಳುವುದಕ್ಕೂ ಸಹ ಸಾಧ್ಯವಿಲ್ಲ. ಇವತ್ತಿನ ದಿವಸ ನಾವೆಲ್ಲರೂ ನೋಡುತ್ತಿರುವ ಹಾಗೆ ಒಂದು ಬಾರಿ ಶಾಸಕರಾಗಿ ಎರಡನೇ ಬಾರಿ ಹೋದಾಗ ಅವರ ಮೇಲೆ ಕೂಡಲೇ anti-incumbency ಬಂದು ಜನರಿಂದ ಒಲವನ್ನು ಗಳಿಸಿಕೊಳ್ಳುವುದಕ್ಕೆ ಆಗದೇ ಇರತಕ್ಕಂಥ ಸಂದರ್ಭವನ್ನು ನಾವು ಎಲ್ಲ ಕಡೆ ನೋಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಏಳು ಬಾರಿ ಶಾಸಕರಾಗಿ, ಮೂರು ಬಾರಿ ಲೋಕಸಭೆ ಸದಸ್ಯರಾಗಿ ಅವರು ಕೆಲಸ ಮಾಡಿದ್ದಾರೆ ಎಂದು ಹೇಳಿದರೆ ಪ್ರಾಯಶಃ ಅದಕ್ಕಿಂತ ಹೆಚ್ಚು ಅವರ ಬಗ್ಗೆ ನಾವು ಏನೂ ಹೇಳುವುದು ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತಿದ್ದೇನೆ. ಅವರು ಒಂದು ರೀತಿಯ ಬಂಡಾಯ ಪ್ರವೃತ್ತಿಯ ರಾಜಕಾರಣಿ. ಯಾವುದೇ ಸಂದರ್ಭದಲ್ಲಿ ಕೂಡ ಅವರ ಮನಸ್ಸಿಗೆ ಹಿತ ಕಾಣಲಿಲ್ಲವೆಂದರೆ; ತಕ್ಷಣ ಅದರ ವಿರುದ್ಧ ತಮ್ಮ ಬಂಡಾಯದ ಪ್ರವೃತ್ತಿಯನ್ನು ತೋರಿಸಿಕೊಳ್ಳುತ್ತಿದ್ದರು. ನಮ್ಮ ಜೊತೆ ಕೂಡ ಅವರು ಸ್ವಲ್ಪ ಸಮಯ ಲೋಕಸಭಾ ಸದಸ್ಯರಾಗಿ ನನ್ನ ಸಹಪಾಠಿಯಾಗಿದ್ದನ್ನು ಕೂಡ ನಾನು ಕಂಡಿದ್ದೇನೆ. ಹಲವಾರು

ಸಂದರ್ಭಗಳಲ್ಲಿ ಯಾವುದೇ ಪಕ್ಷದಲ್ಲಿ ಆ ಪಕ್ಷದ ವಿಚಾರದಲ್ಲಿ ತನ್ನ ಸಹಮತ ಇದ್ದಾಗ ಅದಕ್ಕೆ ಭಾರೀಪಕ್ಷದ ಜೊತೆ ತನ್ನ ಪೂರ್ತಿ ಪ್ರಮಾಣದ ಸಹಕಾರಗಳನ್ನು ಮಾಡುತ್ತಾ ಇದ್ದರು. ಆ ಪಕ್ಷದಲ್ಲಿ ಯಾವುದೋ ಒಂದು ರೀತಿಯಲ್ಲಿ ಅವರ ಮನಸ್ಸಿಗೆ ನೆಮ್ಮದಿಯಾಗದಂತಹ ವಿಚಾರಗಳು ಬಂದರೆ ಅದನ್ನು ಒಪ್ಪಿಕೊಳ್ಳಬೇಕು ಎನ್ನುವಂತಹ ಸಂಗತಿಗಳು ಬಂದರೆ ಅಂತಹದ್ದನ್ನು ಅವರು ಮಾಡುತ್ತಾ ಇರಲಿಲ್ಲ. ಅದಕ್ಕಾಗಿ ಅವರು ಕಾಂಗ್ರೆಸ್ ನಂತರ ಕ್ರಾಂತಿರಂಗ, ಕರ್ನಾಟಕ ಕಾಂಗ್ರೆಸ್, ಬಿಜೆಪಿ, ಎಸ್‌ಪಿ ಹಾಗೂ ಜೆಡಿ(ಎಸ್) ಪಕ್ಷ ಇದನ್ನೆಲ್ಲವನ್ನು ಅವರು ನೋಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿರುವಂತಹ ಸಾಧಾರಣ ಎಲ್ಲ ರಾಜಕೀಯ ವೇದಿಕೆಗಳನ್ನು ಕಂಡಂತಹ ಒಬ್ಬ ರಾಜಕಾರಣಿ ಸನ್ಮಾನ್ಯ ಬಂಗಾರಪ್ಪನವರು ಅಂತ ನಾನು ಭಾವಿಸುತ್ತಿದ್ದೇನೆ. ಆದರೆ ಅವರದೊಂದು ವಿಶೇಷವೇನೆಂದರೆ ಎಲ್ಲಿ ಹೋದರೂ ತನ್ನ ಸ್ವಂತಿಕೆಯನ್ನು ಅವರು ಉಳಿಸಿಕೊಂಡಿದ್ದರು. ಯಾವುದೇ ಪಕ್ಷಕ್ಕೆ ಹೋದರೂ, ಎಲ್ಲೇ ಹೋದರೂ ಕೂಡ ಬಂಗಾರಪ್ಪನವರು ಅಂತ ಹೇಳುವಂಥದ್ದು ಬಂಗಾರಪ್ಪನವರೆ. ಅವರ ಹೆಸರೇ ಬೇರೆ. ಯಾವುದನ್ನೂ, ಯಾರನ್ನೂ ಹೋಲಿಸಲಿಕ್ಕೆ ಸಾಧ್ಯವಿಲ್ಲದಂತಹ ರೀತಿಯಲ್ಲಿ ತನ್ನ ಸ್ವಂತ ವರ್ಚಸ್ಸನ್ನು ಅವರು ಎಲ್ಲ ಕಡೆ ಉಳಿಸಿಕೊಂಡು ಹೋಗುತ್ತಾ ಇದ್ದರು. ಯಾವುದೇ ಒಂದು ಸಂಘಟನೆಗೆ ಹೋದರೂ ಪ್ರಭಾವಿ ನಾಯಕರಾಗಿ ಹೊರ ಹೊಮ್ಮುತ್ತಿದ್ದರು. ಈವತ್ತು ಸಾಧಾರಣವಾಗಿ ನಾವು ನೋಡುತ್ತೇವೆ. ಒಂದು ಸಂಘಟನೆ ಒಳಗೆ ಪ್ರವೇಶ ಮಾಡಿದ ಮೇಲೆ ಕೊನೆಯ ಹಂತಕ್ಕೆ ಸಂಘಟನೆ ವಿಚಾರಕ್ಕೆ ನಾವು ಒಪ್ಪಿಕೊಳ್ಳಬೇಕು ಮತ್ತು ಸಂಘಟನೆಯ ಒಂದಷ್ಟು ಜನರ ತೀರ್ಮಾನಕ್ಕೆ ನಾವು ಬದ್ಧರಾಗಬೇಕು. ಆದರೆ ಅವರದು ಆ ಜಾಯಮಾನ ಅಲ್ಲ. ಅವರ ಮನಸ್ಸಿಗೆ ಕಂಡಂಥದ್ದಕ್ಕೆ ಆ ಸಂಘಟನೆಯ ಒಂದು ವಿಚಾರಗಳು ಒಪ್ಪಿಗೆಯಾಗುವಂತಹ ರೀತಿಯಲ್ಲಿ ಅವರು ಪ್ರಯತ್ನಗಳನ್ನು ನಡೆಸುತ್ತಿದ್ದರು. ಒಂದು ವೇಳೆ ಅದು ಆಗದಿದ್ದರೆ ಅವರು ಅಲ್ಲಿ ಇರುತ್ತಿರಲಿಲ್ಲ. ಅವರು ಬಂಡಾಯವಾಗಿ ಅದರಿಂದ ಹೊರಗೆ ಹೋಗುವಂಥದ್ದನ್ನು ನಾವು ನೋಡಿದ್ದೇವೆ. ಪ್ರಾಯಶಃ ಈ ರೀತಿಯ

ಒಂದು ವಿಶೇಷವಾದಂತಹ, ಬಾಕಿಯವರಿಗಿಂತ ವ್ಯತ್ಯಾಸವಿರುವಂತಹ ಒಬ್ಬ ರಾಜಕಾರಣಿಯಾಗಿ ಅವರು ಕರ್ನಾಟಕ ರಾಜ್ಯದಲ್ಲಿ ಆಡಳಿತ ಮಾಡಿದ್ದನ್ನು ನಾವು ಕಂಡಿದ್ದೇವೆ. ಅವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಸಭಾಧ್ಯಕ್ಷರು ಈಗಾಗಲೇ ಉಲ್ಲೇಖ ಮಾಡಿದಂತಹ ಹಲವಾರು ಹೊಸ ಹೊಸ ಯೋಜನೆಗಳನ್ನು ರೂಪೀಕರಣ ಮಾಡಿರುವಂಥದ್ದು, ಆಶ್ರಯ, ಆರಾಧನಾ, ಗ್ರಾಮೀಣ ಕೃಪಾಂಕ ಮತ್ತು ವಿಶೇಷವಾಗಿ ಈ ರೈತಾಪಿ ವರ್ಗದ ಜನರಿಗೆ ಉಚಿತ ವಿದ್ಯುತ್ ಕೊಡುವಂತಹ ಕಾರ್ಯಕ್ರಮಗಳನ್ನು, ಬಡವರ ಬಗ್ಗೆ ವಿಶೇಷ ಕಾಳಜಿಯನ್ನು ತೋರಿಸಿ ಕೆಲಸ ಮಾಡಿರುವಂತಹದ್ದನ್ನ ನಾವು ಕಂಡಿದ್ದೇವೆ. ಪ್ರಾಯಶಃ ಅವರು ನಮ್ಮನ್ನು ಅಗಲಿ ಹೋದರೂ ಕೂಡ ಅವರು ಇಲ್ಲಿ ಉಳಿಸಿದಂತಹ ನೂರಾರು ವಿಚಾರಗಳು ಇಂದು ಶಾಶ್ವತವಾಗಿ ರಾಜಕೀಯ ಚರಿತ್ರೆಯಲ್ಲಿ, ಅಧ್ಯಾಯದಲ್ಲಿ ಇವತ್ತು ಸೇರಿ ಹೋಗುತ್ತದೆ ಅಂತ ಹೇಳಿ ನಾನು ಭಾವಿಸುತ್ತಿದ್ದೇನೆ. ಇದರ ಜೊತೆಗೆ ವಿಶೇಷವಾಗಿ ಅವರು ವರ್ಣರಂಜಿತ ವ್ಯಕ್ತಿ ಎಂದು ನಾನು ಏಕೆ ಹೇಳಿದೆನೆಂದರೆ, ಅವರಿಗೆ ಸಾಹಿತ್ಯ, ಸಂಗೀತ, ಕ್ರೀಡೆ, ಸಾಂಸ್ಕೃತಿಕ ಅಭಿರುಚಿ ಮತ್ತು ಇದರಲ್ಲಿ ವಿಶೇಷ ಆಸಕ್ತಿ ಅವರಿಗೆ ಇತ್ತು. ಎಲ್ಲಿ ಹೋದರೂ ಕೂಡ ಯಾರಾದರೂ ಡೊಳ್ಳು ಹಿಡಿದುಕೊಂಡಿದ್ದರೆ ಕೂಡಲೇ ಅದನ್ನೊಮ್ಮೆ ಹಾಕಿಕೊಂಡು ಅದನ್ನು ಭಾರಿಸುವಂಥದ್ದು, ಸಾಮಾನ್ಯ ಜನರಲ್ಲಿ ಸಾಮಾನ್ಯನಾಗಿ ಬೆರೆಯುವಂಥದ್ದು, ಈ ರೀತಿಯ ಒಂದು ಅದ್ಭುತ ಕಾಳಜಿಯಿದ್ದಂತಹ ವ್ಯಕ್ತಿ ಸನ್ಮಾನ್ಯ ಬಂಗಾರಪ್ಪನವರು. ಒಬ್ಬ ಹಟಮಾರಿ ರಾಜಕಾರಣಿ ಅಂತ ಹೇಳಬಹುದು, ಛಲದಂಕಮಲ್ಲ, ಹಟ ಎಂದು ಹೇಳಿದರೆ ಅದನ್ನು ಮತ್ತೆ ಅವರು ಬಿಡಲಿಕ್ಕಿಲ್ಲ. ಯಾವುದಾದರೊಂದು ವಿಚಾರಕ್ಕೆ ಬದ್ಧರಾಗಿ ಅವರು ಆ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಂತಹದನ್ನೂ ನಾವು ಕಂಡಿದ್ದೇವೆ. ಎಷ್ಟೇ ಹಟಮಾರಿಯಾದರೂ ಕೂಡ ಅಷ್ಟೇ ಸ್ನೇಹಜೀವಿ. ಅವರು ಯಾವುದೇ ಒಬ್ಬ ವ್ಯಕ್ತಿಯ ಜೊತೆಗೆ ಅವರ ಸಂಬಂಧಗಳನ್ನೊಮ್ಮೆ ಬೆಳೆಸಿಕೊಂಡರೆ ಅವರ ಜೊತೆ ನಿರಂತರವಾಗಿ ಆ ಸಂಬಂಧಗಳನ್ನು ಉಳಿಸಿಕೊಳ್ಳುವಂತಹ ಕೆಲಸ ಮಾಡಿದಂತಹ ಒಬ್ಬ ಹಿರಿಯ ಮಾನವತಾವಾದಿ. ಇಂತಹ ಒಬ್ಬ

ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಭಗವಂತ ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಹೇಳುವಂತಹ ಒಂದು ಪ್ರಾರ್ಥನೆಯನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ.

ಇನ್ನೊಬ್ಬರು ಶ್ರೀ ಎಲ್.ಬಸವರಾಜು. ಅವರು ಪ್ರಸಿದ್ಧ ಸಂಶೋಧಕರು, ಗ್ರಂಥ ಸಂಪಾದಕರು ಮತ್ತು ಹಿರಿಯ ಸಾಹಿತಿ. ಕನ್ನಡ ಸಾರಸ್ವತ ಲೋಕಕ್ಕೆ ಮತ್ತು ಸಾಂಸ್ಕೃತಿಕ ಲೋಕಕ್ಕೆ ತನ್ನದೇ ಆದಂತಹ ಅಪೂರ್ವ ಕೊಡುಗೆಗಳನ್ನು ಅವರು ಕೊಟ್ಟಿರುವಂಥದ್ದನ್ನು ನಾವು ನೋಡಿದ್ದೇವೆ. ಸುಮಾರು 56ಕ್ಕೂ ಹೆಚ್ಚು ಮೌಲ್ವಿಕ ಕೃತಿಗಳನ್ನು ರಚಿಸಿದ್ದಾರೆ. ಅವರು ನೇರ ಮತ್ತು ನಿರ್ಭಿಡೆಯ ಮಾತುಗಳಿಗೆ ಹೇಸರಾದವರು. ಸಮಾಜದಲ್ಲಿ ಶೋಷಣೆ ಮತ್ತು ತಾರತಮ್ಯದ ಬಗ್ಗೆ ಅದ್ಭುತವಾಗಿ ತನ್ನ ವಿಚಾರಗಳನ್ನು ಪ್ರತಿಪಾದನೆ ಮಾಡಿದವರಲ್ಲಿ ಸನ್ಮಾನ್ಯ ಬಸವರಾಜರು ಒಬ್ಬ ಎತ್ತಿದ ಕೈ. ಮಠ–ಪೀಠಗಳ ಬಗ್ಗೆ ಯಾರನ್ನೂ ಕೂಡ ಅವರು ಯಾವುದೇ ಸಂದರ್ಭದಲ್ಲಿ ಟೀಕೆ ಮಾಡುವುದರಲ್ಲಿ ಹಿಂದೆ ಮುಂದೆ ಬೀಳಲಿಲ್ಲ. ಈ ರೀತಿ ಒಂದು ವಿಶೇಷವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡುವುದರಲ್ಲಿ ಅವರದು ಎತ್ತಿದ ಕೈ. ವಚನ ಸಾಹಿತ್ಯ ಮತ್ತು ಶರಣ ಚಳುವಳಿಯ ಬಗ್ಗೆ ಕೂಡ ಆಳವಾಗಿ ಅಧ್ಯಯನ ಮಾಡಿದವರು. ಅಧಿಕಾರ ವಾಣಿಯಿಂದ ಮಾತನಾಡುವಂತಹ ಒಬ್ಬ ವ್ಯಕ್ತಿ. ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಸೇರಿ ಸುಮಾರು ಹತ್ತು ಹಲವು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ. ಅವರ ನಿಧನದಿಂದ ಒಬ್ಬ ದಿಟ್ಟ ಚಿಂತನೆಯ ಪ್ರಮುಖ ವಿಚಾರವಾದಿ ಸಾಹಿತಿಯನ್ನು ನಾವು ಕಳೆದುಕೊಂಡಿದ್ದೇವೆ ಅಂತ ಹೇಳಿ ನಾನು ಭಾವಿಸುತ್ತಿದ್ದೇನೆ. ಅವರ ಆತ್ಮಕ್ಕೂ ಕೂಡ ಭಗವಂತ ಶಾಂತಿಯನ್ನು ಕೊಡಲೆಂದು ನಾನು ಪ್ರಾರ್ಥಿಸುತ್ತೇನೆ.

ಸನ್ಮಾನ್ಯ ಮಂಚನಹಳ್ಳಿ ಮಹಾದೇವ ಒಬ್ಬ ಯುವ ನಾಯಕ. ಪ್ರಯಶಃ ಇತ್ತೀಚಿನ ದಿನಗಳಲ್ಲಿ ಕೂಡ ನಾನು ಮೈಸೂರು ಭಾಗಕ್ಕೆ ಭೇಟಿ ಕೊಟ್ಟಾಗ ಮಂಚನಹಳ್ಳಿ ಮಹದೇವರವರು ಸಕ್ರೀಯವಾಗಿ ತನ್ನನ್ನು ತಾನು

ಸಮಾಜಸೇವೆಯಲ್ಲಿ, ರಾಜಕಾರಣದಲ್ಲಿ ತೊಡಗಿಸಿಕೊಂಡಿರುವುದನ್ನು ನಾನು ಕಂಡಿದ್ದೇನೆ. ಒಬ್ಬ ಯುವ ನಾಯಕ ಮತ್ತೆ ವಿಧಾನ ಸಭೆಯನ್ನು ಅವರು ಪ್ರವೇಶ ಮಾಡಬೇಕು ಎನ್ನುವಂತಹ ಆಸೆ ಆಕಾಂಕ್ಷೆ ಇತ್ತು. ಜನರಲ್ಲಿ ಕೂಡ ಅವರನ್ನು ಒಬ್ಬ ಶಾಸಕನಾಗಿ ಕಳುಹಿಸಿಕೊಡಬೇಕು ಎನ್ನುವಂತಹ ಭಾವನೆಗಳನ್ನು ಆ ಭಾಗದಲ್ಲಿ ಇದ್ದಿರುವಂಥದ್ದನ್ನು ನಾನು ಕಂಡಿದ್ದೇನೆ. ಇಂತಹ ಒಬ್ಬ ಯುವ ನಾಯಕ ಅಕಾಲಿಕವಾಗಿ ತನ್ನ ಹದಿಹರೆಯದಲ್ಲಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೂ ಶಾಂತಿ ಸಿಗಲಿ ಅಂತ ಹೇಳಿ ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಆರ್.ಎಸ್.ನಡೋಣಿಯವರು ಒಬ್ಬ ಕೃಷಿಕ ಸಮಾಜದಿಂದ ಬಂದವರು. ಶಾಸಕನಾಗಿ ಕೂಡ ಕೃಷಿಕರ ಬಗ್ಗೆ ವಿಶೇಷ ಕಾಳಜಿಯನ್ನು ತೋರಿಸಿ ವಿಧಾನ ಸಭೆಯ ಒಳಗೂ ಹೊರಗೂ ಕೃಷಿಕರ ಬಗ್ಗೆ ತನ್ನ ವಿಚಾರಗಳನ್ನು ಪ್ರತಿಪಾದನೆ ಹೋರಾಟಗಳನ್ನು ಮಾಡಿದಂತಹ ಒಬ್ಬ ಶಾಸಕ ಆರ್.ಎಸ್. ನಡೋಣಿಯವರು. ಅವರೂ ಕೂಡ ನಮ್ಮನ್ನು ಅಗಲಿದ್ದಾರೆ. ಸನ್ಮಾನ್ಯ ಸೋಮಪ್ಪ ಸುವರ್ಣರವರು, ಹಿಂದುಳಿದ ವರ್ಗದ ನಾಯಕರು. ನಮ್ಮದೇ ಅವಿಭಾಜಿತ ಜಿಲ್ಲೆ ಮುಲ್ಕಿಯಿಂದ ಬಂದವರು. ಈಡಿಗ ಸಮಾಜದ ಅಧ್ಯಕ್ಷರಾಗಿ, ಹಿಂದುಳಿದ ಸಮಾಜದ ಏಳಿಗೆಗಾಗಿ, ಅವರ ಹೋರಾಟಗಳನ್ನು ನಾವು ಕಂಡಿದ್ದೇವೆ ಮತ್ತು ಅವರು ಆ ಸಂಘಟನೆಯ ಅಧ್ಯಕ್ಷರಾಗಿ ಹತ್ತು ಹಲವು ವರ್ಷಗಳ ಕಾಲ ಅದರ ಅಧ್ಯಕ್ಷರಾಗಿ ಕೆಲಸ ಮಾಡಿ ಅಲ್ಲಿರುವಂತಹ ನೂರಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿದ್ದಾರೆ. ಇವತ್ತಿನವರೆಗೆ ಆದರ್ಶಪೂರ್ಣವಾಗಿ ಕೆಲಸ ಮಾಡಿದ್ದಾರೆ. ಅವರ ಅಗಲಿಕೆ ಕೂಡ ನಮ್ಮ ಸಮಾಜಕ್ಕೆ ಒಂದು ತುಂಬಲಾರದ ನಷ್ಟವಾಗಿದೆ. ಈ ರೀತಿ ಕಳೆದುಕೊಂಡಂತಹ ಎಲ್ಲ ನಾಯಕರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಆ ದೇವರು ಕೊಡಲಿ ಎಂದು ಹೇಳಿ, ತಾವು ಮಂಡಿಸಿದ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಅಧ್ಯಕ್ಷರು:– ದಯವಿಟ್ಟು ಶಾಸಕರುಗಳು ಅಲ್ಲಲ್ಲಿ ಮಾತನಾಡಬೇಡಿ.

ಶ್ರೀ ಸಿದ್ಧರಾಮಯ್ಯ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಇವತ್ತು ತಾವು ತಂದಿರತಕ್ಕಂತಹ ಸಂತಾಪ ಸೂಚಕ ನಿರ್ಣಯವನ್ನು ನಾನು ಬೆಂಬಲಿಸಿ, ಕಳೆದ ಅಧಿವೇಶನ ಆದ ಮೇಲೆ ಈ ಅಧಿವೇಶನದ ಮಧ್ಯದಲ್ಲಿ ಈ ಮನೆಯ ಸದಸ್ಯರಾಗಿದ್ದವರು ಬೇರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡಿರತಕ್ಕಂತಹವರು ನಮ್ಮನ್ನು ಅಗಲಿದ್ದಾರೆ. ಮುಖ್ಯವಾಗಿ ಎಸ್.ಬಂಗಾರಪ್ಪನವರು. ಬಹಳ ದೀರ್ಘಕಾಲ ಕರ್ನಾಟಕದ ರಾಜಕಾರಣದಲ್ಲಿ ಇದ್ದಂತಹವರು, ಕೆಲವೇ ಜನ ಬೆಂಬಲವಿದ್ದಂತಹ ರಾಜಕಾರಣಿಗಳಲ್ಲಿ ಒಬ್ಬರು. ಮಾಸ್ ಲೀಡರ್ ಅಂತ ನಾವು ಏನು ಕರೆಯುತ್ತೇವೆ, ಆ ಮಾಸ್ ಲೀಡರ್‌ಗಳಲ್ಲಿ ಇವರೂ ಒಬ್ಬರು ಪ್ರಮುಖರು ಎನ್ನುವಂಥದ್ದನ್ನು ನಾವು ನೆನಪು ಮಾಡಿಕೊಳ್ಳಬೇಕಾಗಿದೆ. ಅವರು ವೈಯಕ್ತಿಕವಾಗಿ ಇಡೀ ರಾಜ್ಯದ ಜನರ ಬೆಂಬಲವನ್ನು ಪಡೆದುಕೊಂಡಿದ್ದರು. ಅವರು ಯಾವುದೇ ಪಕ್ಷದಲ್ಲಿ ಇರಲಿ, ಅವರು ರಾಜಕಾರಣ ಪ್ರವೇಶ ಮಾಡಿದ್ದು ಸಮಾಜವಾದಿ ಪಕ್ಷದ ಮೂಲಕ. ಸಮಾಜವಾದಿ ಪಕ್ಷದಲ್ಲಿ ಇದ್ದುಕೊಂಡು ಅನೇಕ ಹೋರಾಟಗಳಲ್ಲಿ ಅವರು ಭಾಗವಹಿಸಿದ್ದರು. ಗೇಣಿದಾರರ ಚಳುವಳಿ, ಕಾಗೋಡು ಸತ್ಯಾಗ್ರಹ ಹೀಗೆ ಗೋಪಾಲಗೌಡರ ಜೊತೆಗೆ ಸೇರಿಕೊಂಡು ಶಿವಮೊಗ್ಗದಲ್ಲಿ ನಡೆದಂತಹ ಅನೇಕ ಚಳುವಳಿಗಳಲ್ಲಿ ಬಂಗಾರಪ್ಪನವರು ಭಾಗವಹಿಸಿದ್ದರು. ಆ ಮೇಲೆ ಸಮಾಜವಾದಿ ಪಕ್ಷ ವಿಭಜನೆಯಾದ ಮೇಲೆ ಸಂಯುಕ್ತ ಸಮಾಜವಾದಿ ಪಕ್ಷದಲ್ಲಿ ಅವರು ಸೇರಿಕೊಂಡಿದ್ದರು. ಲೋಹಿಯಾರವರ ಅನುಯಾಯಿಯಾಗಿ ಮೊದಲನೆಯ ಬಾರಿಗೆ ಎಸ್.ಎಸ್.ಪಿ.ಯಿಂದ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಆಮೇಲೆ ಮತ್ತೆ ಎರಡನೇ ಬಾರಿಗೆ 1972ರಲ್ಲಿ ಕೂಡ ಎಸ್.ಎಸ್.ಪಿ.ಯಿಂದ ಆಯ್ಕೆಯಾಗಿದ್ದರು. ಆಮೇಲೆ ಅಲ್ಲಿ ಭಿನ್ನಾಭಿಪ್ರಾಯ ಬಂದು ಎಸ್.ಎಸ್.ಪಿ. ಬಿಟ್ಟು ಆಗಲೇ ಅವರು ಒಂದು ಹೊಸ ಪಕ್ಷವನ್ನು ಕಟ್ಟಿದರು.

ಶ್ರೀ ಹೆಚ್.ಹಾಲಪ್ಪ:– ಕ್ರಾಂತಿಕಾರಿ ಪಕ್ಷ.

ಶ್ರೀ ಸಿದ್ಧರಾಮಯ್ಯ:– ಕ್ರಾಂತಿಕಾರಿ ಪಕ್ಷ ಕಟ್ಟಿದರು.

ಶ್ರೀ. ಹೆಚ್. ಹಾಲಪ್ಪ:– 1972–73ರಲ್ಲಿ ... ಸ್ವಲ್ಪ ದಿನದ ಮಟ್ಟಿಗೆ ದೇವರಾಜು ಅರಸುರವರ ಕಾಲದಲ್ಲಿ ಕ್ರಾಂತಿಕಾರಿ ಪಕ್ಷ ಕಟ್ಟಿದರು.

ಶ್ರೀ ಸಿದ್ಧರಾಮಯ್ಯ:– ಆಗ ಒಂದು ಪಕ್ಷ ಕಟ್ಟಿದರು ಮತ್ತು ಆ ಕಾಲದಲ್ಲಿ ಮಾನ್ಯ ದೇವರಾಜು ಅರಸುರವರು ಮುಖ್ಯಮಂತ್ರಿಗಳಾಗಿದ್ದರು. ದೇವರಾಜು ಅರಸುರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಸೇರಿದರು. ಕಾಂಗ್ರೆಸ್ ಪಕ್ಷ ಸೇರಿ ಕಾಂಗ್ರೆಸ್ ಪಕ್ಷದಲ್ಲಿ 1977ರಲ್ಲಿ ಮಂತ್ರಿಗಳು ಆಗಿದ್ದರು. ಬಂದೀಖಾನೆ ಮತ್ತು ಗೃಹ ಸಚಿವರಾಗಿ ಕೆಲಸ ಮಾಡಿದ್ದರು. 1978ರಲ್ಲಿ ಗೆದ್ದ ಮೇಲೆ ಲೋಕೋಪಯೋಗಿ ಸಚಿವರಾಗಿ, 1980ರಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಮಾನ್ಯ ಗುಂಡೂರಾವ್‌ನವರು ಮುಖ್ಯಮಂತ್ರಿಗಳಾಗಿದ್ದಾಗ ಆ ಸರ್ಕಾರದಲ್ಲೂ ಕೂಡ ಮಂತ್ರಿಯಾಗಿದ್ದರು. 1982ರಲ್ಲಿ ಕಾಂಗ್ರೆಸ್ ಪಕ್ಷ ಬಿಟ್ಟು ಹೊರಗಡೆ ಬಂದು 'ಕ್ರಾಂತಿ ರಂಗ' ಎನ್ನುವ ಪಕ್ಷ ಕಟ್ಟಿದರು. ಕ್ರಾಂತಿ ರಂಗ ಪಕ್ಷ ಕಟ್ಟಿದ ಮೇಲೆ ಮತ್ತೆ ಅಲ್ಲಿ ಜನತಾದಳ ಮತ್ತು ಅವರ alliance ನಲ್ಲಿ ಹೋರಾಟ ಮಾಡಿದರು. ಆ ಸಂದರ್ಭದಲ್ಲಿ ಮೊದಲನೇ ಬಾರಿಗೆ ಕಾಂಗ್ರೆಸ್ಸೇತರ ಪಕ್ಷ ಅಧಿಕಾರಕ್ಕೆ ಬಂದಿತು. ಅದಾದ ಮೇಲೆ ಮತ್ತೆ ಕಾಂಗ್ರೆಸ್ ಪಕ್ಷ ಸೇರಿದರು. ಕಾಂಗ್ರೆಸ್ ಪಕ್ಷ ಸೇರಿ ಸ್ವಲ್ಪ ದಿನ ವಿರೋಧ ಪಕ್ಷದ ನಾಯಕರಾಗಿಯೂ ಕೂಡ ಕೆಲಸ ಮಾಡಿದರು. ನಾವು ಮೊದಲು ಆ ಕಡೆ ಸರ್ಕಾರದಲ್ಲಿದ್ದಾಗ ಇಲ್ಲಿ ಅವರು ವಿರೋಧ ಪಕ್ಷದಲ್ಲಿ ಕೆಲಸ ಕೂಡ ಮಾಡಿದರು. ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ವಿರೋಧ ಪಕ್ಷದ ನಾಯಕರಾಗಿ, ಮುಖ್ಯಮಂತ್ರಿಯಾಗಿ, ಕೃಷಿ, ಕಂದಾಯ, ಗೃಹ, ಲೋಕೋಪಯೋಗಿ ಇಲಾಖೆ, ಹೀಗೆ ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಮಂತ್ರಿಯಾಗಿ ಕೆಲಸ ಮಾಡಿದರು. ಆದರೆ ಒಂದು ಬಹಳ ಮುಖ್ಯವಾಗಿ ಅವರು ಮಾಡಿದ್ದು ಏನೆಂದರೆ, ಈ ಸರ್ಕಾರಿ ನೌಕರಿಗೆ ಸಂಬಂಧಿಸಿದಂತೆ ಹಳ್ಳಿ ಶಾಲೆಗಳಲ್ಲಿ ಓದಿಕೊಂಡು ಬಂದಂತಹ ಮಕ್ಕಳಿಗೆ ಉದ್ಯೋಗ ಸಿಗುವುದು ಬಹಳ ಕಷ್ಟ ಎಂದು ಹೇಳಿ, ಅವರಿಗೆ 15% ಗ್ರಾಮೀಣ ಕೃಪಾಂಕ ಎಂದು introduce ಮಾಡಿದರು. ಆನಂತರ ಅದು

ಕೋರ್ಟ್‌ಗೆಲ್ಲಾ ಹೋಯಿತು. ಕೋರ್ಟ್‌ನಲ್ಲಿ ತೀರ್ಮಾನವಾಯಿತು. It is a different issue. ಆದರೆ ಮಾಡಿದ್ದು ತುಂಬಾ ಒಳ್ಳೆಯದಾಯಿತು. ಏಕೆಂದರೆ ಹಳ್ಳಿ ಶಾಲೆಗಳಲ್ಲಿ ಮೇಷ್ಟ್ರುಗಳು ಇಲ್ಲದೇ, ಕೊಠಡಿಗಳು ಇಲ್ಲದೇ, ಪ್ರಯೋಗಾಲಯಗಳು ಇಲ್ಲದೇ, ಆಟದ ಮೈದಾನಗಳು ಇಲ್ಲದೇ, ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದಿಕೊಂಡು ಬಂದಂತಹ ಮಕ್ಕಳಿಗೆ ಕೃಪಾಂಕ ಕೊಟ್ಟು ಅವರಿಗೂ ಕೂಡ ಉದ್ಯೋಗ ಸಿಗಬೇಕು, ಅವರೂ ಕೂಡ ಮುಖ್ಯವಾಹಿನಿಗೆ ಬರಬೇಕು, ಅವರಿಗೂ ನ್ಯಾಯ ಸಿಗಬೇಕೆನ್ನುವ ಆಲೋಚನೆ ಇಟ್ಟುಕೊಂಡು ಆ ಬದ್ಧತೆಯಿಂದ ಮಾಡಿದ್ದರಲ್ಲಾ ಅದು ಬಹಳ ಮುಖ್ಯವಾದದ್ದು. ಮುಖ್ಯಮಂತ್ರಿಗಳಾದ ಮೇಲೆ ಆಶ್ರಯ, ಆರಾಧನಾ, ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದಕ್ಕೋಸ್ಕರವಾಗಿ 'ವಿಶ್ವ' ಯೋಜನೆ ಹಾಗೂ ವೃತ್ತಿ ಕೌಶಲ್ಯ ತರಬೇತಿ ಕೊಡುವುದಕ್ಕೋಸ್ಕರವಾಗಿ, ಈಗ ಏನು ಮಾನ್ಯ ಬಚ್ಚೇಗೌಡರು ಉದ್ಯೋಗ ಮೇಳ ಎಂದು ಮಾಡುತ್ತಿದ್ದಾರೆ, ಶುಶ್ರೂಷ ಇಂತಹ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡು, ಬಡವರ್ಗದ ಜನರಿಗೆ ನ್ಯಾಯ ಕೊಡತಕ್ಕಂತಹ, ಅವರಿಗೆ ಸವಲತ್ತುಗಳನ್ನು ಒದಗಿಸುವ ಪ್ರಯತ್ನ ಮಾಡಿದ್ದರು ಎಂದು ಇವತ್ತು ನಾವೆಲ್ಲಾ ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅವರು ಬಹಳ ದಿನಗಳ ಕಾಲ ಮುಖ್ಯಮಂತ್ರಿಗಳಾಗಿರಲಿಲ್ಲ. ಮಾನ್ಯ ಅಧ್ಯಕ್ಷರೆ ನೀವು ಏನು ಹೇಳಿದರೂ ಅವರು ಕೇಳುವುದಿಲ್ಲವಲ್ಲಾ.

ಅಧ್ಯಕ್ಷರು:– ಈಗ ಸಂತಾಪ ಸೂಚನೆ ಪ್ರಸ್ತಾಪವಾಗುತ್ತಿದೆ. ಎಲ್ಲರೂ ಅಲ್ಲಲ್ಲೇ ಮಾತನಾಡುತ್ತಿದ್ದರೆ ಇದಕ್ಕೆ ಏನು ಗಾಂಭೀರ್ಯತೆ ಒದಗಿಸುವುದು?

ಶ್ರೀ ಸಿದ್ಧರಾಮಯ್ಯ:– ಮಾನ್ಯ ಶಂಕರಲಿಂಗೇಗೌಡರೆ, ಕುಳಿತುಕೊಳ್ಳಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಮಾನ್ಯ ಸಿದ್ಧರಾಮಯ್ಯನವರೆ, ನಿಮ್ಮ ಮಾತು ಕೇಳುಸುತ್ತಿಲ್ಲವಲ್ಲ?

ಶ್ರೀ ಸಿದ್ಧರಾಮಯ್ಯ:– ತಾವು ಕುಳಿತುಕೊಂಡರೆ ತಾನೆ ಕೇಳಿಸುವುದು? ಅಲ್ಲಿ ಎಲ್ಲೋ ಮಾತನಾಡುತ್ತಿದ್ದರೆ ಹೇಗೆ? ಈಗ

ಕೇಳಿಸುತ್ತಿದೆಯೇ? ನೋಡಿ ಸಂತಾಪ ಸೂಚನೆ ಮಾಡುತ್ತಿರುವಾಗ ಈ ರೀತಿ ಮಾತನಾಡುತ್ತಿದ್ದರೆ ಹೇಗೆ?

ಅಧ್ಯಕ್ಷರು:– ಮಾನ್ಯ ಶಂಕರಲಿಂಗೇಗೌಡರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:–ಮಾನ್ಯ ಸದಾನಂದಗೌಡರು...

ಶ್ರೀ ಸಿದ್ಧರಾಮಯ್ಯ:– ತಾವು ಮಾನ್ಯ ಸದಾನಂದಗೌಡರಿಗೆ ಅಲ್ಲಿ ಬೈಯ್ದಿದ್ದೀರಿ. ಇಲ್ಲಿ ಏನು ಹೀಗೆ ಹೇಳುತ್ತಿದ್ದೀರಿ? ಸದಾನಂದಗೌಡರಿಗೂ, ರಾಮದಾಸ್‌ರಿಗೂ ಅಷ್ಟೊಂದು ಅಲ್ಲಿ ಬೈಯ್ದಿದ್ದೀರಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:– ನಾನು ಏಕೆ ಬೈಯಲಿ?...

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ಧರಾಮಯ್ಯ:– ಮಾನ್ಯ ಅಧ್ಯಕ್ಷರೆ, ಬಹುಶಃ ಬಂಗಾರಪ್ಪನವರಂತಹ ವ್ಯಕ್ತಿತ್ವ ರಾಜಕೀಯದಲ್ಲಿ ಬೇರೆ ಇನ್ನೊಬ್ಬರ ಸಿಗುವುದು ಕಷ್ಟ ಎನಿಸುತ್ತದೆ. ಇನ್ನೊಬ್ಬ ಬಂಗಾರಪ್ಪನವರನ್ನು ಕರ್ನಾಟಕ ರಾಜಕಾರಣದಲ್ಲಿ ನೋಡುವುದು ಬಹಳ ಕಷ್ಟ. ಬಹಳ ಸ್ವಾಭಿಮಾನಿ ರಾಜಕಾರಣಿ. ಸ್ವಾಭಿಮಾನಕ್ಕೆ ಇನ್ನೊಂದು ಹೆಸರು ಎಂದರೆ ಬಂಗಾರಪ್ಪ. ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಯಾವತ್ತೂ ಕೂಡ ಅದನ್ನು ಸಹಿಸಿಕೊಂಡು ಇರುತ್ತಿರಲಿಲ್ಲ. ಅದು ಎಷ್ಟೇ ಅಧಿಕಾರ ಇರಲಿ, ಯಾವುದೇ ರಾಜಕೀಯ ಪಕ್ಷ ಇರಲಿ, ಅಲ್ಲಿಂದ ಬಂಡಾಯ ಮಾಡುವಂತಹ ಒಂದು ಪ್ರವೃತ್ತಿಯನ್ನು ಮೊದಲಿನಿಂದಲೂ ಬೆಳೆಸಿಕೊಂಡು ಬಂದಿದ್ದರು. ಯಾವುದೇ ಪಕ್ಷಕ್ಕೆ ಹೋಗಲಿ ಅಲ್ಲಿ ಅವರಿಗೆ leadership ಇರಬೇಕಾಗಿತ್ತು. ಅದಕ್ಕೆ ಅವರು ಒಂದೊಂದು ಬಾರಿ 'ಯಾವಾಗಲೂ ನಾನು ಇಂಜಿನ್ ಆಗಿರುತ್ತೇನೆ ಹೊರತು ಬೋಗಿಯಾಗುವುದಿಲ್ಲ' ಎಂದು ಹೇಳುತ್ತಿದ್ದರು. ನಾನು ಯಾವತ್ತೂ ಬೋಗಿಯಾಗುವುದಿಲ್ಲ ನಾನು ಎಲ್ಲೇ ಇದ್ದರೂ ಇಂಜಿನ್ ಆಗಿರುತ್ತೇನೆ ಎಂದು ಹೇಳುತ್ತಿದ್ದರು. ಆದರೆ ಅವರು ಅಷ್ಟು ವರ್ಷಗಳ ಕಾಲ ರಾಜಕಾರಣದಲ್ಲಿ ಹಾಗೆಯೇ ಮಾಡಿ ತೋರಿಸಿದರು.

ರಾಜಕಾರಣದಲ್ಲಿ ಅವರು ನಾಯಕರಾಗಿಯೇ ಉಳಿದಿದ್ದರು. ಆ ನಾಯಕತ್ವದ ಗುಣವನ್ನು ಸ್ವಾಭಾವಿಕವಾಗಿ ಮೈಗೂಡಿಸಿಕೊಂಡಿದ್ದಂತಹ ಒಬ್ಬ ನಾಯಕ ಎನ್ನತಕ್ಕದ್ದನ್ನು ನಾವು ಇವತ್ತು ಮನಗಾಣಬೇಕು. ಪ್ರತಿಯೊಬ್ಬ ರಾಜಕಾರಣಿಗಳಲ್ಲಿಯೂ ಕೂಡ ಸ್ವಾಭಿಮಾನ ಇರಬೇಕು. ಸ್ವಾಭಿಮಾನ ಇಲ್ಲದೇ ಇದ್ದ ಮೇಲೆ ರಾಜಕಾರಣದಲ್ಲಿ ಇರಬಾರದು. ಸ್ವಾಭಿಮಾನ ಬಿಟ್ಟು, ಮಾನ-ಮರ್ಯಾದೆ ಬಿಟ್ಟು, ರಾಜಕಾರಣ ಮಾಡುವುದಕ್ಕೆ ಹೋಗಬಾರದು. ಸ್ವಾಭಿಮಾನದಿಂದ ರಾಜಕಾರಣ ಮಾಡಬೇಕಾದದ್ದು ಪ್ರತಿಯೊಬ್ಬ ರಾಜಕಾರಣಿಯ ಮೂಲಭೂತ ಲಕ್ಷಣ. ಅದು ಇರಬೇಕು. ಅದು ಎಲ್ಲರಿಗೂ ಕೂಡ ಅನುಕರಣೀಯ. ಬಂಗಾರಪ್ಪನವರು ಪ್ರತಿಯೊಬ್ಬರಿಗೂ ಸ್ವಾಭಿಮಾನದ ದೃಷ್ಟಿಯಿಂದ ಅನುಕರಣೀಯರಾಗಿದ್ದರು ಎಂದು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲು ಬಯಸುತ್ತಿದ್ದೇನೆ. ಅವರು ಸಾಹಿತ್ಯ ಮತ್ತು ಕಲೆ, ಸಂಗೀತ ಕ್ಷೇತ್ರಗಳಲ್ಲಿ ಅಪಾರವಾದಂತಹ ಆಸಕ್ತಿ ಹೊಂದಿದ್ದರು. ಹಿಂದೂಸ್ಥಾನಿ ಸಂಗೀತದಲ್ಲಿ ಸ್ವತಃ ಅವರೇ ಹಾಡುತ್ತಿದ್ದರು. ಇದ್ದಕ್ಕಿದ್ದ ಹಾಗೆ ಅವರಿಗೆ ಪ್ರೇರಣೆ ಬಂದು ಅವರೇ ಹಾಡುತ್ತಿದ್ದರು. ಹಿಂದೆ ಒಂದು ಬಾರಿ ಸಿನಿಮಾದಲ್ಲಿಯೂ ನಟಿಸಿದ್ದರು. ಚಿತ್ರ ಬಿಡುಗಡೆ ಆಗಲಿಲ್ಲ ಅಷ್ಟೇ. ಆದರೆ ಅವರು ಸಿನಿಮಾದಲ್ಲಿ ನಟಿಸಿದ್ದರು. ಪಾಪ, ಕೊನೆಗೂ ಅದು ಬಿಡುಗಡೆಯಾಗಲೇ ಇಲ್ಲ. ಹಾಗಾಗಿ ಅವರಿಗೆ ಕಲಾಭಿರುಚಿ, ಸಂಗೀತ, ಸಾಹಿತ್ಯ, ಕ್ರೀಡೆ ಇವೆಲ್ಲಾ ಕ್ಷೇತ್ರಗಳಲ್ಲಿಯೂ ಅಭಿರುಚಿಗಳು ಇದ್ದವು. ಪ್ರತಿ ದಿನ shuttle ಆಡುವುದಕ್ಕೆ ಹೋಗುತ್ತಿದ್ದರು. ಮಾನ್ಯ ಬಚ್ಚೇಗೌಡರೆ, ತಾವು ಆಡುತ್ತೀರಲ್ಲವೇ? ಕೊನೆಯವರೆಗೂ ತಮ್ಮ ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಂಡಿದ್ದರು. ಇನ್ನೂ ಸ್ವಲ್ಪ ದಿನ ಅವರು ರಾಜಕಾರಣದಲ್ಲಿರಬೇಕಾಗಿತ್ತು ಎಂದು ನನಗೆ ಅನಿಸುತ್ತದೆ. ಅದು ಏನೇ ಆಗಲಿ, ಕರ್ನಾಟಕ ಒಬ್ಬ ವರ್ಣರಂಜಿತ ರಾಜಕಾರಣಿ, ಅಪರೂಪದ ರಾಜಕಾರಣಿ, ವಿಶೇಷವಾದಂತಹ ವ್ಯಕ್ತಿತ್ವ ಇದ್ದಂತಹ ರಾಜಕಾರಣಿ, ಜನ ಬೆಂಬಲ, 'mass leader' ಇದ್ದಂತಹ ರಾಜಕಾರಣಿಯನ್ನು ಕಳೆದುಕೊಂಡಿದೆ. ಅವರು ಶಾಸಕರಾಗಿ ಇದ್ದರು ಮತ್ತೆ ಅಧಿಕಾರವೆಲ್ಲಾ

ಸಿಕ್ಕಿದ್ದು ಕಾಂಗ್ರೆಸ್‌ನಿಂದಲೇ ಅವರು ಯಾವ ಪಾರ್ಟಿಗೆ ಹೋಗಿದ್ದರೂ ಕೂಡ ಅವರಿಗೆ ಅಧಿಕಾರ ಇದ್ದದ್ದು ಇಲ್ಲಿಯೇ, ಅವರು ಮುಖ್ಯಮಂತ್ರಿಯಾಗಿದ್ದೂ ಇಲ್ಲಿಯೇ, ಮಂತ್ರಿಯಾದದ್ದು ಇಲ್ಲಿಯೇ, ವಿರೋಧ ಪಕ್ಷದ ನಾಯಕರಾಗಿದ್ದಿದ್ದು ಇಲ್ಲೇ, ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದೂ ಇಲ್ಲಿಯೇ. ಆವರು ಬಹಳ ದೀರ್ಘ ಕಾಲದಿಂದಲೂ ಕಾಂಗ್ರೆಸ್‌ನಲ್ಲಿ ಇದ್ದುದ್ದನ್ನು ನಾವು ನೋಡುತ್ತೇವೆ. ಕೊನೆಯಲ್ಲಿ ಅವರು ಬಿ.ಜೆ.ಪಿ. ಪಕ್ಷಕ್ಕೆ ಹೊರಟುಹೋದರು.

ಶ್ರೀ ಬಂಗಾರಪ್ಪನವರು 1972ರಲ್ಲಿ Socialist Party ಯಲ್ಲಿದ್ದಾಗ ನಾನು ಆಗ ತಾನೇ ಆ ಪಾರ್ಟಿಗೆ ಸೇರಿದ್ದೆ. ಅವರು ಇನ್ನು ಸ್ವಲ್ಪ ದಿನ ಬದುಕಿದ್ದರೆ ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಬರಬೇಕೆಂದು ಮನಸ್ಸು ಮಾಡಿದ್ದರು. ನಾನು ಆ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಬಿಜೆಪಿಗೆ ಹೋದರೂ ಸಹ ಲೋಕಸಭೆ ಚುನಾವಣೆಯಲ್ಲಿ ಗೆದ್ದರು. ಬಿಜೆಪಿಗೆ ರಾಜೀನಾಮೆಯನ್ನು ಕೊಟ್ಟು ಶ್ರೀ ಮುಲಾಯಮ್ ಸಿಂಗ್ ಯಾದವ್‌ರವರ ಸಮಾಜವಾದಿ ಪಕ್ಷವನ್ನು ಕಟ್ಟಿದರು. ಆ ಪಕ್ಷದ ಗುರುತಿನ ಮೇಲೂ ಸಹ ಉಪ ಚುನಾವಣೆಯಲ್ಲಿ ಗೆದ್ದರು. ಅವರು ಯಾವುದೇ ಪಕ್ಷಕ್ಕೆ ಹೋದರೂ ಕೂಡ ಚುನಾವಣೆಯಲ್ಲಿ ಗೆಲ್ಲುತ್ತಿದ್ದುದರಿಂದ ಅವರನ್ನು **"ಸೋಲಿಲ್ಲದ ಸರದಾರ"** ಎಂದು ಕರೆಯುತ್ತಿದ್ದರು. ಆ ಜನರ ಸಮೂಹದಿಂದ ಬಂದಿರುವಂತಹ ನಾಯಕತ್ವ ಇದೆಯಲ್ಲಾ, ಆ ಕಾರಣದಿಂದಾಗಿ ಅವರು ಎಲ್ಲಾ ಕಡೆಯಿಂದಲೂ ನಾಯಕರಾಗಿ ಇದ್ದರು. ನಾವೆಲ್ಲರೂ ಇವತ್ತು ರಾಜಕಾರಣದಲ್ಲಿ ಅವರ ಸ್ವಾಭಿಮಾನವನ್ನು ನೋಡಬೇಕಾಗಿದೆ. ಅವರಲ್ಲಿ ಬಂಡಾಯದ ಪ್ರವೃತ್ರಿ ಇತ್ತು. ಅವರಿಗೆ ಬಡವರ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ ಕಳಕಳಿ ಇತ್ತು. ಅದಕ್ಕೆ ಬದ್ಧರಾಗಿ ಅವರು ಕೊನೆಯವರೆಗೂ ಕೂಡ ಈ ರಾಜ್ಯದಲ್ಲಿ ಸಮಾಜ ಸೇವೆಯನ್ನು, ಜನರ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದರು. ಅವರ ಸಾವಿನಿಂದ ಅಪಾರವಾದಂತಹ ನಷ್ಟ ಕರ್ನಾಟಕ ರಾಜ್ಯಕ್ಕೆ, ಕರ್ನಾಟಕದ ರಾಜಕಾರಣಕ್ಕೆ ಆಗಿದೆ ಎಂದು ನಾನು ಈ ಸಂದರ್ಭದಲ್ಲಿ

ಹೇಳಿ ನೆನಪು ಮಾಡಿಕೊಳ್ಳುತ್ತಾ ಅವರ ಆತ್ಮಕ್ಕೆ ಚಿರಶಾಂತಿಯು ದೊರಕಲೆಂದು ಹೇಳಿ ಪ್ರಾರ್ಥನೆಯನ್ನು ಮಾಡುತ್ತೇನೆ.

ಮಾಜಿ ಶಾಸಕರಾದ ದಿ:ಮಹದೇವರವರಿಗೆ **"ಮಂಚನಹಳ್ಳಿ ಮಹದೇವ"** ಎಂದು ಕರೆಯುತ್ತಿದ್ದರು. ಏಕೆಂದರೆ ಅವರ ಊರಾದ ಮಂಚನಹಳ್ಳಿಯು ಕೆ.ಆರ್.ನಗರ ತಾಲ್ಲೂಕಿಗೆ ಬರುತ್ತದೆ. ಅವರು ಮಂಚನಹಳ್ಳಿಯಲ್ಲಿ ಇದ್ದುದರಿಂದ ಅವರಿಗೆ ಮಂಚನಹಳ್ಳಿ ಮಹದೇವ ಎಂದು ಕರೆಯುತ್ತಾರೆ. ಅವರು ನನಗೆ ಬಹಳ ಆತ್ಮೀಯರಾಗಿದ್ದವರು. ನನ್ನ ರಾಜಕೀಯ ಜೀವನದಲ್ಲಿ ನನ್ನ ಕಷ್ಟಸುಖದಲ್ಲಿ ನನಗೆ ಭಾಗಿಯಾಗಿದ್ದಂತಹವರು. ಅವರು ನನ್ನ ಜೊತೆಯಲ್ಲಿದ್ದವರಾಗಿದ್ದಾರೆ, ರಾಜಕೀಯವಾಗಿ ನನಗೆ ಅವರ ಸಾವಿನಿಂದ ವೈಯಕ್ತಿಕವಾಗಿ ನಷ್ಟವಾಗಿದೆ. ಅವರು ಒಂದು ಟರ್ಮ್ ಶಾಸಕರಾಗಿ ಅವಧಿಯನ್ನು ಮುಗಿಸುವುದಕ್ಕಾಗಲಿಲ್ಲ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಚುನಾವಣೆಗೆ ನಿಲ್ಲಬೇಕೆಂದು ಎಲ್ಲಾ ಪ್ರಯತ್ನಗಳನ್ನು ಸಹ ಮಾಡುತ್ತಿದ್ದರು. ಅವರು ಅದೇ ಕ್ಷೇತ್ರದಲ್ಲಿ ಉಳಿದುಕೊಂಡಿದ್ದರು. ಅವರು ಶಾಸಕರಲ್ಲದೇ ಹೋದರೂ ಕೂಡ ದಿನನಿತ್ಯ ಜನರ ಕಷ್ಟಸುಖಗಳಲ್ಲಿ ಸ್ಪಂದಿಸಿಕೊಂಡು ಅವರ ಕಷ್ಟಸುಖಗಳನ್ನು ಆಲಿಸಿ ಅದನ್ನು ಬಗೆಹರಿಸತಕ್ಕಂತಹ ಪ್ರಯತ್ನವನ್ನು ಮಾಡುತ್ತಿದ್ದರು. ಶ್ರೀಯುತರು ಅಕಾಲಿಕ ಮರಣಕ್ಕೆ 46–47ನೇ ವಯಸ್ಸಿನಲ್ಲಿ ತುತ್ತಾದರು. ಅವರು ಇನ್ನೂ ಬಹಳ ದೀರ್ಘಕಾಲ ಇರಬೇಕಾಗಿತ್ತು. ಶ್ರೀಯುತರು ನಮ್ಮನ್ನು ಅಗಲಿದ್ದಾರೆ. ಅವರ ಅಗಲಿಕೆಯಿಂದ ನನಗೆ ವೈಯಕ್ತಿಕವಾಗಿ ನಷ್ಟವಾಗಿದೆ, ನಮ್ಮ ಪಕ್ಷಕ್ಕೆ ನಷ್ಟವಾಗಿದೆ, ಸಮಾಜಕ್ಕೂ ಕೂಡ ನಷ್ಟವಾಗಿದೆ. ಅವರ ಆತ್ಮಕ್ಕೆ ಅವರ ಕುಟುಂಬದವರಿಗೆ ಅವರ ಸಾವಿನಿಂದ ಆಗಿರುವಂತಹ ದುಃಖವನ್ನು ಭರಿಸುವಂತಹ ಶಕ್ತಿ ಕೊಡಲಿ, ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲಿ ಎಂದು ನಾನು ಈ ಸಂದರ್ಭದಲ್ಲಿ ಅವರನ್ನು ಸ್ಮರಿಸಿಕೊಳ್ಳುತ್ತೇನೆ.

ಶ್ರೀ ರಾಮಾ ಸಿದ್ದಲಿಂಗ ನಡೋಣಿಯವರು 1978ರಲ್ಲಿ ರಾಯಭಾಗ ಕ್ಷೇತ್ರದಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು. ಆಗ ನಾನು

ಶಾಸಕನಾಗಿರಲಿಲ್ಲ. ನೀವೆಲ್ಲರೂ ಆಗ ಇದ್ದಿರಿ. ಶ್ರೀಯುತರು ಕೃಷಿಕ ಸಮಾಜದಿಂದ ಬಂದು ಅವರು ಕೃಷಿಕರ ಬಗ್ಗೆ ಅಪಾರವಾದಂತಹ ಕಾಳಜಿಯನ್ನು ಇಟ್ಟುಕೊಂಡಿದ್ದರು. ಅವರೂ ಕೂಡ ನಮ್ಮನ್ನು ಅಗಲಿದ್ದಾರೆ.

ಶ್ರೀ ಸೋಮಪ್ಪ ಸುವರ್ಣ ಅವರು ಮಂಗಳೂರು ಜಿಲ್ಲೆಯವರಾಗಿದ್ದಾರೆ. ಅವರೂ ಕೂಡ 1989ರಲ್ಲಿ ಶಾಸಕರಾಗಿದ್ದವರು. ಅವರು ಬಿಲ್ಲವ ಸಮಾಜದ ಅಧ್ಯಕ್ಷರಾಗಿ, ಶಿಕ್ಷಣ ಕ್ಷೇತ್ರದಲ್ಲಿ ಕೆಲಸವನ್ನು ಮಾಡಿದ್ದಾರೆ. ಬಡವರ್ಗದವರು, ಹಿಂದುಳಿದ ವರ್ಗದವರು, ಸಾಮಾಜಿಕ ನ್ಯಾಯದಿಂದ ವಂಚಿತರಾದಂತಹವರ ಪರವಾಗಿ ಕೆಲಸವನ್ನು ಮಾಡುತ್ತಿದ್ದರು. ಅವರು ಕೂಡ ನಮ್ಮನ್ನು ಅಗಲಿದ್ದಾರೆ.

ಶ್ರೀ ಎಲ್.ಬಸವರಾಜು ಇವರು ಸಾಹಿತಿಗಳು, ಶ್ರೀಯುತರು ಕೋಲಾರ ಜಿಲ್ಲೆಯವರಾಗಿದ್ದು, ಮೈಸೂರು ಯೂನಿವರ್ಸಿಟಿಯಲ್ಲಿ ಸ್ನಾತಕೋತ್ತರ ವಿಭಾಗದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸವನ್ನು ಮಾಡಿದ್ದಾರೆ. ಇವರು ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾದಂತಹ ಕೆಲಸವನ್ನು ಮಾಡಿದ್ದಾರೆ. ಶ್ರೀಯುತರು ದೊಡ್ಡ ಸಂಶೋಧಕರಾಗಿದ್ದರು, ಇವರು ಬಹಳ ಸಂಶೋಧನೆಗಳನ್ನು ಮಾಡಿದ್ದಾರೆ. ಇವರು ಅನೇಕ ಕೃತಿಗಳನ್ನು ರಚನೆ ಮಾಡಿದ್ದರು. ಅಖಿಲ ಭಾರತ 75ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು ದೀರ್ಘಕಾಲ ಸಾಹಿತ್ಯ ಲೋಕದಲ್ಲಿದ್ದು ಅವರದೇ ಆದಂತಹ ಒಂದು ವರ್ಚಸ್ಸನ್ನು ಸಾಹಿತ್ಯ ಕ್ಷೇತ್ರದಲ್ಲಿ ಬಿಟ್ಟುಹೋಗಿದ್ದಾರೆ. ಶ್ರೀಯುತರು ಬರೆದಿರುವಂತಹ ಅನೇಕ ಗ್ರಂಥಗಳು ಕೂಡ ಸಮಾಜಕ್ಕೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಬಹಳ ಉಪಯುಕ್ತವಾದಂತಹ ಸಂಶೋಧನಾ ಗ್ರಂಥಗಳನ್ನು ಕೊಟ್ಟಿದ್ದಾರೆ. ಇವರೂ ಕೂಡ ನಮ್ಮನ್ನು ಇವತ್ತು ಅಗಲಿದ್ದಾರೆ. ಅವರಿಗೆ ಅನೇಕ ಪ್ರಶಸ್ತಿಗಳು ಕೂಡ ದೊರಕಿದೆ. ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಹೀಗೆ ಅನೇಕ ಪ್ರಶಸ್ತಿಗಳು ಅವರಿಗೆ ದೊರಕಿವೆ. ಅವರು ದೊಡ್ಡ ಮೇಧಾವಿ, ದೊಡ್ಡ ವ್ಯಕ್ತಿತ್ವವನ್ನು ಇಟ್ಟುಕೊಂಡಿದ್ದಂತಹ ಸಾಹಿತಿಗಳಾಗಿದ್ದರು. ಅವರನ್ನು

ಸಹ ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರುಗಳ ಆತ್ಮಕ್ಕೆ ಶಾಂತಿ ಸಿಗಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆಯನ್ನು ಮಾಡಿ ಇವತ್ತು ತಾವು ಏನು ಇವರೆಲ್ಲರ ಬಗ್ಗೆ ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ ಅದನ್ನು ನಾನು ಬೆಂಬಲಿಸಿ ಅವರ ಆತ್ಮಕ್ಕೆ ಮತ್ತು ಕುಟುಂಬದವರಿಗೆ ಶಕ್ತಿಬರಲಿ ಎಂದು ಪ್ರಾರ್ಥನೆ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ):- ಸನ್ಮಾನ್ಯ ಅಧ್ಯಕ್ಷರೆ, ಸಮಾಜವಾದಿ ಪಕ್ಷದ ನೇತಾರರು, ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಬಂಗಾರಪ್ಪನವರು ಮಾಜಿ ಸದಸ್ಯರಾದಂತಹ ಶ್ರೀ ಮಂಚನಹಳ್ಳಿ ಮಹದೇವ, ರಾಮಾ ಸಿದ್ದಲಿಂಗ ನಡೋಣಿ, ಸೋಮಪ್ಪ ಸುವರ್ಣ ಹಾಗೂ ಖ್ಯಾತ ಸಾಹಿತಿ ಎಲ್. ಬಸವರಾಜುರವರುಗಳು ನಿಧನಹೊಂದಿದ್ದಾರೆ. ತಾವು ಏನು ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ, ಅದಕ್ಕೆ ನಾನು ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಶ್ರೀ. ಎಸ್.ಬಂಗಾರಪ್ಪನವರು 1933ರಲ್ಲಿ ಅಕ್ಟೋಬರ್ 27ರಂದು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಕುಬಟೂರಿನಲ್ಲಿ ಜನಿಸಿದ್ದು, ಅವರು ಕಾನೂನು ಪದವೀಧರರಾಗಿದ್ದಾರೆ. ಡಿಪ್ಲೋಮೋ ಇನ್ ಸೋಷಿಯಲ್ ಸೈನ್ಸ್ ವ್ಯಾಸಂಗ ಮಾಡಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದು ಮತ್ತು ನ್ಯಾಯವಾದಿಯಾಗಿದ್ದರು. ಶ್ರೀಯುತರು ಸಮಾಜವಾದಿ ಚಿಂತಕರಾಗಿದ್ದರು. 1962ರಲ್ಲಿ ಪ್ರಜಾ ಸೋಷಿಯಲಿಸ್ಟ್ ಪಕ್ಷಕ್ಕೆ ಸೇರ್ಪಡೆಗೊಳ್ಳುವ ಮೂಲಕ ರಾಜಕೀಯ ಪ್ರವೇಶವನ್ನು ಮಾಡಿ 1967ರಿಂದ ಸತತವಾಗಿ 1967, 1972 ಸಂಯುಕ್ತ ಸಮಾಜವಾದಿ ಪಕ್ಷದಿಂದ ಹಾಗೂ 6,7,8,9 ಸತತವಾಗಿ ವಿಧಾನ ಸಭೆಗೆ ಕಾಂಗ್ರೆಸ್ ಪಕ್ಷದಿಂದ ಮತ್ತು ಕ್ರಾಂತಿರಂಗ ಪಕ್ಷದಿಂದ ಆಯ್ಕೆಯಾಗಿ ಈ ರಾಜ್ಯದಲ್ಲಿ ಬಡವರ ಬಗ್ಗೆ, ದೀನದಲಿತರ ಬಗ್ಗೆ ಅವರದೇ ಆದಂತಹ ಒಂದು ಚಿಂತನೆ ಇತ್ತು. ಶ್ರೀಯುತರು ರಾಜಕೀಯ ಜೀವನದಲ್ಲಿ ಸಮಾಜವಾದಿ ಪಕ್ಷದ ಶ್ರೀ ಗೋಪಾಲಗೌಡರ ಹಿಂದೆ ಬಂದಂತಹ ಒಬ್ಬ ರಾಜಕಾರಣಿಯಾಗಿದ್ದರು. ಅವರು ಜೀವನದ ಉದ್ದಕ್ಕೂ ಹೋರಾಟವನ್ನು ಮಾಡಿಕೊಂಡು

ಬಂದವರಾಗಿದ್ದಾರೆ. ಅವರು ವಿಧಾನಸಭೆ ಇರಬಹುದು, ಲೋಕಸಭೆ ಚುನಾವಣೆಗೆ ಆಯ್ಕೆಯಾಗಿದ್ದಂತಹ ಸಂದರ್ಭ ಇರಬಹುದು, ಅವರು ಅವರದೇ ಆದಂತಹ ಹೋರಾಟವನ್ನು ಮಾಡಿಕೊಂಡು ಬಂದವರಾಗಿದ್ದಾರೆ. ಅವರು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಕಳಶಪ್ರಾಯರಾಗಿದ್ದರು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರು 1977 ರಲ್ಲಿ ರಾಜ್ಯದ ಗೃಹಸಚಿವರಾಗಿ, ರಾಜ್ಯ ಸಚಿವರಾಗಿ, ಬಂದೀಖಾನೆ ಸಚಿವರಾಗಿ, 1978–79ರಲ್ಲಿ ಲೋಕೋಪಯೋಗಿ ಸಚಿವರಾಗಿ 1980–81ರಲ್ಲಿ ಕಂದಾಯ ಮತ್ತು ಕೃಷಿ ಸಚಿವರಾಗಿ, 1985–87ರವರೆಗೆ ವಿಧಾನಸಭೆಯ ವಿರೋಧಪಕ್ಷದ ನಾಯಕರಾಗಿ, 1989–90ರವರೆಗೆ ಕೃಷಿ ಮತ್ತು ತೋಟಗಾರಿಕಾ ಸಚಿವರಾಗಿ ಹಾಗೂ 1990–92ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಆರಾಧನಾ ಸ್ಕೀಮ್ ಇರಬಹುದು, ಹಲವಾರು ಯೋಜನೆಗಳನ್ನು ಮಾಡಿದ್ದಾರೆ. ಗ್ರಾಮೀಣ ಕೃಪಾಂಕ ಇರಬಹುದು, ಆಶ್ರಯ ಯೋಜನೆ ಇರಬಹುದು, ಇದನ್ನು ಮಾಡಿದ ಒಬ್ಬ ರಾಜಕಾರಣಿ ಎಂದರೆ ಶ್ರೀ.ಬಂಗಾರಪ್ಪನವರು ಎಂದು ಹೇಳಬೇಕಾಗುತ್ತದೆ. ಇದಲ್ಲದೆ ಅವರು ಲೋಕಸಭೆಗೆ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿ ನಂತರ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆಯನ್ನು ಕೊಟ್ಟು ಮತ್ತೆ ಸಮಾಜವಾದಿ ಪಾರ್ಟಿಯಿಂದ ಚುನಾವಣೆಗೆ ನಿಂತು ಒಂದು ರಾಜಕೀಯ ತತ್ವ ಮತ್ತು ಸಿದ್ಧಾಂತವನ್ನು ಮಾಡಿದಂತಹ ಒಬ್ಬ ವ್ಯಕ್ತಿಯಾಗಿದ್ದರು. ಇದರ ಜೊತೆಗೆ ಇವತ್ತು ಏನಾದರೂ ಈ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಬೇಕಾದರೆ ಅದಕ್ಕೆ ಶ್ರೀ ಎಸ್.ಬಂಗಾರಪ್ಪನವರೇ ಕಾರಣರಾಗಿದ್ದಾರೆ. 2004–05ರಲ್ಲಿ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಬಿಜೆಪಿ ಪಕ್ಷಕ್ಕೆ ಸೇರಿ ಅವತ್ತು ಆ ಭಾಗದಲ್ಲಿ ಅಂದರೆ ಶಿವಮೊಗ್ಗ ಜಿಲ್ಲೆ ಇರಬಹುದು, ಉತ್ತರ ಕನ್ನಡ ಜಿಲ್ಲೆ ಇರಬಹುದು, ಇವತ್ತು ರಾಜ್ಯದಲ್ಲಿ ಬಿ.ಜೆ.ಪಿ. ಪಕ್ಷವು ಅಧಿಕಾರಕ್ಕೆ ಬರಬೇಕಾದರೆ ಶ್ರೀಯುತರು ಕಾರಣರಾಗಿದ್ದಾರೆ. ಇದನ್ನು ಈ ಸಂದರ್ಭದಲ್ಲಿ ನಾವು ನೆನೆಯಬೇಕು. ಏಕೆಂದರೆ ಅವರ ಬಗ್ಗೆ ಎಷ್ಟು ಹೇಳಿದರೂ ಸಾಲದು. ರಾಜ್ಯದ ಹಿಂದುಳಿದ ವರ್ಗದ ನೇತಾರರಾದ

ಬಂಗಾರಪ್ಪನವರು ಈ ರಾಜ್ಯದ ರಾಜಕಾರಣದಲ್ಲಿ ಅವರದೇ ಆದಂಥ ಒಂದು ಕೊಡುಗೆಯನ್ನು ಕೊಟ್ಟಿದ್ದಾರೆಂದು ಈ ಸಂದರ್ಭದಲ್ಲಿ ಹೇಳಿ, ಅವರ ಕುಟುಂಬವರ್ಗಕ್ಕೆ ಅವರ ಅಗಲಿಕೆಯಿಂದ ಆಗಿರುವ ನಷ್ಟ, ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹಾರೈಸುತ್ತೇನೆ. ಶ್ರೀ ಮಹದೇವ್‌ರವರು ನನ್ನ ಆತ್ಮೀಯ ಗೆಳೆಯರಾಗಿದ್ದರು. ಅವರು ನಮ್ಮ ಪಕ್ಕದ ತಾಲ್ಲೂಕು ಆದ ಕೃಷ್ಣರಾಜನಗರ ತಾಲ್ಲೂಕಿನವರು.ಅವರು 2004-05ರವರೆಗೆ ನಮ್ಮ ಜೊತೆಯಲ್ಲಿ ವಿಧಾನಸಭೆ ಸದಸ್ಯರಾಗಿದ್ದರು. ಒಳ್ಳೆಯ ಆತ್ಮೀಯ ಗೆಳೆಯರಾಗಿದ್ದರು. ಅವರೊಬ್ಬ ಪ್ರಾಮಾಣಿಕವಾದಂಥ ರಾಜಕಾರಣಿ. ಅವರು ಈ ವಯಸ್ಸಿಗೆ ನಿಧನರಾಗಿರುವುದು ಬಹಳ ದುಃಖದ ಸಂಗತಿ. ಅವರ ಕುಟುಂಬಕ್ಕೆ ಅವರ ಅಗಲಿಕೆಯಿಂದ ಆಗಿರುವ ದುಃಖವನ್ನು ಭರಿಸುವಂಥ ಶಕ್ತಿ ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಶ್ರೀ ರಾಮಾ ಸಿದ್ದಲಿಂಗ ನಡೋಣಿಯವರು 1943 ಮಾರ್ಚ್ 20 ರಂದು ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕು ಹಾರುಗೇರಿಯಲ್ಲಿ ಜನಿಸಿದ್ದರು. ಅವರು 1978ರಲ್ಲಿ ಜನತಾಪಕ್ಷದಿಂದ ರಾಯಭಾಗ ಕ್ಷೇತ್ರದಿಂದ 6ನೇ ವಿಧಾನಸಭೆಗೆ ಆಯ್ಕೆಗೊಂಡು ಸೇವೇ ಸಲ್ಲಿಸಿರುತ್ತಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರುತ್ತೇನೆ. ಅವರೊಂದಿಗೆ ಶ್ರೀ ಸೋಮಪ್ಪ ಸುವರ್ಣರವರಿಗೆ, ಸಾಹಿತಿಗಳಾದ ಎಲ್. ಬಸವರಾಜು ಇವರುಗಳ ಆತ್ಮಕ್ಕೆ ದೇವರು ಶಾಂತಿ ಕೊಡಲಿ ಎಂದು ಕೇಳಿ, ನನಗೆ ಈ ಸಂತಾಪ ಸೂಚನೆಯಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ.ಶ್ರೀನಿವಾಸ್ ಪ್ರಸಾದ್ (ನಂಜನಗೂಡು):- ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಅಗಲಿದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು, ಮಾಜಿ ಶಾಸಕರುಗಳಾದ ಶ್ರೀ ಮಹದೇವ್, ಶ್ರೀ ರಾಮಾ ಸಿದ್ದಲಿಂಗ ನಡೋಣಿ, ಶ್ರೀ ಸೋಮಪ್ಪ ಸುವರ್ಣರ ಜೊತೆಗೆ ಸಾಹಿತಿಗಳಾದಂಥ ಎಲ್.ಬಸವರಾಜುರವರ ನಿಧನಕ್ಕೆ ತಾವು ಈಗಾಗಲೇ ಸಂತಾಪವನ್ನು ಸೂಚಿಸಿ ಸಂತಾಪ ಸೂಚನೆ ನಿರ್ಣಯವನ್ನು ಕೂಡ

ಮಂಡಿಸಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಇವರ ಬಗ್ಗೆ ಮಾತನಾಡುತ್ತಾ ತಮ್ಮ ಸಂತಾಪವನ್ನು ಕೂಡ ವ್ಯಕ್ತಪಡಿಸಿದ್ದಾರೆ. ದಿವಂಗತ ಬಂಗಾರಪ್ಪನವರು ಕರ್ನಾಟಕ ರಾಜ್ಯದ ರಾಜಕೀಯದಲ್ಲಿ ಮನೆಮಾತಾಗಿದ್ದಂಥವರು, ಬಹಳ ಅಪರೂಪದ, ವರ್ಣರಂಜಿತ ವ್ಯಕ್ತಿತ್ವದ ವಿಶಿಷ್ಟ ರಾಜಕಾರಣಿಯಾಗಿದ್ದಂಥವರು. ಅವರು ಜನಮನದಲ್ಲಿ ಉಳಿಯಬೇಕಾದರೆ ಅವರಿಗೆ ತಮ್ಮದೇ ಆದಂಥ ಹೋರಾಟದ ಹಿನ್ನೆಲೆಯಿದ್ದಂಥವರು. ಈ ಸದನ ಒಂದು ಐತಿಹಾಸಿಕವಾದಂಥ ಕಾಯ್ದೆಯನ್ನು ಮಾಡಿತು. "Tiller is the owner of the land", "ಉಳುವವನೇ ಭೂಮಿಯ ಒಡೆಯ" ಎಂಬ ಕಾಯ್ದೆಯನ್ನು ತಂದಾಗ ಗೇಣಿದಾರರಿಗೆ ತಮ್ಮ ಭೂಮಿ ಒಡೆತನ ಹೊಂದುವಂಥ ಅವಕಾಶವಾಯಿತು. ಇದಕ್ಕೆ ತನ್ನದೇ ಆದಂಥ ಒಂದು ಚಳುವಳಿಯ ಇತಿಹಾಸ ಇದೆ. ಅದು ಕಾಗೋಡು ಸತ್ಯಾಗ್ರಹವಾಗಿದ್ದು ಒಂದು ಚಾರಿತ್ರಿಕವಾದಂಥ ಹೋರಾಟವಾಗಿತ್ತು. ಸ್ವತಃ ಡಾ: ರಾಮ ಮನೋಹರ ಲೋಹಿಯಾರವರೇ ಆ ಹೋರಾಟದಲ್ಲಿ ಭಾಗವಹಿಸಿದ್ದರು. ಆ ಚಳುವಳಿ ಹಿನ್ನೆಲೆಯ ಪ್ರಮುಖ ಹೋರಾಟಗಾರರಲ್ಲಿ ದಿವಂಗತ ಬಂಗಾರಪ್ಪನವರೂ ಕೂಡ ಒಬ್ಬರಾಗಿದ್ದರು. ಹಾಗಾಗಿ ಅವರಿಗೆ ಹೋರಾಟದ ಹಿನ್ನೆಲೆಯಿತ್ತು. ಕಾಗೋಡು ಸತ್ಯಾಗ್ರಹದ ಗೇಣಿದಾರರ ಸಂಘಟನೆಗೆ ನಾಂದಿಯಾಯಿತು. ಬಹುಶಃ ಈ ಹಿನ್ನೆಲೆ ಸರ್ಕಾರ "ಉಳುವವನಿಗೆ ಭೂಮಿಯ" ಹಕ್ಕನ್ನು ನೀಡಿತು. ಬಂಗಾರಪ್ಪನವರು 1967ರಲ್ಲಿ ಪ್ರಥಮ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದರು. ಮೂಲತಃ ಸಮಾಜವಾದಿಯಾಗಿದ್ದಂಥವರು, ಬಹಳ ಹಠವಾದಿಗಳೂ ಕೂಡ ಆಗಿದ್ದಂಥವರು. ಅವರು ಬಹಳ ವರ್ಣರಂಜಿತ ವ್ಯಕ್ತಿತ್ವ ಹೊಂದಿದ್ದರು. ಕಲೆ, ಸಾಹಿತ್ಯ, ಸಂಗೀತ ಕಲೆಗಳಲ್ಲಿ ಆಸಕ್ತಿ ಹೊಂದಿದ್ದರು. ಸ್ವತಃ ಕ್ರೀಡಾಪಟುಗಳಾಗಿದ್ದಂಥವರು. ಅವರ ಜೀವನವನ್ನು ನೋಡಿದಂಥ ಸಂದರ್ಭದಲ್ಲಿ ಅವರ ಉಡುಗೆ ತೊಡುಗೆಯಲ್ಲಿಯೂ ಕೂಡ ಅವರದೇ ಆದಂಥ ವೈಶಿಷ್ಟ್ಯತೆಯನ್ನು ನಾವು ಕಾಣಬಹುದಾಗಿತ್ತು. 1967ನೇ ಇಸವಿಯಲ್ಲಿಯೇ ಮೊಟ್ಟ ಮೊದಲಬಾರಿ ಸಂಯುಕ್ತ ಸಮಾಜವಾದಿ

ಪಕ್ಷದಿಂದ ಆಯ್ಕೆಯಾಗಿ ಬಂದರು. ಆಗ ಮಾನ್ಯ ದಿವಂಗತ ಗೋಪಾಲಗೌಡರು ಶಾಸಕರಾಗಿದ್ದರು. ಆ ದಿನಗಳನ್ನು ಸಹ ನಾವು ಇಂದಿನ ಸದನದಲ್ಲಿ ಮೆಲುಕು ಹಾಕಬೇಕಾಗಿದೆ. ಅವಿಭಾಜ್ಯ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿದ್ದಂಥ ಸಂದರ್ಭ ಅದು. 1967ರಲ್ಲಿ ಕಾಂಗ್ರೆಸ್ ಇನ್ನೂ ಇಬ್ಭಾಗವಾಗಿರಲಿಲ್ಲ. ಅವತ್ತು ಕಾಂಗ್ರೆಸ್ ಪಕ್ಷದಲ್ಲಿ ದಿವಂಗತ ನಿಜಲಿಂಗಪ್ಪನವರು, ಶ್ರೀ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದರು. ಈ ಕಡೆ ವಿರೋಧ ಪಕ್ಷದ ನಾಯಕರಾಗಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಶಿವಪ್ಪನವರು, ದಿವಂಗತ ಶಾಂತವೇರಿ ಗೋಪಾಲಗೌಡರು ಮತ್ತು ಯುವಕರಾದ ಬಂಗಾರಪ್ಪನವರು ಸಹ ಸದನದ ಸದಸ್ಯರಾಗಿದ್ದರು. ಆಗ ಬಹಳ ಗಂಭೀರವಾಗಿ ಚರ್ಚೆಯಾಗುತ್ತಿತ್ತು. ಸಂಸದೀಯ ಸಚಿವರೇ ಇಂದು ಆಡಳಿತದಲ್ಲಿ ನಾವೆಲ್ಲಾ ಪಾರದರ್ಶಕತೆ ಬಗ್ಗೆ ಈ ಸದನದಲ್ಲಿ ಮಾತನಾಡುತ್ತೇವೆ. ನೀವು ಏನು ಈಗ ಆ ಸ್ಥಳದಲ್ಲಿ ಕುಳಿತಿದ್ದೀರಿ, ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆಗಳನ್ನು ಕೊಟ್ಟು ಅಧಿಕಾರಕ್ಕೆ ಬಂದಂಥವರು, ಅಂದಿನ ಮುಖ್ಯಮಂತ್ರಿಗಳು ಮತ್ತು ಅವರ ಮಂತ್ರಿಮಂಡಲದ ಆಡಳಿತದಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ ಇತ್ತು, ನಮ್ಮ ವಿರೋಧ ಪಕ್ಷದಲ್ಲಿಯೂ ಕೂಡ ಜನಪರ ಸಂಘಟನೆ, ಚಳುವಳಿ, ಹೋರಾಟ ಮಾಡಿದ್ದಂಥವರಿದ್ದರು. ಅಂದಿನ ಸದನವನ್ನು ನಾವೆಲ್ಲಾ ಇವತ್ತು ನೆನೆಸಿಕೊಳ್ಳಬೇಕು. ಕರ್ನಾಟಕ ವಿಧಾನಸಭೆಗೆ ನಾವೆಲ್ಲಾ ಹೆಗ್ಗಳಿಕೆ ಪಡುವಂಥ ಇತಿಹಾಸ ಇದೆ. ಅಂಥ ಸಂದರ್ಭದಲ್ಲಿ 1967ರಲ್ಲಿ ಬಂಗಾರಪ್ಪನವರು ಆಯ್ಕೆಯಾಗಿ ಬಂದಂಥವರು. ಈಗ ಹೊಸದಾಗಿ ಮುಖ್ಯಮಂತ್ರಿಗಳು ಆಯ್ಕೆಯಾಗಿದ್ದಾರೆ. ಇಂದಿನ ರಾಜಕೀಯದಲ್ಲಿ ನಾವು ಹೊಂದಾಣಿಕೆಯ ಮಾತುಗಳನ್ನು ಹೇಳುತ್ತೇವೆ. ನಿಜ, “Politics is a series of compromise, but not at the cost of self-respect” ಎನ್ನುವಂಥದ್ದು. ನಾವು ರಾಜಕೀಯದಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕು. ಆದರೆ ಸ್ವಾಭಿಮಾನ ಶೂನ್ಯರಾಗಿ ನಮ್ಮ ಸ್ವಾಭಿಮಾನವನ್ನು ಅಡವಿಟ್ಟು ಮಾಡಬಾರದು. ಏಕೆಂದರೆ ಬಂಗಾರಪ್ಪನವರನ್ನು ನೋಡಿದಾಗ ಅವರು

ಎಂದಿಗೂ ತಮ್ಮ ಸ್ವಾಭಿಮಾನವನ್ನು ಬಿಟ್ಟುಕೊಡುತ್ತಿರಲಿಲ್ಲ. ಇವತ್ತೇನಾಗಿದೆ ಅಂದರೆ ನಮ್ಮ ರಾಜಕೀಯದಲ್ಲಿ loyalty ಬೇಕು. ನಾವಿರುವಂಥ ಪಕ್ಷಕ್ಕೆ ನಿಷ್ಠೆ ಇರಬೇಕು. ನಮ್ಮ ಪಕ್ಷದ ನಾಯಕತ್ವದ ಬಗ್ಗೆ loyalty ಇರಬೇಕು. Not sycophancy, not slavery. ಚೇಲಾ ಪ್ರವೃತ್ರಿ ಇರಬಾರದು. ಗುಲಾಮಗಿರಿ ಇರಬೇರದೆಂಬುದನ್ನು ನಾವೆಲ್ಲರೂ ಇವತ್ತು ಅರ್ಥ ಮಾಡಿಕೊಳ್ಳಬೇಕು. ಆದರೆ ಬಂಗಾರಪ್ಪನವರ ಜೀವನವನ್ನು ನೋಡಿದಾಗ ಅವರಲ್ಲಿ loyalty ಇತ್ತು. Sycophancy ಅವರಲ್ಲಿರಲಿಲ್ಲ. ಚೇಲಾಗಿರಿ, ಗುಲಾಮಗಿರಿ ಮಾಡುವ ಸ್ವಭಾವ ಅವರಲ್ಲಿರಲಿಲ್ಲ. ಆದ್ದರಿಂದ ನಾವು ಬಂಗಾರಪ್ಪನವರವನ್ನು ಇವತ್ತೂ ಕೂಡ ಈ ಸದನದಲ್ಲಿ ನೆನೆಸಿಕೊಳ್ಳುತ್ತಿದ್ದೇವೆ. ನಿಜ, ಬಂಗಾರಪ್ಪನವರು ಬಹಳ ಸಿಡುಕು ಸ್ವಭಾವದವರು. ನಾನು ಅನೇಕ ಸಾರಿ ಈ ಬಗ್ಗೆ ಯೋಚನೆ ಮಾಡಿದ್ದೇನೆ. ನಾವು ಕೆಲವು ಸಾರಿ ಏನು ಮಾಡುತ್ತೇವೆಂದರೆ we think we are out-spoken. ನಾವು ಬಹಳ ಸಾರಿ out-spoken ಆಗಿರುತ್ತೇವೆ. ನಾವು ಬಂಗಾರಪ್ಪನವರ ಜೀವನ ನೋಡಿದಾಗ, ನಾವು out-spoken ಎಂದು ತಿಳಿದುಕೊಂಡಿರುತ್ತೇವೆ, ಬಹಳ ಬೇಗ emotional ಆಗುತ್ತೇವೆಅಂದರೆ ಉದ್ವೇಗಕ್ಕೆ ಒಳಗಾಗುತ್ತೇವೆ. ನಾವು ಉದ್ವೇಗಕ್ಕೆ ಒಳಗಾದಾಗ ಬಹಳ ಸಂದಿಗ್ಧ, ಬಿಕ್ಕಟ್ಟಿನ ಪರಿಸ್ಥಿತಿಗೆ ಒಳಗಾಗುತ್ತೇವೆ. Brainless decisions ಕೆಲವು ಬಾರಿ ಆಗಿಬಿಡುತ್ತವೆ. ನಾವು ಇದನ್ನು ಬಹಳ ಅರ್ಥ ಮಾಡಿಕೊಳ್ಳಬೇಕು. ನಾವು ಬಹಳ out-spoken, emotional ಆದಾಗ Brainless decisions ಹೆಚ್ಚಾಗುತ್ತವೆ. ಇದು ಬಂಗಾರಪ್ಪನವರನ್ನೂ ಸಹ ಬಿಕ್ಕಟ್ಟಿಗೆ ಸಿಲುಕಿಸುತ್ತಿತ್ತು. ಅವರು outspoken ಆದಾಗ emotional ಆಗುತ್ತಿದ್ದರು. ಆದರೆ ಕೆಲವು ಸಾರಿ ತೀರ್ಮಾನಗಳೇನಾಗುತ್ತಿತ್ತು ಎಂಬ ಬಗ್ಗೆ ನಾವು ಅರ್ಥ ಮಾಡಿಕೊಳ್ಳಬೇಕು. ಕೆಲವು ಸಾರಿ ಏನಾಗುತ್ತದೆಂದರೆ 1967ರಲ್ಲಿ ಅವರು ಸಂಯುಕ್ತ ಸಮಾಜವಾದಿ ಪಕ್ಷದಿಂದ ಆಯ್ಕೆಯಾಗಿದ್ದರು. ಆದರೆ 1972ರಲ್ಲಿ ಇದೇ ಸದನದಲ್ಲಿ 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾಗಿ 1972ರಲ್ಲಿ ವಿಧಾನಸಭೆಗೆ ಚುನಾವಣೆ ನಡೆದಾಗ ವಿರೋಧ ಪಕ್ಷಗಳು ತತ್ತರಿಸಿ

ಹೋಗಿಬಿಟ್ಟವು. 1972ರಲ್ಲಿ ಜನಸಂಘ ಕೂಡ ಒಂದು ಸ್ಥಾನದಲ್ಲಿಯೂ ಗೆಲ್ಲಲಿಕ್ಕೆ ಆಗಿರಲಿಲ್ಲ. 1967ರಲ್ಲಿ ಭಾರತೀಯ ಜನಸಂಘ ನಾಲ್ಕು ಸ್ಥಾನದಲ್ಲಿ ಬಂದದ್ದು 1972ರಲ್ಲಿ ಒಂದು ಸ್ಥಾನದಲ್ಲಿಯೂ ಬರಲಿಕ್ಕಾಗಿಲಿಲ್ಲ. ಏಕೆಂದರೆ ಇಂದಿರಾ ಗಾಂಧಿಯವರ ಬಿರುಗಾಳಿಯಲ್ಲಿ, ಕಾಂಗ್ರೆಸ್ ಅಲೆಯಲ್ಲಿ ಎಲ್ಲರೂ ಕೂಡ ನಡುಗಿ ಹೋಗಿರತಕ್ಕಂಥ ಸಂದರ್ಭದಲ್ಲಿ ಸಂಯುಕ್ತ ಸೋಷಿಯಲಿಸ್ಟ್ ಪಕ್ಷದಿಂದ ಮೂರು ಜನ ಇಲ್ಲಿಗೆ ಆಯ್ಕೆಯಾಗಿ ಬಂದರು. ಬಂಗಾರಪ್ಪನವರು ಎರಡನೇ ಬಾರಿ ಆಯ್ಕೆಯಾಗಿದ್ದರು, ಕಾಗೋಡು ತಿಮ್ಮಪ್ಪನವರು, ಕೋಣಂದೂರು ಲಿಂಗಪ್ಪನವರು ಸೇರಿ ಮೂರು ಜನ ಆಯ್ಕೆಯಾಗಿ ಬಂದಂಥವರು. ಅಲ್ಲಿ ವಿಪರ್ಯಾಸ ಎಂದರೆ ಸೋಷಯಲಿಸ್ಟ್ ಪಾರ್ಟಿಗೆ ಯಾರು ಶಾಸಕಾಂಗ ನಾಯಕರಾಗಬೇಕು ಎಂದಾಗ ಕಾಗೋಡು ತಿಮ್ಮಪ್ಪನವರು ನಾಯಕರಾದರು. ಬಂಗಾರಪ್ಪನವರಿಗೆ ಹಟ. ಬಂಗಾರಪ್ಪನವರು “ನಾನು ಎರಡನೇ ಬಾರಿ ಆಯ್ಕೆಯಾಗಿದ್ದರೂ ಕಾಗೋಡು ತಿಮ್ಮಪ್ಪನವರನ್ನೇ ನಾಯಕರಾಗಿ ಆಯ್ಕೆ ಮಾಡಿದ್ದಾರೆ. ನಾನು 1967ರಲ್ಲಿ ಗೆದ್ದು ಬಂದಿದ್ದೇನೆ ಹಾಗಾಗಿ ನಾನು ಶಾಸಕಾಂಗ ಪಕ್ಷದ ನಾಯಕನಾಗಬೇಕು” ಎಂದು ಹೇಳಿ ತಕ್ಷಣದಲ್ಲಿ ಆ ಪಾರ್ಟಿಗೆ ತಿರುಗಿ ಬಿದ್ದು 1967ರಲ್ಲಿ ಆ ಪಾರ್ಟಿಯನ್ನೇ ಬಿಟ್ಟು, 1972ರಲ್ಲಿ ಕ್ರಾಂತಿಕಾರಿ ಸಮಾಜವಾದಿ ಪಕ್ಷವನ್ನು ಕಟ್ಟಿದರು. ಅವರು ಬಹಳ ಹಠವಾದಿಯಾಗಿದ್ದರು. ಅಲ್ಲಿಂದ ತಮಗೆ ಗೊತ್ತಿದೆ, ಅವರು ಕಾಂಗ್ರೆಸ್ ಪಕ್ಷ ಸೇರಿದರು. ಅವರು ಏಳು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಎರಡು ಬಾರಿ ಸಂಯುಕ್ತ ಸೋಷಿಯಲಿಸ್ಟ್ ಪಕ್ಷದಿಂದ ಆಯ್ಕೆಯಾಗಿದ್ದರು. ನಾಲ್ಕು ಬಾರಿ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದರು. ಒಂದು ಸಾರಿ ಅವರು ಕರ್ನಾಟಕ ಕಾಂಗ್ರೆಸ್ ಪಕ್ಷ ತಾವೇ ಕಟ್ಟಿ ಅದರಲ್ಲಿಯೂ ಆಯ್ಕೆಯಾಗಿದ್ದರು. ಏಳು ಬಾರಿ ಅವರು ಆಯ್ಕೆಯಾಗಿದ್ದರೂ ಸಹ ಏಳು ವರ್ಷಗಳ ಕಾಲ ಸಚಿವರಾಗಿದ್ದರು. ಅದರಲ್ಲಿ ಐದು ವರ್ಷಗಳಲ್ಲಿ ರಾಜ್ಯ ಸಚಿವರು, ಕ್ಯಾಬಿನೆಟ್ ಸಚಿವರು ಹಾಗೂ ಎರಡು ವರ್ಷ ಮುಖ್ಯಮಂತ್ರಿಗಳಾಗಿದ್ದರು. ವಿಶೇಷವೆಂದರೆ ನಮ್ಮ ಜೊತೆಗೆ

ಪಾರ್ಲಿಮೆಂಟ್‌ನಲ್ಲಿ 1999 ರಲ್ಲಿ ಸದಸ್ಯರಾಗಿದ್ದರು. 1996ರಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷದಿಂದ ಕೂಡ ಸಂಸತ್‌ಗೆ ಆಯ್ಕೆಯಾಗಿದ್ದರು. ಅವರು ಇದ್ದುದೇ ಏಳು ವರ್ಷ. ನಾಲ್ಕು ಪಾರ್ಟಿಗಳಿಂದಲೂ ಪಾರ್ಲಿಮೆಂಟ್‌ಗೆ ಸದಸ್ಯರಾಗಿ ಗೆದ್ದಿದ್ದರು. ಬಂಗಾರಪ್ಪನವರು ಬಹಳ ಹಠವಾದಿಗಳು. ಒಂದು ಸಾರಿ ಕಾಂಗ್ರೆಸ್ ಪಕ್ಷದಿಂದ 1996 ರಲ್ಲಿ ಗೆದ್ದರು. 1998ರಲ್ಲಿ ಸೋತರು. 1999ರಲ್ಲಿ ಮತ್ತೆ ಕಾಂಗ್ರೆಸ್ ಪಕ್ಷದಿಂದ ಗೆದ್ದರು. 2004ರಲ್ಲಿ ಬಿಜೆಪಿಯಿಂದ ಆಯ್ಕೆಯಾದರು. ಬಿಜೆಪಿಗೆ ರಾಜೀನಾಮೆ ನೀಡಿ ಉಪಚುನಾವಣೆಯಲ್ಲಿ ಎಸ್.ಪಿ. ಪಕ್ಷದಿಂದ ಆಯ್ಕೆಯಾದರು. ಏಳು ವರ್ಷಗಳಲ್ಲಿ ನಾಲ್ಕು ಪಾರ್ಟಿಯಲ್ಲಿಯೂ ಗೆದ್ದರು. ಏಳು ವರ್ಷಗಳಲ್ಲಿ ನಾಲ್ಕು ಪಾರ್ಟಿಗಳಿಂದ ಲೋಕಸಭೆಗೆ ಅವರು ಗೆದ್ದಿರುವಂತಹದ್ದು, ಬಹುಶಃ ಇಂಡಿಯಾ ದೇಶದ ಇತಿಹಾಸದಲ್ಲಿ ಇಲ್ಲಿಯೂ ಕೂಡ ಕಾಣದಿರುವಂತಹದ್ದು. ಅಂದರೆ ಅವರು ಬಹಳ ಹಠವಾದಿಯಾಗಿದ್ದರು. ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಬಹುಶಃ ಅವರು ಯಾವ ಹೋರಾಟದ ಹಿನ್ನೆಲೆಯಿಂದ ಬಂದಿರುವಂತಹವರು, ಆ compromise ಎನ್ನುವುದು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಇಷ್ಟೆಲ್ಲಾ ಆದರೂ ಕೂಡ ನಾನು ತುಂಬಾ ಇಷ್ಟಪಡುವಂತಹದ್ದು, ನಾವೆಲ್ಲರೂ ಕೂಡ ಇಷ್ಟಪಡುವಂತಹದ್ದು ಏನೆಂದರೆ, ದಿವಂಗರ ಬಂಗಾರಪ್ಪನವರು ಪಕ್ಷಾಂತರಿಗಳು ಎನ್ನುವುದು ಇದೆ. ಕೊನೆಯಲ್ಲಿ ಅವರು ಜೆ.ಡಿ.(ಎಸ್)ಗೂ ಕೂಡ ಬಂದರು. ಅವರು ಜೆ.ಡಿ.(ಎಸ್)ಗೂ ಸಹ ಸೇರಿದಂತಹವರು. ಏಕೆ ಅವರು ಸೇರಿದರು, ಮಾಡಿದರು ಎನ್ನುವ ಪ್ರಶ್ನೆಯಲ್ಲ. ಇಷ್ಟೆಲ್ಲಾ ನಾನು ಅವರ ವಿಚಾರಗಳನ್ನು ಹೇಳಿದಂತಹದ್ದು, ಇಷ್ಟು ಪಕ್ಷಗಳಿಗೆ ಬಂದು ಚುನಾವಣೆಯಲ್ಲಿ ಆಯ್ಕೆಯಾದಂತಹ ಸಂದರ್ಭದಲ್ಲಿ ಕೂಡ, ಅವರು ಪಕ್ಷಾಂತರಿಯಾದರೂ ಕೂಡ, ವಿಶೇಷವಾಗಿ ಅವರ ಗುಣವನ್ನು ಕಾಣುವಂತಹದ್ದು ದಿವಂಗತ ಬಂಗಾರಪ್ಪನವರು ಪಕ್ಷಾಂತರಿಯಾದರೂ ಕೂಡ ಅವರು ತತ್ವಾಂತರಿಯಾಗಲಿಲ್ಲ ಎನ್ನುವುದು ವಿಶೇಷ. ಅವರು ತತ್ವಾಂತರಿಯಾಗಲಿಲ್ಲ ಎನ್ನುವುದು ನಾನು ಮಾತನಾಡುವುದು. ಅವರು

ಯಾವ ಹೋರಾಟದ ಹಿನ್ನೆಲೆಯಲ್ಲಿ ಬಂದಿದ್ದರು, ಬಹುಶಃ ಆ ಹಿನ್ನೆಲೆಯಲ್ಲಿ ಅವರು ಯಾವುದೇ ಪಕ್ಷದಲ್ಲಿರಲಿ, ಅದಕ್ಕೆ ಬದ್ಧರಾಗಿದ್ದರು. ಮಾನ್ಯ ಮುಖ್ಯಮಂತ್ರಿಗಳು ಬಂಗಾರಪ್ಪನವರ ಕಾರ್ಯಕ್ರಮಗಳನ್ನು ಕೂಡ ಹೇಳುತ್ತಿದ್ದರು. ಅದೆಲ್ಲಾ ಅವರ ಹೋರಾಟದ ಹಿನ್ನೆಲೆಯಾಗಿರುವಂತಹದ್ದು. ಆ ಒಂದು ಸಮಾಜವಾದಿ ಚಳುವಳಿ ಹಿನ್ನೆಲೆಯಲ್ಲಿ ಬಂದಿದ್ದಂತಹ ದಿವಂಗತ ಬಂಗಾರಪ್ಪನವರು ನಮ್ಮ ನೆನಪಿನಲ್ಲಿ ಉಳಿಯುವಂತಹವರು. ಅವರು ಪಕ್ಷಾಂತರಿಯಾದರೂ ಕೂಡ ತತ್ವಾಂತರಿಯಾಗದೇ ಶೋಷಿತ ವರ್ಗಗಳ ಬಗ್ಗೆ ಚಿಂತನೆಯನ್ನು ಮಾಡತಕ್ಕ, ದುರ್ಬಲ ವರ್ಗದವರ ಬಗ್ಗೆ ಚಿಂತನೆ ಮಾಡತಕ್ಕಂಥ ಒಂದು ಸಾಮಾಜಿಕ ಕಳಕಳಿಯಿತ್ತಲ್ಲಾ ಅದನ್ನು ಅವರು ತಮ್ಮ ಜೀವಿತದ ಕೊನೆಯವರೆಗೂ ಸಹ ಉಳಿಸಿಕೊಂಡು ಬಂದಿರುವಂತಹ ಕರ್ನಾಟಕ ರಾಜ್ಯದ ಅಪರೂಪದ ರಾಜಕಾರಣಿಗಳಲ್ಲಿ ಬಹಳ ವೈಶಿಷ್ಟ್ಯಪೂರ್ಣವಾದಂತಹ ರಾಜಕಾರಣಿಯಾಗಿದ್ದರು. ಅದಕ್ಕೋಸ್ಕರ ನಾನು ಹೇಳಿದೆ. ನಮ್ಮ ಜನಮನದ ಮನಸ್ಸಿನಲ್ಲಿ, ಸದಾ ಕರ್ನಾಟಕದಲ್ಲಿ ನೆನಪಿನಲ್ಲಿ ಉಳಿಯುವಂತಹ ಒಬ್ಬ ಹಿರಿಯ ರಾಜಕೀಯ ಧುರೀಣರು, ಹೋರಾಟಗಾರರಾಗಿದ್ದಂತಹವರು ದಿವಂಗರ ಬಂಗಾರಪ್ಪನವರು ಎಂದು ಹೇಳುತ್ತೇನೆ. ಅವರ ಜೀವಿತದ ಕೊನೆಯವರೆಗೂ ಸಹ ಬಹಳ ಲವಲವಿಕೆಯಿಂದ ಇದ್ದರು. ಆರೋಗ್ಯವಾಗಿದ್ದಂತಹವರು ಕೊನೆಯಲ್ಲಿ ಸಾವನ್ನಪ್ಪಿದರು. ಸಾವನ್ನು ಏನೂ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, Birth is an accident ಎಂದು ಹೇಳುತ್ತೇವೆ. Death is certain. ಮನುಷ್ಯನಿಗೆ ಯಾವುದೇ ಬರಲಿ, ಬಿಡಲಿ, ಅಧಿಕಾರ ಬರುತ್ತದೋ ಅಥವಾ ಇಲ್ಲವೋ, ಬಡತನ ಇರುತ್ತದೋ, ಸಿರಿವಂತಿಕೆ ಇರುತ್ತದೋ, ಆದರೆ, ಹುಟ್ಟಿದ ದಿನದಿಂದ ನಮ್ಮನ್ನು ಹಿಂದೆ ಹಿಂಬಾಲಿಸುವುದು ಸಾವು. ಯಾವ ಗಳಿಗೆಯಲ್ಲಿ ಸಾವು ಬರುತ್ತದೆ ಎಂಬುದು ಹೇಳುವುದಕ್ಕಾಗುವುದಿಲ್ಲ. ನಾವು ಯಾರೂ ಕೂಡ ನಿರೀಕ್ಷೆ ಮಾಡಿರಲಿಲ್ಲ. ಇಷ್ಟು ಬೇಗ ಅವರಿಗೆ ಸಾವು ಬರುತ್ತದೆ ಎನ್ನುವುದು ಗೊತ್ತಿರಲಿಲ್ಲ. ನಾನು ಹೇಳಿದ ಹಾಗೆ ಕರ್ನಾಟಕ ರಾಜ್ಯದಲ್ಲಿ ಅವರ ನೆನಪು

ಸದಾ ಇರುತ್ತದೆ ಎನ್ನುವುದನ್ನು ಹೇಳಿ ಅವರ ಅಗಲಿಕೆಗೆ ನಾನು ಕೂಡ ನನ್ನ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಇವತ್ತು ಬಹುಮುಖ್ಯವಾಗಿ ನನಗೆ ನೆನಪಿಗೆ ಬರುವುದು ಸಾಹಿತಿಗಳಾದಂತಹ ಎಲ್.ಬಸವರಾಜುರವರು, ತಾವು ಇವತ್ತು ಮಾಧ್ಯಮದಲ್ಲಿ ಓದಿರಬಹುದು. ಅವರಿಗೆ ಒಬ್ಬ ಮಗ ಮತ್ತು ಒಬ್ಬಳು ಮಗಳು. ಅವರ ಮಗ ಪ್ರಭೂಶಂಕರ್, 1986ರಲ್ಲಿ ಇಂಜಿನಿಯರಿಂಗ್ ಪದವೀಧರರಾಗಿದ್ದು, ಸಣ್ಣ ವಯಸ್ಸಿನಲ್ಲಿಯೇ ಅಕಾಲ ನಿಧನರಾಗಿದ್ದು ಅವರಿಗೆ ಬಹಳ ಕೊರಗಿತ್ತು. ಅವರ ಪುತ್ರ ಪ್ರಭುಶಂಕರ್ ನನಗೆ ಸಹಪಾಠಿಯಾಗಿದ್ದರು. ದಿವಂಗತ ಎಲ್.ಬಸವರಾಜ್‌ರವರು ಎಲ್.ಬಿ. ಎಂದು ಹೆಸರುವಾಸಿಯಾಗಿದ್ದರು. ಈ ನಾಡಿನ ಶ್ರೇಷ್ಠ ವಿದ್ವಾಂಸರಾಗಿದ್ದಂತಹವರು, ಸಾಹಿತಿಗಳು ಹಾಗೂ ಕವಿಗಳಾಗಿದ್ದಂತಹವರು. ಅವರೂ ಕೂಡ ತುಂಬು ಜೀವನ ನಡೆಸಿದರು. 94 ವರ್ಷ ವಯಸ್ಸಿನವರೆಗೂ ಸಹ ಇದ್ದಂತಹವರು. ನಾನು ಪಿ.ಯು.ಸಿ ವಿದ್ಯಾರ್ಥಿಯಾಗಿ ಅವರ ಮಗ ಪ್ರಭುಶಂಕರ್‌ರವರ ಸಹಪಾಠಿಯಾಗಿದ್ದಂತಹ ಸಂದರ್ಭದಲ್ಲಿ, ಅವರ ಮಗನ ಜೊತೆಯಲ್ಲಿ ಇವರನ್ನು ನೋಡಿದ್ದೆ. ಹಾಗಾಗಿ ದಿವಂಗತ ಎಲ್.ಬಸವರಾಜುರವರನ್ನು, ಅವರು ಕೇವಲ ಒಬ್ಬರು ಸಾಹಿತಿಗಳು, ವಿದ್ವಾಂಸರು ಮಾತ್ರವಲ್ಲ. ನಾವೆಲ್ಲರೂ ಕೂಡ ಮೈಸೂರಿನಲ್ಲಿ ಅವರನ್ನು ಬಹಳ ಹತ್ತಿರದಿಂದ ನೋಡಿದಂತಹವರು. ಸಾಹಿತಿಗಳಾದಂತಹ ಅವರ ಚಿಂತನೆಗಳು, ಒಬ್ಬ ಸಾಹಿತಿಯಾಗಿ ಅವರ ವೈಚಾರಿಕತೆ, ವೈಜ್ಞಾನಿಕತೆ ಹಾಗೂ ವಾಸ್ತವಿಕತೆಯ ಮೇಲೆ ಅವರ ಸಾಹಿತ್ಯ, ಚಿಂತನೆಗಳು, ಸಂಶೋಧನೆಗಳು ನಡೆಯುತ್ತಿದ್ದವು. ಅವರಿಗೆ ಅಪಾರವಾದ ಸಾಮಾಜಿಕ ಕಳಕಳಿ ಇತ್ತು. ಬಸವಣ್ಣನವರ ಚಿಂತನೆಗಳನ್ನು ಅವರು ಅಳವಡಿಸಿಕೊಂಡಿದ್ದರ ಜೊತೆಗೆ, ತಮ್ಮ ಜೀವನದಲ್ಲಿ ಅನುಸರಿಸುತ್ತಿದ್ದರು. ಅವರು ಹೇಳಿದಂತಹ ಮಾತುಗಳು "ಮೇಲ್ವರ್ಗದವರು ಬಸವಣ್ಣನವರಂತೆ ಜಾತಿ ಅಹಂಕಾರಗಳನ್ನು ಬಿಡಬೇಕು", ಬಹಳ ಸ್ಪಷ್ಟವಾಗಿ ಹೇಳುತ್ತಿದ್ದರು. "ದಲಿತರು ಅಂಬೇಡ್ಕರ್‌ರವರಂತೆ ಸ್ವಾಭಿಮಾನದಿಂದ ಬಾಳಬೇಕು" ಎಂದು ಹೇಳುತ್ತಿದ್ದರು. ಇದು ಅವರ ಮಾತು. ಕೃತಿಯಲ್ಲೂ ಕೂಡ, ನಾನು

ಅನೇಕ ಕಾರ್ಯಕ್ರಮಗಳಲ್ಲಿ ಅವರ ಜೊತೆಯಲ್ಲಿ ಭಾವನೆ ಹಂಚಿಕೊಂಡಿದ್ದೇನೆ. ಹಿಂದುಳಿದ ವರ್ಗದವರ ಮೇಲೆ ಅಪಾರವಾದಂತಹ ಕಾಳಜಿ ಇದ್ದಂತಹ ವ್ಯಕ್ತಿ ಅವರು. ಇಲ್ಲಿ ಸಚಿವರಾದ ಮಾನ್ಯ ಗೋವಿಂದ ಕಾರಜೋಳರವರೂ ಸಹ ಇದ್ದಾರೆ. ಚಿತ್ರದುರ್ಗದ ಸಾಹಿತ್ಯ ಸಮ್ಮೇಳನದಲ್ಲಿ ಅವರ ಭಾಷಣವನ್ನು ಕೇಳಬೇಕಾಗಿತ್ತು. ಕೇವಲ 12 ಪುಟಗಳ ಭಾಷಣ. ಎಂತಹ ಸಾಹಿತ್ಯ ಅವರದು. ಮೊನಚಾದ ಭಾಷಣ ಅದು. ಜೊತೆಗೆ ಅವರ ಭಾಷಣಗಳು ಬುಲೆಟ್ ಭಾಷಣಗಳು. ಬುಲೆಟ್ ರೀತಿಯಲ್ಲಿ ಅವರ ಭಾಷಣಗಳು ಬರುತ್ತಿತ್ತು. ಅದನ್ನು ಕೇಳಿದವರಿಗೆ ಅದು ಗೊತ್ತಾಗುತ್ತದೆ. ಎದೆಗೆ ನಾಟುವಂತಹ ರೀತಿಯಲ್ಲಿ, ಬುಲೆಟ್ ರೀತಿಯಲ್ಲಿ ಇರುತ್ತಿತ್ತು. ನಾನು ಅವರ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಅವರ ಮಾತು, ಎದೆಗಾರಿಕೆ, ನೇರನುಡಿ, ಅದನ್ನು ಅವರು ಜೀವನದಲ್ಲಿ ಯಾವ ರೀತಿ ಅಳವಡಿಸಿಕೊಂಡಿದ್ದರು ಎನ್ನುವುದನ್ನು ನೋಡಬೇಕು. ಅವರಿಗೆ ಚಿತ್ರದುರ್ಗ ಸಾಹಿತ್ಯ ಸಮ್ಮೇಳನದಲ್ಲಿ ರೂ. 75 ಸಾವಿರಗಳ ಹಣ ಬಂತು. ಅದರ ಜೊತೆಗೆ ಇನ್ನೂ 25 ಸಾವಿರ ರೂಪಾಯಿಗಳನ್ನು ಸೇರಿಸಿ ಅದನ್ನು ಕೇಂದ್ರ ಸಾಹಿತ್ಯ ಅಕಾಡಮಿಗೆ, ದಲಿತರಿಗೆ ಪ್ರೋತ್ಸಹಿಸಿ, ಉತ್ತೇಜನ ಕೊಡುವ ಸಲುವಾಗಿ ಕೊಡಬೇಕು ಎಂದು, ದಲಿತ ಲೇಖಕರಿಗೆ ಪ್ರೋತ್ಸಾಹವನ್ನು ಕೊಡಬೇಕು ಎಂದು ಆ ಹಣವನ್ನು ಇಟ್ಟಿದ್ದರು. ಪಂಪ ಪ್ರಶಸ್ತಿ ಬಂದಂತಹ ಸಂದರ್ಭದಲ್ಲಿಯೂ ಕೂಡ ಸಂಶೋಧನೆ ಮಾಡುವಂತಹವರಿಗೆ ಆ ಪ್ರಶಸ್ತಿಯನ್ನು ಕೊಡಬೇಕು ಎಂದು ಅವರಿಗೆ ಪಂಪ ಪ್ರಶಸ್ತಿಯಿಂದ ಬಂದಂತಹ ಹಣವನ್ನು ಕೊಟ್ಟಿದ್ದರು. ಸುಮಾರು 10 ಜನ ಸಂಶೋಧಕರಿಗೆ ಇದುವರೆಗೂ ಸಾಹಿತ್ಯ ಕ್ಷೇತ್ರದಲ್ಲಿ ಪ್ರಶಸ್ತಿ ದೊರಕಿದೆ. ದಿವಂಗತ ಎಲ್.ಬಸವರಾಜುರವರನ್ನು ನಾನು ಈ ಸಂದರ್ಭದಲ್ಲಿ ಬಹಳ ನೆನಪಿಸಿಕೊಳ್ಳುತ್ತೇನೆ. ಬಹಳ ವಿಶೇಷವಾಗಿ ದಿವಂಗತ ಎಲ್.ಬಸವರಾಜುರವರಂತಹ ಸಾಹಿತಿಗಳನ್ನು ನೆನಪಿಸಿಕೊಳ್ಳಬೇಕಾದರೆ, ಅವರ ಅನೇಕ ಸಾಹಿತ್ಯ ಪುಸ್ತಕಗಳು ಪ್ರಕಟಣೆಯಾಗಿವೆ. ಅವರು Publishers ಯಾರೇ ಆದರೂ ಕೂಡ ಒಂದೇ ಒಂದು ರೂಪಾಯಿಯನ್ನು

ತೆಗೆದುಕೊಂಡಿಲ್ಲ. ಪ್ರಕಟಣೆ ಮಾಡಿರುವಂತಹದ್ದೇ ನಮಗೆ ಜಾಸ್ತಿಯಾಗಿದೆ, ನಿಮ್ಮಿಂದ ನಮಗೆ ಏನೂ ಬೇಡವೆಂದು ಹೇಳುತ್ತಿದ್ದರು. ಅಂತಹವರು ಇರುವುದು ಬಹಳ ವಿರಳ. ಎಲ್ಲರೂ ಹೆಮ್ಮೆ ಪಡುವಂತಹ ಬಹಳ ದೊಡ್ಡ ಸಾಹಿತಿಯಾಗಿದ್ದರು. ಅವರು ನೂರಾರು ಜನ ಶಿಷ್ಯರನ್ನು ತಯಾರು ಮಾಡಿದಂತಹವರು. ಅವರ ಸಂಶೋಧನೆಯಿರಬಹುದು ಅಥವಾ ಅವರು ಪ್ರೊಫೆಸರ್ ಆಗಿದ್ದಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ತಯಾರು ಮಾಡಿರಬಹುದು. ಅವರ ವಿಶೇಷತೆ ಏನೆಂದರೆ, ಅವರ ಅಭಿನಂದನಾ ಗ್ರಂಥವನ್ನು ತರುವುದಕ್ಕೆ ಅವರು ಅವಕಾಶ ಕೊಡಲಿಲ್ಲ. ಬಹಳ ಸ್ಪಷ್ಟವಾಗಿ ಹೇಳಿದ್ದರು. ಮೊಟ್ಟಮೊದಲಿಗೆ ಒಂದು ಅಭಿನಂದನಾ ಗ್ರಂಥವನ್ನು ತರುತ್ತೇವೆ ಎನ್ನುವುದುದನ್ನು ತಿರಸ್ಕಾರ ಮಾಡಿದಂತಹವರು ಇವರು; ಅದಕ್ಕೆ ಅವಕಾಶ ಕೊಡದೇ ಇರುವಂತಹ ಒಬ್ಬ ಶ್ರೇಷ್ಠ ಸಾಹಿತಿ. ತನ್ನ ಜೀವನದಲ್ಲಿ ಹೇಳಿದಂತಹ ರೀತಿಯಲ್ಲಿ ಬಸವಣ್ಣನವರ ಅನುಯಾಯಿಗಳಾಗಿ ಅವರ ತತ್ವಗಳನ್ನು ಅಳವಡಿಸಿಕೊಂಡು ಪ್ರತಿಪಾದಿಸಿದಂತಹವರು ದಿವಂಗತ ಎಲ್.ಬಸವರಾಜುರವರು ಎಂದು ಹೇಳಿ, ಈ ಸಂದರ್ಭದಲ್ಲಿ ಅವರನ್ನು ನೆನಪಿಸಿಕೊಳ್ಳುತ್ತಾ, ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಕೊನೆಯಲ್ಲಿ, ಮಂಚನಹಳ್ಳಿ ಮಹದೇವರವರು ನನಗಿಂತ ವಯಸ್ಸಿನಲ್ಲಿ ಸಣ್ಣವರು. ಸದನದ ಸದಸಯರಾಗಿದ್ದಂತಹವರು. ನಮ್ಮ ಜಿಲ್ಲೆಯವರೇ ಆಗಿದ್ದರು. ನಮ್ಮ ಜೊತೆಯಲ್ಲಿ ಒಡನಾಟ ಇಟ್ಟುಕೊಂಡಿದ್ದರು. ಅಪಾರವಾದಂತಹ ಉತ್ಸಾಹಿಯಾಗಿದ್ದರು. Un-timely Death. ಅವರು ಅಕಾಲಿಕ ಮರಣವನ್ನು ಹೊಂದಿದರು. ಅವರದು ಸಾಯುವಂತಹ ವಯಸ್ಸು ಆಗಿರಲಿಲ್ಲ. ನಾವು ಯಾರೂ ಕೂಡ ನಿರೀಕ್ಷೆ ಮಾಡಿರಲಿಲ್ಲ. ಅವರಿಂದ ಸಮಾಜಕ್ಕೆ, ರಾಜಕೀಯ ಕ್ಷೇತ್ರದಲ್ಲಿ ಬಹಳ ಉತ್ತಮವಾದಂತಹ ರೀತಿಯಲ್ಲಿ ಒಳ್ಳೆಯ ಕೆಲಸವನ್ನು ಮಾಡಿ, ಒಳ್ಳೆಯ ಜನಪ್ರತಿನಿಧಿಯಾಗತಕ್ಕ ಎಲ್ಲಾ ರೀತಿಯ ಅವಕಾಶಗಳು ಅವರಿಗೆ ಇದ್ದು, ಅವರು ಅದೇ ರೀತಿಯಾಗಿ ಒಂದು ಬಾರಿ ಆಯ್ಕೆಯಾಗಿದ್ದರು. ಸೋಲು-ಗೆಲುವು ಎಲ್ಲವನ್ನೂ ಕಂಡಂತಹ ಒಬ್ಬ ಯುವ

ರಾಜಕಾರಣಿಯಾಗಿ ಇದ್ದಂತಹವರು. ನಮ್ಮ ಜಿಲ್ಲೆಯಲ್ಲಿ ಅವರ ಅಗಲಿಕೆಯಿಂದ ಟಿಷ್ಟವಾಗಿದೆ. ಮಾನ್ಯ ಸಿದ್ದರಾಮಯ್ಯನವರ ಅನುಯಾಯಿಯಾಗಿದ್ದರು. ಅವರ disciple ಎಂದೇ ಹೇಳಬಹುದು. ಅವರು ಹಾಕಿದ ಹೆಜ್ಜೆಯನ್ನು ಇವರು ದಾಟುತ್ತಿರಲಿಲ್ಲ. ಜೊತೆ ಜೊತೆಯಲ್ಲಿಯೇ ಅವರು ಹೇಳಿದ ರೀತಿಯಲ್ಲಿಯೇ ನಡೆದುಕೊಂತಿಣ ಬಂದ ಒಬ್ಬರು ಯುವಕನನ್ನು, ಬಹಳ ಆತ್ಮೀಯ ಒಡನಾಟ ಇಟ್ಟುಕೊಂಡಂತಹ ಒಬ್ಬ ಸ್ನೇಹಿತರು ಕೂಡ ಆಗಿದ್ದಂತಹ ದಿವಂಗತ ಮಂಚನಹಳ್ಳಿ ಮಹದೇವರವರಿಗೆ ನಾನು ಈ ಸಂದರ್ಭದಲ್ಲಿ ಸಂತಾಪ ಸೂಚಿಸುತ್ತೇನೆ. ಇನ್ನೂ ಇತರೆ ಶಾಸಕರು ಕೂಡ ಇವತ್ತು ಅಗಲಿದ ಗಣ್ಯರಿಗೆ ಸಂತಾಪ ಸೂಚನೆ ವ್ಯಕ್ತಪಡಿಸಿದ್ದಾರೆ. ನಾನು ಕೂಡ ಅಗಲಿದ ಮುಖಂಡರಿಗೆ ನನ್ನ ಸಂತಾಪವನ್ನು ಸೂಚಿಸುತ್ತಾ, ನನ್ನ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಮಾನ್ಯ ಸದಸ್ಯರಿಂದ ಭಾಷಣವು ಪರಿಷ್ಕರಿಸಲ್ಪಟ್ಟಿದೆ.

ಶ್ರೀ ಹೆಚ್.ಹಾಲಪ್ಪ (ಸೊರಬ):- ಮಾನ್ಯ ಅಧ್ಯಕ್ಷರೆ, ನಮ್ಮನ್ನು ಅಗಲಿರುವಂತಹ ಗಣ್ಯರಿಗೆ ಸಂತಾಪ ಸೂಚನೆ ಸಲ್ಲಿಸುವ ಈ ಸಂದರ್ಭದಲ್ಲಿ ನಮ್ಮ ನಾಯಕರಾಗಿದ್ದಂತಹ, ಇಡೀ ರಾಜ್ಯಕ್ಕೆ ನಾಯಕರಾಗಿದ್ದಂತಹ ದಿವಂಗತ ಬಂಗಾರಪ್ಪನವರ ಬಗ್ಗೆ ಹೇಳುವಂತಹ ಅಷ್ಟು ದೊಡ್ಡವನಲ್ಲ. ಅವರ ಕೊನೆಯ ದಿನಗಳಲ್ಲಿ ಅವರ ಜೊತೆಗೆ ಸೇರಿಕೊಂಡು ನಮ್ಮನ್ನು ಕೂಡ ಈ ಶಾಸಕಾಂಗ ಪಕ್ಷದ ಸಭೆಗೆ ಬರುವ ಹಾಗೆ ಮಾಡಿದವರು ದಿವಂಗತ ಬಂಗಾರಪ್ಪನವರು. ಅವರ ವಿಶೇಷತೆಗಳ ಬಗ್ಗೆ ಅನೇಕ ಜನ ಹಿರಿಯರು ಮಾತನಾಡಿದ್ದಾರೆ. ಅವರಲ್ಲಿ ಅನೇಕ ವಿಶೇಷತೆಗಳಿದ್ದವು. ಆ ವಿಶೇಷತೆಗಳು ಯಾವುವು ಎಂದರೆ, ಅವರು ಒಳ್ಳೆಯ ಕೃಷಿಕರಾಗಿದ್ದರು. ಅವರು 150 ಎಕರೆ ಅಡಿಕೆ ತೋಟ ಮಾಡಿದ್ದರು. ಅದನ್ನು ನೋಡಬೇಕು ಎಂದರೆ ಸ್ವತಃ ಊರಿಗೆ ಹೋಗಿ ತೋಟವನ್ನು ಜನರು ನೋಡಬೇಕಾಗುತ್ತದೆ. ಆ ತೋಟದಲ್ಲಿ walk ಮಾಡುತ್ತಾ, ಆ ಮರ, ಈ ಮರ ಹೀಗೆ ಎಲ್ಲಾ ಮರದ ಹೆಸರುಗಳನ್ನು ಹೇಳಿ, ಅದು ಅಡಿಕೆ ತೋಟವಾದರೂ ಕೂಡ ಎಲ್ಲಾ

ರೀತಿಯ ಮರಗಳನ್ನು ನೆಟ್ಟಿದ್ದರು. ಆ ಮರಗಳ ಬಗ್ಗೆ ಹೇಳುತ್ತಿದ್ದರು. ಅವರ ಜೊತೆಗೆ ಹೋದರೆ ನೀವು ಒಂದು ತೋಟ ಮಾಡಿ, ನೀವು ಒಂದು ತೋಟ ಮಾಡಿ ಎಂದು ಹೇಳುತ್ತಿದ್ದರು. ಅದನ್ನು ಕೇಳಿಸಿಕೊಂಡು ಕೊನೆಗೆ ನಾನು ಒಂದು ತೋಟ ಮಾಡಿದೆ. ಹೀಗೆ ಎಲ್ಲರನ್ನೂ ಪ್ರೇರಣೆ ಮಾಡುತ್ತಿದ್ದರು ಎಂದು ಹೇಳುವುದಕ್ಕೆ ಹೇಳುತ್ತಿದ್ದೇನೆ. ಅವರಲ್ಲಿ ಅನೇಕ ಪ್ರಥಮಗಳಿದ್ದವು. ಬೀಜದ ಭತ್ತದ ವಿಷಯ ಹೇಳಬೇಕಾದರೆ, ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರವಿದ್ದಾಗ ಬರಗಾಲಕ್ಕೆ ಬಿದ್ದಿತ್ತು. ಆಗ ರೈತರೆಲ್ಲಾ ಕಂಗಾಲಾಗಿದ್ದರು. ಆಗ ಶಿವಮೊಗ್ಗ ಜಿಲ್ಲೆಗೆ ಬೀಜದ ಭತ್ತವನ್ನು ನಾನು ಉಚಿತವಾಗಿ ಕೊಡುತ್ತೇನೆ ಎಂದು ಹೇಳಿದರು. ಸರ್ಕಾರ ಮಾಡಬೇಕಾದ ಕೆಲಸವನ್ನು ಇವರು ಮಾಡುವುದಕ್ಕೆ ಹೊರಟುಬಿಟ್ಟರು. ನಾನು ಆಗ ಎಂ.ಎಲ್.ಎ.ನೂ ಅಲ್ಲ, ಏನೂ ಅಲ್ಲ. ಬೀಜದ ಭತ್ತ ಅಷ್ಟೇ ಅಲ್ಲ, ಬೀಜದ ಜೋಳ ಕೊಡಬೇಕು ಎಂದರು. 'ದುಡ್ಡು ಎಲ್ಲಿದೆ ಸರ್?' ಎಂದು ನಾನು ಕೇಳಿದ್ದಕ್ಕೆ, 'ದುಡ್ಡು ಯಾರೋ ಕೊಡುತ್ತಾರೆ, ಹೇಗೋ ಬರುತ್ತದೆ ಬಿಡೋ, ಸುಮ್ಮನಿರೋ' ಎಂದರು. ಬಡವರಿಗೆ, ಜಮೀನು ಇಲ್ಲದವರಿಗೆ ಏನು ಮಾಡಬೇಕು ಎಂದು ಕೇಳಿದ್ದಕ್ಕೆ ಅವರಿಗೆ ಅಕ್ಕಿ ಕೊಡಬೇಕು ಎಂದು ಹೇಳಿದರು. ಹೀಗೆ ಹೇಳಿ ಪ್ರಾರಂಭ ಮಾಡಿದೆವು. ಆಗ ನಾನು ಎಂಎಲ್.ಎ ಆಗಿದ್ದಂತಹ ಸಮಯದಲ್ಲಿ ಹೊಸನಗರ ಕ್ಷೇತ್ರವಾದ ಆಯನೂರಿನಲ್ಲಿ ಮಾಡತಕ್ಕಂಥ ಸಂದರ್ಭ ಒಲಿತು. 500 ಲಾರಿಗಳು ಪ್ರತಿ ಹಳ್ಳಿಗೆ, ಪ್ರತಿ ಮನೆಗೆ, ಜಮೀನು ಇದ್ದವರಿಗೆ ಬೀಜದ ಭತ್ತ, ಜೋಳ ಬೆಳೆಯುವವರಿಗೆ ಬೀಜದ ಜೋಳ ಹಾಗೂ ಏನೂ ಇಲ್ಲದವರಿಗೆ ಅಕ್ಕಿ ಕೊಡಬೇಕು ಎಂದು ಪ್ರಾರಂಭ ಮಾಡಿದೆವು. ಹೀಗೆ ಇಡೀ ಜಿಲ್ಲೆಯಲ್ಲಿ ಸಾವಿರಾರು ಲಾರಿ ಬೀಜದ ಭತ್ತ, ಬೀಜದ ಜೋಳ ಹಾಗೂ ಅಕ್ಕಿಯನ್ನು ಹಂಚಿದರು. ಸರ್ಕಾರ ಮಾಡುವುದಕ್ಕೆ ಆಗದಿರುವಂತಹ ಕೆಲಸವನ್ನು ಮಾಡಿದರು. ಆ ಸಮಯದಲ್ಲಿ ಮಾನ್ಯ ಎಸ್.ಎಂ.ಕೃಷ್ಣ ರವರ ಸರ್ಕಾರವಿದ್ದಾಗ ಸಾಗರದಲ್ಲಿ ಶ್ರೀ ಶಕ್ತಿ ಸ್ವಸಹಾಯ ಸಂಘ ಎಂದು ಶುರು ಮಾಡಿದರು. ಆಗ ಶ್ರೀಮತಿ ಮೋಟಮ್ಮ ಮಂತ್ರಿಯಾಗಿದ್ದರು, ಅದೊಂದು

ದೊಡ್ಡ ಸಭೆ. ಆಗ ನಮ್ಮದು ಒಂದು ಕಡೆಯಿಂದ 500 ಲಾರಿಗಳ ಮೆರವಣಿಗೆ, ಇನ್ನೊಂದು ಕಡೆ ಸಭೆ, ಕಾಗೋಡು ತಿಮ್ಮಪ್ಪನವರು ಹಾಗೂ ಕುಮಾರ ಬಂಗಾರಪ್ಪನವರು ಮಂತ್ರಿಯಾಗಿದ್ದರು. ಬಂಗಾರಪ್ಪನವರು ಅದೇ ಪಕ್ಷದಲ್ಲಿ ಲೋಕಸಭೆ ಸದಸ್ಯರಾಗಿದ್ದರು. ಆಗ ಎಸ್.ಎಂ.ಕೃಷ್ಣರವರು announce ಮಾಡಿದರು, CRF ನಲ್ಲಿ 25% ಬೀಜದ ಭತ್ತಕ್ಕೆ ಸಬ್ಸಿಡಿ ಕೊಡುತ್ತೆವೆಂದು ಪ್ರಾರಂಭ ಮಾಡಿದರು. ಇದಕ್ಕೆ ಕಾರಣ ಬಂಗಾರಪ್ಪನವರು. ಈಗ ನಾವು 50% ಸಬ್ಸಿಡಿ ಕೊಡುತ್ತಿದ್ದೇವೆ ಹೀಗೆ ಪ್ರಥಮವಾಗಿ ಕಾರಣರಾದವರು ಬಂಗಾರಪ್ಪನವರು. ಅವರ ಇನ್ನೊಂದು ವಿಶೇಷತೆ ಎಂದರೆ 10–11 ಸಾರಿ ಚುನಾವಣೆಯಲ್ಲಿ ಗೆದ್ದರು. ಪ್ರತಿ ಚುನಾವಣೆಯಲ್ಲೂ ಪ್ರತಿ ಸಾರಿ ಚಿಹ್ನೆ ಬದಲು. 1967ರಲ್ಲಿ ಗುಡಿಸಲು ಎಂದೆನಿಸುತ್ತದೆ, ನನಗೆ ಗೊತ್ತಿಲ್ಲ, 1972ರಲ್ಲಿ ಆಲದ ಮರ, 1978ರಲ್ಲಿ ಹಸು ಕರು, 1983ರಲ್ಲಿ ಚಕ್ರದೊಳಗಿನ ನೇಗಿಲು ಹೊತ್ತ ರೈತ, 1985ರಲ್ಲಿ ಹಸ್ತ, 1989ರಲ್ಲಿ ಹಸ್ತ. ಕ್ರಾಂತಿರಂಗಕ್ಕೆ ಹೋಗಿ ಅಲ್ಲೂ ಗೆದ್ದರು. ನನ್ನ ಚಿಹ್ನೆ ಯಾವುದೆಂದು ಹೇಳುವುದಷ್ಟೇ ಕಾರ್ಯಕರ್ತರ ಕೆಲಸ, ಯಾವ ಪಕ್ಷ ಎಂದು ಬೇಡ ಎಂದವರು ಹೇಳುತ್ತಿದ್ದರು. ನಮ್ಮ ದೊಡ್ಡ ಸಾಹೇಬರದು ಈ ಸಾರಿ ಎಂಥ ಚಿಹ್ನೆ ಎಂದು ಹೇಳುತ್ತಿದ್ದೆವು. 1994ರಲ್ಲಿ ಕೆ.ಸಿ.ಪಿ. ಕಟ್ಟಿದರು. ಆಗ ತೆಂಗಿನಮರದ ಗುರುತು ಇತ್ತು. ಇದು ಬಹಳ ಜನಕ್ಕೆ ಮರೆತುಹೋಗಿದೆ. ತಾಂತ್ರಿಕ ಕಾರಣದಿಂದ ಸೈಕಲ್ ಸಿಗಲಿಲ್ಲ. ಸೈಕಲ್ ಎಂದು ಎಲ್ಲಾ ಕಡೆ ಪ್ರಚಾರ ಮಾಡಿದ್ದೆವು. ಅದರಲ್ಲೂ ಗೆದ್ದರು. ಹತ್ತು ಜನ ಗೆದ್ದರು. ಅದರಲ್ಲಿ ಐದು ಜನ ರಾಜಕೀಯವಾಗಿ ಏನೋ ಆಗಿ ಬೇರೆ ಪಕ್ಷಕ್ಕೆ ಹೋದರು. ನಂತರ ಲೋಕಸಭೆಗೆ ಹೋಗಬೇಕೆಂದು ಹೇಳಿ 1996ರಲ್ಲಿ ಕೆ.ಸಿ.ಪಿ.ಯಿಂದ ಲೋಕಸಭೆಗೆ ಗೆದ್ದರು. ಶ್ರೀ ಶ್ರೀನಿವಾಸ ಪ್ರಸಾದ್‌ರವರು ಕಾಂಗ್ರೆಸ್ ಎಂದು ಹೇಳಿದರು. 1994ರಲ್ಲಿ ವಿಧಾನಸಭೆಗೆ ತೆಂಗಿನಮರ, 1996ರಲ್ಲಿ ಸೈಕಲ್ ಗುರುತು, ಆಗ ಲೋಕಸಭೆಗೆ ಗೆದ್ದು ಹೋದರು. ಜನತಾದಳದಿಂದ 16 ಜನ ಲೋಕಸಭೆಗೆ ಆಯ್ಕೆಯಾಗಿ ಹೋದರು. ಶ್ರೀ ದೇವೇಗೌಡರು ಪ್ರಧಾನ ಮಂತ್ರಿಯಾದರು. ಪ್ರಧಾನ ಮಂತ್ರಿಯನ್ನು

ಆರಿಸುವವರಾದ ಲಲ್ಲೂ ಪ್ರಸಾದ್ ಯಾದವ್, ಇತರರ ನಡುವೆ ಬಂಗಾರಪ್ಪನವರು ಕನ್ನಡಕ ಹಾಕಿಕೊಂಡು ಜೋರಾಗಿ ಕುಳಿತುಕೊಳ್ಳುತ್ತಿದುದು ನಮಗೊಂದು ಖುಷಿ. ಆಗ 24x7 ಚಾನಲ್‌ಗಳು ಇರಲಿಲ್ಲ. ಯಾವುದೋ ಒಂದು ಟಿ.ವಿ.ಯಲ್ಲಿ ಸ್ವಲ್ಪ ಬರುತ್ತಿತ್ತು ನೋಡುತ್ತಿದ್ದೆವು. ಬಂಗಾರಪ್ಪನವರು ಕೇಂದ್ರದಲ್ಲಿ ಮಂತ್ರಿಯಾಗುತ್ತೇನೆಂದು ನಮಗೆಲ್ಲ phone ಮಾಡಿ ಹೇಳಿದ್ದರು ಆ ಸಂದರ್ಭದಲ್ಲಿ ಅವರಿಗೆ ಆಸೆ ಕೂಡ ಇತ್ತು. ಯಾವುದೋ ರಾಜಕೀಯ ಕಾರಣಕ್ಕೆ ಅವತ್ತಿನ ದಿನ ಕೇಂದ್ರದಲ್ಲಿ ಮಂತ್ರಿಯಾಗುವುದಕ್ಕೆ ಆಗಲಿಲ್ಲ. 1996ರಲ್ಲಿ ಕೇಂದ್ರದಲ್ಲಿ ಮಂತ್ರಿಯಾಗುವುದಕ್ಕೆ ಬಂಗಾರಪ್ಪನವರಿಗೆ ಒಂದು ಅವಕಾಶವಿತ್ತು ಆದರೆ ಆಗಲಿಲ್ಲ. ಅದಾದ ಮೇಲೆ ಕಾಂಗ್ರೆಸ್‌ನವರು ಬೆಂಬಲ ವಾಪಸ್ಸು ತೆಗೆದುಕೊಂಡು ದೇವೇಗೌಡರ ಸರ್ಕಾರ ಬಿದ್ದು ಹೋಯಿತು. ಮತ್ತೆ ಚುನಾವಣೆ ಬಂತು. ಮತ್ತೆ ಒಂದು ಪಕ್ಷ ಕಟ್ಟಬೇಕೆಂದು ಬಂಗಾರಪ್ಪನವರು ಅಂದರು. ಇಲ್ಲಾ ಮತ್ತೆ ಕಾಂಗ್ರೆಸ್‌ಗೆ ಹೋಗೋಣ ಎಂದೆವು ಬೇಡ ಎಂದು ಹೇಳಿ ಕರ್ನಾಟಕ ವಿಕಾಸ ಪಕ್ಷ ಕಟ್ಟಿದೆವು. ಆಗ ನಮ್ಮ ಗುರುತು ಡೀಸೆಲ್ ಪಂಪ್‌ಸೆಟ್, ಅವರಿಗಾದ ಮೊದಲನೇ ಸೋಲು ಅದು. 1999ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡು ಹಸ್ತದ ಗುರುತಿನಲ್ಲಿ ಗೆದ್ದರು. ಅದಾದ ನಂತರ 2004ರಲ್ಲಿ ಬಿಜೆಪಿಗೆ ಬಂದರು, ಅಲ್ಲಿ ಕಮಲದ ಗುರುತು. ನಂತರ ಅಲ್ಲೂ ರಾಜೀನಾಮೆ ಕೊಟ್ಟರು. ಮತ್ತೆ ಸಮಾಜವಾದಿ ಪಕ್ಷ, ಇದು ನಮ್ಮ ಹಳೇ ಪಾರ್ಟಿ, ಕೆಂಪು ಟೋಪಿ ಹಾಕಿಕೊಂಡು ಬಂದರೆ ಎಷ್ಟು ಸಂತೋಷವಾಗುತ್ತದೆ ಗೊತ್ತಾ ಎಂದು ಹೆಮ್ಮೆಪಡುತ್ತಿದ್ದರು. 1967ರಲ್ಲಿ ಗೆದ್ದಿದ್ದು ಸಮಾಜವಾದಿ ಪಕ್ಷ, ಇದೇ ನನ್ನ ಕೊನೆ ಚುನಾವಣೆ ಎಂದು ಹೇಳಿ ಲೋಕಸಭೆ ಚುನಾವಣೆಯಲ್ಲಿ ಗೆದ್ದರು. ಹೀಗೇ ಪ್ರತಿ ಚುನಾವಣೆಯಲ್ಲಿ ಒಂದೊಂದು ಚಿಹ್ನೆ ಹೀಗೆ 8 ಬಾರಿ ಚಿಹ್ನೆ ಬದಲು ಮಾಡಿ 11 ಸಾರಿ ಚುನಾವಣೆಯಲ್ಲಿ ಗೆದ್ದಿದ್ದರು. ಅವರದು ಇದೊಂದು ವಿಶೇಷ. ಹೀಗೆ ಅವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಟ್ಟಿದ್ದಾರೆಂದು ಹಿರಿಯರು ಹೇಳಿದ್ದಾರೆ. ಅವುಗಳನ್ನು ಯಾರೂ ಅಳಿಸುವುದಕ್ಕಾಗುವುದಿಲ್ಲ. ಅಂಥ

ಕಾರ್ಯಕ್ರಮಗಳಲ್ಲೊಂದು ಆಶ್ರಯ ಕಾರ್ಯಕ್ರಮ, ಇದನ್ನು ಯಾವ ಸರ್ಕಾರ ಬಂದರೂ, ಯಾರೇ ಮಂತ್ರಿ ಬಂದರೂ, ಮುಖ್ಯಮಂತ್ರಿ ಬಂದರೂ ಅಳಿಸುವುದಕ್ಕಾಗುವುದಿಲ್ಲ. ಈಗ ಸೈಕಲ್ ಕೊಡುತ್ತಿದ್ದೇವೆ. ಯಾರೂ ಅನ್ಯಥಾ ಭಾವಿಸುವುದು ಬೇಡ. ಈ ಕಾರ್ಯಕ್ರಮವನ್ನು ಶುರು ಮಾಡಿದವರೂ ಕೂಡ ಬಂಗಾರಪ್ಪನವರೇ, ಯಾವ ಹೆಣ್ಣುಮಗಳು ಅಕ್ಷರ ಎಂದು ಹೇಳಿ ಶಾಲೆಗೆ ಬರುತ್ತಾಳೋ ಅವಳಿಗೆ ದಿನಕ್ಕೆ ಒಂದು ರೂಪಾಯಿ ಕೊಡಬೇಕೆಂದು ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಮಾಡಿದರು. ಅದನ್ನು ತಾಯಿ ಕೈಯಲ್ಲೇ ಕೊಡಬೇಕೆಂದು ಮಾಡಿದರು. ಏಕೆಂದರೆ ಗಂಡನ ಕೈಯಲ್ಲಿ ಕೊಟ್ಟರೆ ಅವನು ಕ್ವಾರ್ಟರ್ ಅಂಗಡಿಗೆ ಹೋಗಿ ಖರ್ಚು ಮಾಡಿಬಿಡುತ್ತಾನೆ ಎಂದು ಹೇಳುತ್ತಿದ್ದರು. ಒಂದು ರೂಪಾಯಿ ಇರುವುದು ನಂತರ ಅಕ್ಕಿ ಕೊಟ್ಟರು, ಬಿಸಿಯೂಟವಾಯಿತು. ಇವತ್ತು ಸೈಕಲ್ ಕೊಡುತ್ತಿದ್ದಾರೆ, ಹೀಗೆ ಹಂತ ಹಂತವಾಗಿ ಬಂಗಾರಪ್ಪನವರು ಮಾಡಿದ ಪ್ರಥಮಗಳು. ಇನ್ನೊಂದು ಕಾವೇರಿ ಬಗ್ಗೆ ಚರ್ಚೆಯಾಗುತ್ತಿತ್ತು. ಆಗ ಸುಗ್ರೀವಾಜ್ಞೆ ತಂದರು. ಈ ದೇಶದಲ್ಲಿ ಇದು ಸಾಧ್ಯವೇ, ಸುಗ್ರೀವಾಜ್ಞೆ ಮಾಡುವುದು ತಪ್ಪು ಎಂದು ಹೇಳಿದರು. ಆದರೂ ಧೈರ್ಯವಾಗಿ ತಂದರು. ಹೀಗೇ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಬಂಗಾರಪ್ಪನವರು ಇಷ್ಟೆಲ್ಲಾ ಪಕ್ಷಗಳನ್ನು ಮಾಡಿದ್ದರಿಂದ ಅನೇಕ ಹಿರಿಯ ಮುಖಂಡರುಗಳು ಸೋತರು, ಹೊಸಬರಿಗೆ ಒಂದು ಅವಕಾಶವಾಯಿತು. ಕ್ರಾಂತಿರಂಗ ಮಾಡಿದ್ದರಿಂದಾಗಿ ಅನೇಕ ಜನ ಯುವಕರಿಗೆ ಅವಕಾಶವಾಯಿತು. ನಾನು ಎಂ.ಎಲ್.ಎ. ಗಳನ್ನು ತಯಾರು ಮಾಡುವ ಫ್ಯಾಕ್ಟರಿ ಎಂದು ಅವರು ಹೇಳುತ್ತಿದ್ದರು. ಕೊನೇ ದಿನಗಳಲ್ಲಿ ಅವರಿಗೆ ಬೇಸರವಾಯಿತು. ಇಲ್ಲಾ ಸಾರ್ ನಿಮ್ಮದು ಹಳೇ ಮಾಡೆಲ್ ಆಯ್ತು ಈಗ ರೆಡ್ಡಿ ಹಾಗೂ ಯಡಿಯೂರಪ್ಪ ಮಾಡೆಲ್‌ಗಳು ಬಂದಿವೆಯೆಂದು ಅವರಿಗೆ ಒಂದು ಬಾರಿ ಹೇಳಿದ್ದೆ. ಅದಕ್ಕೆ ಅವರು ಏನು ಹೇಳಿದೆಯೆಂದು ಜೋರು ಮಾಡಿದರು. ಏಕೆಂದರೆ ಬಿಜೆಪಿ ಬಿಡಬೇಕೋ ಬೇಡವೋ ಎಂದು ತೀರ್ಮಾನ ಮಾಡುವ ಸಂದರ್ಭದಲ್ಲಿ ನಾನು ಎಂ.ಎಲ್.ಎ.ಗಳನ್ನು ತಯಾರು ಮಾಡತಕ್ಕ ಫ್ಯಾಕ್ಟರಿ

ಎಂದಾಗ, ಹೊಸ ಮಾಡೆಲ್ ಬಂದಿದೆ, ನಮ್ಮದು ಹಳೇ ಮಾಡೆಲ್ ಎಂದು ಹೇಳಿದೆ. ಕೇಳಲಿಲ್ಲ. ಹೀಗೆ ಅನೇಕ ಕಡೆ ಎಂ.ಎಲ್.ಎ.ಗಳು ಆಗುವುದಕ್ಕೆ ಬಂಗಾರಪ್ಪನವರು ಕಾರಣವೆಂದು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ. ಸಾಹಿತ್ಯ ಹಾಗೂ ಸಂಗೀತದ ಬಗ್ಗೆ ಅವರಿಗೆ ಬಹಳ ಆಸಕ್ತಿ. ಡಿ.ವಿ.ಗುಂಡಪ್ಪನವರ ಒಂದು ಕವಿತೆಯನ್ನು ಇವರು ಬಹಳ ನಿರರ್ಗಳವಾಗಿ ಹೇಳುತ್ತಿದ್ದರು. ಮೊದಲನೇ ಸಾರಿ ಕೆ.ವಿ.ಪಿ. ಮಾಡಿ ಸೋತಿದ್ದರು. ಇದರಿಂದ ನಮಗೆ ಬೇಸರವಾಗುತ್ತಿತ್ತು. ಆದರೆ ಅವರಿಗೆ ಬೇಸರವಾಗುತ್ತಿರಲಿಲ್ಲ. ಆಗ ಡಿ.ವಿ.ಗುಂಡಪ್ಪನವರ ಕವಿತೆಯಾದ "ಇದು ಸೋತೆನೆಂದೆನಬೇಡ, ಸತ್ತೆನೆಂದೆನಬೇಡ, ಸೊಕ್ಕಿತೆನ್ನೊಳು ಸತ್ವದೂತೆನ್ನಬೇಡ ಸೋಲು ಗೆಲುವೆಂಬುದೊಂದು ತೆರೆ ಏರಿಳಿತ, ತೆರೆ ಏರು ಮತ್ತೆ ತೋರ್ಪುದು ನಾಳೆ" ಎಂದು ಕವಿ ಹೇಳಿದ್ದಾನೆ, ದೊಡ್ಡವರು ಹೇಳಿದ್ದಾರೆ ಕೇಳಿ, ನಾನು ಮತ್ತೆ ರಾಜಕೀಯವನ್ನು ಕಟ್ಟುತ್ತೇನೆಂದರು. ಏಕೆಂದರೆ ಬಂಗಾರಪ್ಪನವರು ಸೋಲಿಲ್ಲದ ಸರದಾರರು, ಆದರೆ ಸೋತುಬಿಟ್ಟರು. ರಾಜಕೀಯದಲ್ಲಿ ಎಂ.ಎಲ್.ಎ. ಆಗಬೇಕು ಮತ್ತೊಂದು ಆಗಬೇಕೆಂದುಕೊಂಡಿರುವ ನಾವು ಅವರೇ ಸೋತರೆ ಹೇಗೆ ಎಂದು ಕಂಗಾಲಾದಾಗ ಇನ್ನೂ ಅನೇಕ ಕವಿತೆಗಳನ್ನು ಹೇಳುವ ಅಭ್ಯಾಸವನ್ನು ಅವರು ಮಾಡಿಕೊಂಡಿದ್ದರು. ಮುಖ್ಯಮಂತ್ರಿಯಾಗಿದ್ದಾಗ ಡೊಳ್ಳು ಹೊಡೆದರು. ಆ ಕಾಲದಲ್ಲಿ ದೊಡ್ಡ ಪತ್ರಕರ್ತರಾಗಿದ್ದ ವಡ್ಡರಸೆ ರಘುರಾಮಶೆಟ್ಟರು ಅವರ ಸ್ನೇಹಿತರು. ಬಿ.ವಿ.ವೈಕುಂಠರಾಜು ಇವರಿಬ್ಬರೂ ಬೇರೆ ಬೇರೆ ಪತ್ರಿಕೆಯ ಪತ್ರಕರ್ತರು, ಸಾರೇಕೊಪ್ಪದ ಬಂಗಾರಪ್ಪನಾಗಿ ಡೊಳ್ಳು ಹೊಡಿ, ಆದರೆ ಮುಖ್ಯಮಂತ್ರಿಯಾಗಿದ್ದಾಗ ಡೊಳ್ಳು ಹೊಡೆಯುವುದು ಎಷ್ಟರ ಮಟ್ಟಿಗೆ ಸರಿ ಎಂದು ಕೇಳಿದರು. ನಾನು ಮುಖ್ಯಮಂತ್ರಿಯಾಗಿದ್ದರೂ ಬಂಗಾರಪ್ಪನೇ, ಹಾಗೇ ಇದ್ದರೂ ಬಂಗಾರಪ್ಪನೇ, ಸಾರೆಕೊಪ್ಪದ ಬಂಗಾರಪ್ಪ ನಡಿ ನಡಿ ಎಂದು ಹೆದರಿಸಿದರು. ಅವರಿಗೆ ಹೀಗೇ ಅವರು ತಾವು ಏನು ಮಾಡುತ್ತಾರೋ ಅದನ್ನು ಪ್ರೀತಿ ಮಾಡುತ್ತಿದ್ದರು. ಇನ್ನೊಂದು ನನ್ನ ಕೊನೇ ಮಾತು. ಅವರು ಜನರನ್ನು

ಎಷ್ಟು ಪ್ರೀತಿ ಮಾಡುತ್ತಿದ್ದರು ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಹತ್ತು ವರ್ಷಗಳಿಂದೀಚೆಗೆ ಮೊದಲು ಸಣ್ಣ ಮನೆಯಲ್ಲಿದ್ದರೂ ಆ ಮನೆಯನ್ನು ಬಿಟ್ಟು ಹೋದ ನಂತರ ಹೊಸ ಮನೆಯನ್ನು ತೆಗೆದುಕೊಂಡರು. ಆ ಮನೆಯ ಗೃಹಪ್ರವೇಶ ಮತ್ತು ಎರಡನೇ ಮಗನ ಮದುವೆ ಎರಡೂ ಒಂದೇಸಾರಿ ಕಾರ್ಯಕ್ರಮ. ಎಲ್ಲಿ ನೋಡಿದರೂ ಸಂಭ್ರಮ. ಒಳ್ಳೊಳ್ಳೆ ಕಡೆಗೆ ಹೆಣ್ಣುಮಕ್ಕಳನ್ನು ಕೊಟ್ಟಿದ್ದರು. ಒಳ್ಳೊಳ್ಳೆ ಕಡೆಗಳಿಂದ ಹೆಣ್ಣುಮಕ್ಕಳನ್ನು ತಂದಿದ್ದರು, ಹಾಗಾಗಿ ಎಲ್ಲಾ ಕಡೆ ಸಂಭ್ರಮ, ಶ್ರೀಮಂತರು ಎಲ್ಲಾ ಬಂದು ಹೋಗುತ್ತಿದ್ದರು. ಆಚರಣೆ ನಡೆಯುತ್ತಿತ್ತು. ಪ್ಯಾಲೇಸ್ ಗ್ರೌಂಡ್‌ನಲ್ಲಿ ಮದುವೆ. ಸಮಯ ಸುಮಾರು ಮೂರೂವರೆಯಾಗಿತ್ತು. ಆದರೆ ಯಾರೂ ಸೊರಬದವರು ಕಾಣುತ್ತಿಲ್ಲವಲ್ಲ? ಯಾರ್‍ಯಾರೋ ಕಾಣುತ್ತಿದ್ದಾರಲ್ಲ ಎಂದರು. ಯಾರ್‍ಯಾರೋ ಕಾಣುತ್ತಿಲ್ಲ. ಸದಾಶಿವನಗರದ ಹೊಸ ಮನೆ ಎಲ್ಲಾ ದೊಡ್ಡ ದೊಡ್ಡ ಸಂಬಂಧಿಕರು ಶ್ರೀಮಂತರು ಹಾರ ತುರಾಯಿ ಕೊಡುವವರೆಲ್ಲಾ ಬರುತ್ತಿದ್ದರು. ಆಗ ಬಂಗಾರಪ್ಪನವರು "ಎಲ್ಲಿ ಸೊರಬದ ಜನ ಕಾಣುತ್ತಿಲ್ಲ?, ಎಷ್ಟು ಬಸ್ ಮಾಡಿಸಿದ್ದೀರಿ" ಎಂದು ನನ್ನನ್ನು ಕೇಳಿದರು. ಪ್ರತಿ ಹಳ್ಳಿಗೊಂದು ಬಸ್‌ನಂತೆ 301 ಬಸ್ ಮಾಡಿಸಬೇಕೆಂದು ಮೊದಲೇ ಅವರು ಹೇಳಿದ್ದರು. 'ಎಲ್ಲರೂ ಈ ಮನೆಗೆ ಬರಬೇಕು' ಎಂದು ಕೂಡ ಹೇಳಿದ್ದರು. 'ಇಲ್ಲಾ, ಪ್ಯಾಲೇಸ್ ಗ್ರೌಂಡ್‌ನಲ್ಲಿ ಮದುವೆ, ಅಲ್ಲೇ ಊಟ, ಅಲ್ಲೇ ಬಸ್‌ಗಳನ್ನು halt ಮಾಡಿದ್ದೇವೆ. ಅಲ್ಲಿ ಎಲ್ಲಾ ವ್ಯವಸ್ಥೆಯಿದೆ' ಎಂದು ಹೇಳಿದಾಗ ಬಂಗಾರಪ್ಪನವರು ಅವರ ಪಿ.ಎ.ಯನ್ನು ಕರೆದು, 'ಸೊರಬದ 300 ಹಳ್ಳಿಗಳಿಂದ ಬಂದಿರುವ ಪ್ರತಿಯೊಬ್ಬ ಮನುಷ್ಯನೂ ಕೂಡ ಈ ಮನೆಯ ಪ್ರತಿಯೊಂದು ಕೊಠಡಿಯಲ್ಲಿ ಓಡಾಡಿ ಹೋಗಬೇಕು. ಸೊರಬದ ಜನರ ಪಾದದ ಧೂಳನ್ನು ಈ ಮನೆಯ ಪ್ರತಿಯೊಂದು ಕೊಠಡಿಯ ಮೂಲೆ ಮೂಲೆಯಲ್ಲಿ ಮೆತ್ತಬೇಕು, ಆಗ ನನಗೆ ಸಮಾಧಾನ, ಈ ಮನೆ ಹಾಗೂ ನಾನು ಈ ಮಟ್ಟಕ್ಕೆ ಬರುವುದಕ್ಕೆ ಕಾರಣ ಸೊರಬದ ಜನ' ಎಂದು ಹೇಳಿದರು. ಹೀಗೇ ಇಡೀ ರಾಜ್ಯದ ಹಾಗೂ ಜಿಲ್ಲೆಯ ಜನರನ್ನು ಪ್ರೀತಿ

ಮಾಡುತ್ತಿದ್ದರು. ಅಂತಹವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರ ಕುಟುಂಬಕ್ಕೆ ಮತ್ತು ಅವರ ಆತ್ಮಕ್ಕೆ ಸುಖ ಶಾಂತಿ ಸಿಗಲೆಂದು ಆ ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಮಹದೇವ ಅವರು ನಮಗೇನು ಅಷ್ಟು ಹತ್ತಿರದವರಲ್ಲ. ಅವರು ಮತ್ತು ನಾವು ಎಲ್ಲರೂ ಗಾಂಧಿನಗರದಲ್ಲಿ ಓಡಾಡುತ್ತಿದ್ದೆವು. ಕೆಲವೊಂದು ಸಂದರ್ಭದಲ್ಲಿ ಅವರು, ನಾವು ಎಲ್ಲಾ ಇಲ್ಲೇ ಕುಳಿತುಕೊಳ್ಳುತ್ತಿದ್ದೆವು. ಮೊದಲನೆಯ ಸಾರಿ ನಾನು MLAಯಾಗಿದ್ದಾಗ, ಅವರು MLA ಆಗಿದ್ದರು. ಮಾನ್ಯ ಸಿದ್ದರಾಮಯ್ಯನವರು ಕಾಂಗ್ರೆಸ್ಸಿಗೆ ಹೋದರು. 'ಆಣ್ಣಾ, ನಿಮಗೆ ಸೀಟು ಕೊಡುತ್ತಾರೆಯೇ ಅಥವಾ ಕಾಂಗ್ರೆಸ್‌ನ ವಿಶ್ವನಾಥ್ ಅವರಿಗೆ ಸೀಟು ಕೊಡುತ್ತಾರೆಯೇ?' ಎಂದು ನಾನು ಅವರನ್ನು ಪ್ರಶ್ನೆ ಮಾಡಿದೆ. ಆಗ ಅವರು 'ಮಾನ್ಯ ವಿಶ್ವನಾಥ್ ಅವರು ಎಂ.ಪಿ.ಗೆ ಹಾಗೂ ನಾನು MLAಗೆ ನಿಂತುಕೊಳ್ಳುತ್ತೇನೆ ಎಂದು ಹೇಳಿದರು. ಅಷ್ಟೊತ್ತಿಗಾಗಲೇ ಸಣ್ಣ ಮಾತುಕತೆಗಳಾಗಿದ್ದವು. ಅಂಥವರು ಇಷ್ಟು ಬೇಗ ಹೋಗಿದ್ದಾರೆಂದರೆ ನಂಬಲಿಕ್ಕೆ ಆಗುತ್ತಾ ಇಲ್ಲ. ಅವರ ಆತ್ಮಕ್ಕೂ ಕೂಡ ಶಾಂತಿ ಸಿಗಲೆಂದು ಪ್ರಾರ್ಥನೆ ಮಾಡುತ್ತಾ, ಅಗಲಿದಂತಹ ಎಲ್ಲಾ ಗಣ್ಯರಿಗೂ ನನ್ನ ಸಂತಾಪವನ್ನು ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ತಮಗೆಲ್ಲರಿಗೂ ನಮಸ್ಕಾರಗಳು.

ಶ್ರೀ ಟಿ.ಬಿ.ಜಯಚಂದ್ರ (ಶಿರಾ):- ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಕಳೆದ ಅಧಿವೇಶನದಿಂದ ಇಲ್ಲಿಯವರೆಗೂ ಬಹಳಷ್ಟು ಜನ ರಾಜಕಾರಣಿಗಳು ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದಂತಹವರನ್ನು ನಾವು ಕಳೆದುಕೊಂಡಿದ್ದೇವೆ. ನಾವು ಮಾನ್ಯ ಬಂಗಾರಪ್ಪನವರ ಬಗ್ಗೆ ಮಾಡನಾಡಬೇಕಾಗಿದೆ. ಸದನದ ಎಲ್ಲಾ ಭಾಗಗಳಿಂದ ಕೂಡ ಅವರ ಬಗ್ಗೆ ಮಾತನಾಡುವುದಕ್ಕೆ ಹೆಚ್ಚು ಜನ ಇದ್ದಾರೆ. ಆ ಕಾರಣದಿಂದಾಗಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀಮಾನ್ ಹಾಲಪ್ಪನವರು, ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಎಲ್ಲರೂ ಕೂಡ ಅವರ

ಬಗ್ಗೆ ಅನೇಕ ಮಾತುಗಳಲ್ಲಿ ಬಣ್ಣಿಸಿದ್ದಾರೆ ಹಾಗೂ ನುಡಿಗಳನ್ನು ಮೆಲುಕು ಹಾಕಿದ್ದಾರೆ. ಬಹುಶಃ ಮಾನ್ಯ ಬಂಗಾರಪ್ಪನವರು ಒಬ್ಬ ವರ್ಣರಂಜಿತ ವ್ಯಕ್ತಿ ಎಂದು ಹೇಳಿದರೆ ತಪ್ಪಾಗಲಾರದು. ಅವರ ಜೀವನದುದ್ದಕ್ಕೂ ಕೂಡ ಹಠ, ಛಲ ಮತ್ತು ಬಂಡಾಯದ ಮನೋಭಾವ ಹಾಗೂ ಹೆದರಿಕೆ ಎನ್ನುವುದು ಏನು ಎಂದು ಗೊತ್ತಿಲ್ಲದಿರುವುದನ್ನು ಎಲ್ಲಾ ಸಂದರ್ಭಗಳಲ್ಲೂ ಪ್ರದರ್ಶನ ಮಾಡಿರುವಂತಹವರು. ನಾನು ಈ ಸಂದರ್ಭದಲ್ಲಿ ಹೇಳುವುದಿಷ್ಟೇ. ಅವರು ಏಳು ಬಾರಿ ಶಾಸಕರಾಗಿ, ಮೂರು ಬಾರಿ ಸಂಸತ್ ಸದಸ್ಯರಾಗಿದ್ದರು. ಅವರು ಯಾವತ್ತೂ ಕೂಡ, ಯಾವ ಪಕ್ಷದಲ್ಲಿದ್ದರೂ ಕೂಡ ಅವರಷ್ಟು ಯಾರೂ ಬೇರೆ ಪಕ್ಷಗಳಿಗೆ ಹೋಗಲಿಲ್ಲ. ಹೋಗಲು ಸಾಧ್ಯವೂ ಇಲ್ಲ. ಅವರು ಬೇರೆ ಪಕ್ಷಕ್ಕೆ ಹೋದಾಗ್ಯೂ ಕೂಡ ಬಡವರ ಬಗ್ಗೆ ಅವರ ಕಳಕಳಿ ಮಾತ್ರ ಕಡಿಮೆ ಆಗಲಿಲ್ಲ. ಆ ವಿಚಾರದಲ್ಲಿ ಅವರು ಎಂದಿಗೂ compromise ಆಗುತ್ತಿರಲಿಲ್ಲ. ಬಡವರಿಗೆ ಕಾರ್ಯಕ್ರಮಗಳನ್ನು ಕೊಡಬೇಕು. ಕಾರ್ಯಕ್ರಮಗಳ ಮುಖೇನ ಜನರನ್ನು ಸ್ಪಂದಿಸಬೇಕೆನ್ನುವುದೇ ಅವರ ಅಭಿಲಾಷೆ. ನಾವು ಈ ಸಂದರ್ಭದಲ್ಲಿ ಹೇಳುವುದಿಷ್ಟೇ, ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ಇಲ್ಲೇ ಇದ್ದಾರೆ. ಈಗ ಗ್ರಾಮೀಣ ಪ್ರದೇಶದಿಂದ ಬರುವಂತಹ ಮಕ್ಕಳಿಗೆ 5–15% ರವರೆಗೆ ಕೃಪಾಂಕಗಳನ್ನು ಕೊಟ್ಟು ಅವರಿಗೆ ಆದ್ಯತೆಯನ್ನು ನೀಡಿ, ನೌಕರಿಗೆ ಸೇರಲು ಅನುಕೂಲವಾಗುವಂತಹ ತೀರ್ಮಾನ ಮಾಡಿದ್ದು, ಬಹುಶಃ ಈ ದೇಶದಲ್ಲಿ ಇವರೇ ಮೊದಲ ಮುಖ್ಯಮಂತ್ರಿ ಎಂದು ಹೇಳಿದರೆ ತಪ್ಪಾಗಲಾರದು. ಕೊನೆಗೆ ಏನಾಯಿತು ಎಂದರೆ ಈ ವಿಚಾರ ಕೋರ್ಟಿಗೆ ಹೋಯಿತು. ಕೋರ್ಟಿನಲ್ಲಿ ಇದು constitutional ಆಗಿಲ್ಲ ಎಂದು ಹೇಳಿ set aside ಆಯಿತು. ಈಗ ಸುಮಾರು ನಾಲ್ಕೈದು ವರ್ಷ ಕೆಲಸ ಮಾಡಿರುವಂತವರಿಗೆ, ಈಗಾಗಲೇ ಕೆಲಸ ಮಾಡುತ್ತಿರುವಂತಹವರಿಗೆ ಯಾವುದೇ ರೀತಿಯ ಪ್ರಮೋಷನ್, ಇನ್‌ಕ್ರಿಮೆಂಟ್ ಸೌಲಭ್ಯಗಳಿಲ್ಲ, ಅವರುಗಳಿಗೆ ಸರ್ವೀಸ್ ಕೂಡ ಸಿಗಲಿಲ್ಲ. ಅವರ ಸರ್ವೀಸ್‌ನ್ನು ಸೇರಿಸಿಕೊಡುವುದಕ್ಕೆ ಏನಾದರೊಂದು ವಿಶೇಷವಾದ ಯೋಜನೆ ಮಾಡಿ, ಅವರಿಗೆ ಆಗಿರತಕ್ಕಂತಹ ನಷ್ಟವನ್ನು ತುಂಬುವುದಕ್ಕೆ

ಏನಾದರೊಂದು ಕೆಲಸವನ್ನು ಮಾಡಿದರೆ ಮಾನ್ಯ ಬಂಗಾರಪ್ಪನವರಿಗೆ ತಾವು ಒಂದು ಒಳ್ಳೆಯ ಕೃತಜ್ಞತೆಯನ್ನು ಸಲ್ಲಿಸಿದಂತಾಗುತ್ತದೆ. ಮಾನ್ಯ ಬಂಗಾರಪ್ಪನವರ ಮುಖ್ಯ ಕಾರ್ಯಕ್ರಮಗಳೆಂದರೆ ಆಶ್ರಯ, ಆರಾಧನಾ, ಅಕ್ಷಯ, ಶುಶ್ರೂಷಾ. ಈ ಎಲ್ಲಾ ಕಾರ್ಯಕ್ರಮಗಳು ಯಾವತ್ತೂ ಕೂಡ ಜನರ ಹಾಗೂ ರೈತ ಮನಸ್ಸಿನಲ್ಲಿ ಉಳಿಯುವಂತಹದ್ದು. ಮಾನ್ಯ ಬಂಗಾರಪ್ಪನವರು ಇಲ್ಲದಿದ್ದರೂ ಕೂಡ ಆ ಕಾರ್ಯಕ್ರಮಗಳನ್ನು ಮುಚ್ಚಿ ಹಾಕುವುದಕ್ಕೆ ಸಾಧ್ಯವೇ ಇಲ್ಲ. ಆ ಹೆಸರನ್ನೂ ಸಹ ಅವರು ಮುಚ್ಚಿ ಹಾಕುವುದಕ್ಕೆ ಸಾಧ್ಯವಿಲ್ಲ. ಆ ರೀತಿಯಾಗಿ ಕಾರ್ಯಕ್ರಮಗಳನ್ನು ಕೊಟ್ಟು ಹೋಗಿರತಕ್ಕಂಥಹದು. ಅದೇ ರೀತಿಯ ಹೆಸರುಗಳನ್ನು ಸಹ ಇಟ್ಟಿದ್ದರು. ಹಾಗಾಗಿ, ನನಗನಿಸಿದಂತೆ ಎಲ್ಲೋ ಒಂದು ಕಡೆಗೆ ಆಶ್ರಯ ಯೋಜನೆ ಬಗ್ಗೆ ಇಂದು ತಾವೇ ಯೋಚನೆ ಮಾಡಬೇಕು. ಶ್ರೀಮಾನ್ ಯಡಿಯೂರಪ್ಪ ಹಾಗೂ ಶ್ರೀ ಸದಾನಂದಗೌಡರು ಇದ್ದ ಕಾಲದಲ್ಲಿಯೂ ಕೂಡ, ಇಂದು ನಿವೇಶನದ ಕೊರತೆ ಎಲ್ಲಾ ಕಡೆಯಲ್ಲೂ ಜಾಸ್ತಿಯಾಗಿದೆ. ಆದರೆ ಆಶ್ರಯದ ಬಗ್ಗೆ ಇಂದು ಹೆಚ್ಚು ಒತ್ತು ಇಲ್ಲ. ನಿವೇಶನ ಇಲ್ಲದವರಿಗೆ ನಿವೇಶನ ಕೊಡಬೇಕೆನ್ನುವ ಚಿಂತನೆ ಕೂಡ ನಡೆಯುತ್ತಾ ಇಲ್ಲ. ಅದಕ್ಕೋಸ್ಕರ ಕಾನೂನನ್ನ ತರತಕ್ಕ ರೀತಿಯಲ್ಲಿ ಕೆಲಸ ಆಗುತ್ತಿಲ್ಲ. ಇಂದು ಹಳ್ಳಿಯಲ್ಲಿ ಇಂದು ನಿವೇಶನ ಬೇಕು ಎಂದರೆ, ಭೂಮಿಯ ಬೆಲೆ ಜಾಸ್ತಿಯಾಗಿರುವ ಹಿನ್ನೆಲೆಯಲ್ಲಿ ಯಾರೊಬ್ಬರೂ ಕೂಡ ಸರ್ಕಾರಕ್ಕೆ ಕೊಡುವುದಕ್ಕಾಗಲಿ, ಮಾರುವುದಕ್ಕಾಗಲಿ ಬರುತ್ತಿಲ್ಲ. ನಿವೇಶನಗಳಿಲ್ಲದೆ ಒದ್ದಾಡುತ್ತಿರುವುದನ್ನು ನೋಡಬೇಕಾದಾಗ ಅದಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸುವುದು ಒಳ್ಳೆಯದು ಎಂಬ ಮಾತನ್ನು ಹೇಳುತ್ತಾ, ಕೊನೆಯದಾಗಿ ಹೇಳಬೇಕೆಂದರೆ ರೈತರ ಪಂಪ್‌ಸೆಟ್‌ಗಾಗಿ ಪುಕ್ಕಟೆಯಾಗಿ 10 ಹೆಚ್.ಪಿ.ವರೆಗೆ ವಿದ್ಯುತ್ ಸರಬರಾಜನ್ನು ಮಾಡತಕ್ಕದ್ದು. ಇದು ರೈತರಿಗೆ ಕೊಟ್ಟಂತಹ ಪ್ರೋತ್ಸಾಹ. ಬಹಳ ಕುಸಿದಂತಹ ರೈತರು ಹಾಗೂ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಉತ್ತೇಜನ ಮಾಡುವುದಕ್ಕೋಸ್ಕರ ಸರ್ಕಾರದಿಂದ ನಷ್ಟವನ್ನು ಭರಿಸಿ ಅವರಿಗೆ ಉತ್ತೇಜನ ನೀಡುವ ಕೆಲಸಗಳನ್ನು ಕೂಡ ಮಾಡಿದ್ದಾರೆ.

ಈ ರೀತಿಯಾಗಿ ಮುಖ್ಯಮಂತ್ರಿಯಾಗಿದ್ದಾಗ ಅವರ ಅವಧಿಯಲ್ಲಿ ಮಾಡಿರುವಂತಹ ಜನಪರ ಕಾರ್ಯಕ್ರಮಗಳನ್ನು ಉಳಿಸಬೇಕು. ಇನ್ನೊಂದು ವಿಷಯವೆಂದರೆ ಅವರು ನೀಡಿರುವಂತಹ ಕಾರ್ಯಕ್ರಮಗಳಿಗೆ ವಿಸ್ತೃವಾದಂತಹ ರೀತಿಯಲ್ಲಿ ಉತ್ತೇಜನ ಕೊಡತಕ್ಕ ಕಾರ್ಯಕ್ರಮಗಳನ್ನು ರೂಪಿಸಿದರೆ, ಅದು ಬಹುಶಃ ಮಾನ್ಯ ಬಂಗಾರಪ್ಪನವರಿಗೆ ಕೊಡತಕ್ಕಂತಹ ಕೊಡುಗೆ ಎಂದು ಭಾವಿಸುತ್ತೇನೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆತ್ಮೀಯ ಸ್ನೇಹಿತರಾದಂತಹ ಮಹದೇವ್ ಅವರು, ರಾಮಾ ಸಿದ್ದಲಿಂಗ ನಡೋಣಿ ಅವರು, ಸೋಮಪ್ಪ ಸುವರ್ಣ ರವರನ್ನು ಎಲ್ಲರನ್ನೂ ಕೂಡ ನಾನು ಶಾಸಕನಾಗಿ ಬಲ್ಲೆ. ಅವರ ಕಾರ್ಯಚಟುವಟಿಕೆಗಳು ಹಾಗೂ ಕ್ರಿಯಾಶೀಲತೆಯನ್ನು ಬಲ್ಲೆ ಎಂದು ಹೇಳುತ್ತಾ ಅಗಲಿದಂತಹ ನಾಯಕರಿಗೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಅವಕಾಶವನ್ನು ಕೊಟ್ಟಿದ್ದಕ್ಕೆ ವಂದನೆಗಳು.

ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಮಂಡಿಸಿರುವಂತಹ ಈ ಒಂದು ಸಂತಾಪ ಸೂಚನೆಯ ನಿರ್ಣಯವನ್ನು ಅನುಮೋದಿಸುತ್ತೇನೆ. ನಮ್ಮನ್ನ ಅಗಲಿರುವಂತಹ ಹಿರಿಯರಾದ ಬಂಗಾರಪ್ಪನವರಿಗೆ, ಮಂಚನಹಳ್ಳಿ ಮಹದೇವರವರಿಗೆ, ರಾಮಾ ಸಿದ್ದಲಿಂಗ ನಡೋಣಿ ರವರಿಗೆ, ಸೋಮಪ್ಪ ಸುವರ್ಣ, ಎಲ್.ಬಸವರಾಜು ಇವರೆಲ್ಲರ ನಿಧನಕ್ಕೆ ನಾನು ಸಹ ಸಂತಾಪವನ್ನು ಸೂಚಿಸುತ್ತಾ, ಅವರೆಲ್ಲರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೆ ನಮ್ಮ ನಾಡಿನ ಹಿರಿಯ ರಾಜಕೀಯ ನಾಯಕರಾದಂತಹ ಶ್ರೀಯುತ ಬಂಗಾರಪ್ಪನವರು ಅನೇಕ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿರುವುದನ್ನು ನಾವು ರಾಜಕೀಯದಲ್ಲಿ ಕಂಡಿದ್ದೇವೆ. ಅವರು ಪ್ರಾರಂಭದಿಂದಲೂ ಅನೇಕ ಸಚಿವ ಸ್ಥಾನಗಳ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ್ದರು. ರಾಜಕೀಯ ಪಕ್ಷಗಳಲ್ಲಿಯೂ ಸಮರ್ಥವಾದ ಅವರು ನಾಯಕತ್ವ ಕೊಟ್ಟಿರುವುದನ್ನು

ನಾವೆಲ್ಲರೂ ಗುರುತಿಸಿದ್ದೇವೆ. ಅವರೊಂದಿಗೆ ಒಡನಾಟವನ್ನು ಮಾಡಿದ್ದೇವೆ. ಮಾನ್ಯ ಬಂಗಾರಪ್ಪನವರು ಯಾವೊಂದು ವಿಶೇಷವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುನ್ನಡೆಸಿರುವುದನ್ನು ಸಹ ನೋಡಿದ್ದೇವೆ. 1994ರಲ್ಲಿ ನಾವೆಲ್ಲರೂ ಶಾಸಕರಾಗಿ ಆಯ್ಕೆಯಾದಂತಹ ಸಂದರ್ಭದಲ್ಲಿ ಅವರು ವಿರೋಧ ಪಕ್ಷದಲ್ಲಿ ಕುಳಿತು ಶಾಸಕರಾಗಿ ಕೆಲಸ ಮಾಡುವಂತಹ ಸಂದರ್ಭ ಇತ್ತು. ಆಗ ಕೆಲವು ದಿನಗಳು ಅಧಿವೇಶನ ಸಮಯದಲ್ಲಿ ಅವರು ಮಾತನಾಡುವುದನ್ನು ಪ್ರತ್ಯಕ್ಷವಾಗಿ ನಾವು ಹತ್ತಿರದಿಂದ ನೋಡುವಂತಹ ಅವಕಾಶಗಳು, ಶಾಸಕರಾಗಿ ಮೊದಲ ಬಾರಿಗೆ ಆಯ್ಕೆಯಾದ ಅವಧಿಯಲ್ಲಿ ಆ ಅನುಭವಗಳು ಸಿಗುವುದಕ್ಕೆ ಅವಕಾಶವಾಯಿತು. ಆ ನಂತರದಲ್ಲಿ ಅನೇಕ ಸಂದರ್ಭಗಳಲ್ಲಿ ಅವರ ಜೊತೆ ಒಡನಾಟಗಳು ಬಂದಾಗ, ನಮ್ಮ ಪಕ್ಷದಲ್ಲಿ ನಾವು ಮತ್ತು ಅವರು ಒಟ್ಟಾಗಿ ಕೆಲಸ ಮಾಡಿದಂತಹ ಸಂದರ್ಭ ಹಾಗೂ ಉಳಿದಂತಹವರ ಜೊತೆ ಕೆಲಸ ಮಾಡಿದ ಅನುಭವವನ್ನು ಹಂಚಿಕೊಂಡಾಗ, ಬಂಗಾರಪ್ಪನವರು ಮಾಡಿರುವಂತಹ ಎಲ್ಲಾ ಕೆಲಸಗಳು, ಅದು ಹೇಗೋ ಒಂದು ರೀತಿಯಲ್ಲಿ ಬಡವರ ಪರವಾದ ಪ್ರಾಮಾಣಿಕ ಕಳಕಳಿಯನ್ನು ಹೊಂದಿರುವಂತಹ ವಿಷಯವಾಗಿತ್ತು ಎನ್ನುವುದು ನಮ್ಮೆಲ್ಲರಿಗೂ ಮನದಟ್ಟಾಗುತ್ತದೆ. ಇವತ್ತು ನಾವೆಲ್ಲರೂ ಜನರ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ, ಅನುಭವಿಸುತ್ತಿದ್ದೇವೆ. ಆದರೆ ಆ ಸಮಸ್ಯೆಗಳ ನಿವಾರಣೆಗೆ ನಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ಯಾವ ರೀತಿ ಬಲವಾಗಿ ನಾವು ಪ್ರತಿಪಾದಿಸಬೇಕು. ಅದರಲ್ಲಿ ಎಲ್ಲೋ ಒಂದು ಕಡೆಯಲ್ಲಿ ಕೊರತೆಗಳು ಅನೇಕ ಸಂದರ್ಭಗಳಲ್ಲಿ ಕಾಣುವುದಿದೆ. ಆದರೆ ಶ್ರೀ ಬಂಗಾರಪ್ಪನವರು ಎಂದೂ ಹಾಗೇ ಮಾಡಿರಲಿಲ್ಲ. ಹಿಂದೆ ಮಾನ್ಯ ದೇವರಾಜು ಅರಸುರವರ ಬಗ್ಗೆಯೂ ನಿರ್ಣಯಗಳನ್ನು ತೆಗೆದುಕೊಂಡಿರುವ ಉದಾಹರಣೆಗಳನ್ನು ಸಹ ನಾವು ಕಾಣುತ್ತೇವೆ. ಹಾಗೆಯೇ ಮಾನ್ಯ ಬಂಗಾರಪ್ಪನವರು ಆ ನಿರ್ಣಯಗಳಿಗೆ ತಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ ಬಡವರ ಪರವಾಗಿ ನ್ಯಾಯ ದೊರಕಿಸಿಕೊಡಬೇಕು ಎನ್ನುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿರುವಂತಹವರು. ಅವರ

ಹೃದಯದ ಅಂತರಾಳದಲ್ಲಿ ಬಡವರ ಬಗ್ಗೆ ಕಾಳಜಿ ಪ್ರಾಮಾಣಿಕವಾಗಿರುವುದರಿಂದ ಆ ರೀತಿಯ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಹಾಗೆ ಆ ರೀತಿ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಾಯಿತು. ಎಲ್ಲವನ್ನು ಎಲ್ಲಾ ಕಾಲದಲ್ಲಿಯೂ ಸಮರ್ಪಕವಾಗಿ ನಡೆಸುವುದಕ್ಕಾಗುವುದಿಲ್ಲ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿರುವ ಸಂಗತಿ. ಆದರೂ ಸಹ, ಅವರು ತಮ್ಮ ಅಧಿಕಾರಾವಧಿಯಲ್ಲಿ ಆ ಒಂದು ಇಚ್ಛಾಶಕ್ತಿಯನ್ನು ತೋರಿಸಿ ಮುನ್ನಡೆಸಿರುವುದು ನಮ್ಮೆಲ್ಲರಿಗೂ ಮಾದರಿಯಾದಂತಹುದು. ನಾವು ಸಹ ಈ ಸದನದಲ್ಲಿರುವಂತಹವರು. ನಮ್ಮೆಲ್ಲರ ಜವಾಬ್ದಾರಿಯಿಂದಾಗಿ ಬಡವರ ಪರವಾದ ಕಾಳಜಿಯನ್ನು ಜವಾಬ್ದಾರಿಯುತವಾಗಿ ತೋರಿಸುವಂತಹ ಪ್ರಯತ್ನಗಳನ್ನು ಮಾಡಬೇಕಾದಂತಹ ಹೊಣೆಗಾರಿಕೆ ಸದಾ ನಮ್ಮ ಮೇಲೆ ಇದ್ದೇ ಇದೆ. ಆ ಪ್ರಯತ್ನವನ್ನು ಮಾಡಬೇಕಾದಂತಹ ಅಗತ್ಯತೆ ಇದೆ. ಬಡವರ ಸಮೂಹಕ್ಕೆ ತಕ್ಕ ಯೋಜನೆಗಳನ್ನು ರೂಪಿಸಿ ಸಾಮಾಜಿಕವಾದಂತಹ ಗೌರವ ಸ್ಥಾನಮಾನ, ಒಂದು ಸ್ವಾಭಿಮಾನದ ಜೀವನವನ್ನು ನಡೆಸುವಂತಹ ಅವಕಾಶವನ್ನು ಕಲ್ಪಿಸಿಕೊಡಬೇಕಾದಂಥಹ ಅಗತ್ಯತೆಗಳಿದೆ. ಮಾನ್ಯ ಬಂಗಾರಪ್ಪನವರು ಹಿಂದುಳಿದ ವರ್ಗದವರಿಗೆ ಒಂದು ಧ್ವನಿಯಾಗಿದ್ದರು ಎಂಬುದನ್ನು ನಾವು ನಿಶ್ಚಿತವಾಗಿ ಗುರುತಿಸಬಹುದು. ಆದರೆ ಎಲ್ಲಾ ಸಮಾಜದವರೂ ಗೌರವದಿಂದ ಬದುಕುವಂತಹ ಸ್ಥಿತಿಯನ್ನು ತರುವುದಕ್ಕೆ ಕಾರಣೀಕರ್ತರು ಅವರಾಗಿದ್ದರು. ಆ ರೀತಿಯಾದ ಪ್ರಯತ್ನವನ್ನು ಅವರು ಪ್ರಾಮಾಣಿಕವಾಗಿ ಮಾಡಿದ್ದರು. ಆ ಎಲ್ಲಾ ಸಂಗತಿಗಳನ್ನು ಮತ್ತೊಮ್ಮೆ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ನಮಗೆ ಅತ್ಯಂತ ಹತ್ತಿರದವರು ಶ್ರೀ ಬಂಗಾರಪ್ಪನವರು. ಏಕೆಂದರೆ ಸೊರಬ ಕ್ಷೇತ್ರ, ನಮ್ಮದು ಉತ್ತರ ಕನ್ನಡ ಜಿಲ್ಲೆ, ಶಿರಸಿ, ಸಿದ್ದಾಪುರ, ಅಕ್ಕ ಪಕ್ಕದ ತಾಲ್ಲೂಕುಗಳು. ಅವರು ತಮ್ಮಲ್ಲಿ ಶಿಕ್ಷಣವನ್ನು ಮುಗಿಸಿ ನಮ್ಮ ಸಿದ್ದಾಪುರ ತಾಲ್ಲೂಕಿನ ಜನರ ಸಮಸ್ಯೆಗಳಿಗೆ ಧ್ವನಿಯಾಗಿಯೇ ತಮ್ಮ ನಾಯಕತ್ವವನ್ನು ರೂಪಿಸಿಕೊಂಡಿದ್ದರು ಎಂದು ಹೇಳಿದರೆ ತಪ್ಪಾಗಲಾರದು. ಅವರು ನಮ್ಮ ಶಿರಸಿ ತಾಲ್ಲೂಕಿನ

ಅಳಿಯಂದಿರು ಆಗಿದ್ದರು. ಹಾಗಾಗಿ ನಮ್ಮ ಜಿಲ್ಲೆಗೆ ಅತ್ಯಂತ ಹತ್ತಿರದ ಒಂದು ಸಂಬಂಧ ಇದೆ. ನಮ್ಮ ಜಿಲ್ಲೆಯಲ್ಲಿ ಎಲ್ಲಾ ಸಮುದಾಯದ ಜನರೊಂದಿಗೆ ಒಂದಾಗಿ ಕೆಲಸ ಮಾಡಿ ಬಹಳ ಒಳ್ಳೆಯ ನಾಯಕತ್ವವನ್ನು ಕೊಟ್ಟಿರುವಂಥವರು. ರಾಜಕೀಯವಾಗಿ ಅನೇಕ ಏರುಪೇರುಗಳನ್ನು ಅವರು ಕಂಡಿದ್ದಾರೆ. ಅದನ್ನೆಲ್ಲಾ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ವಿಶೇಷವಾಗಿ ಯುವ ಸಮುದಾಯದವರ ಬಗ್ಗೆ ಅವರು ಕಾಣುತ್ತಿದ್ದಂಥ ಪ್ರೀತಿ, ವಿಶ್ವಾಸ ಅವರನ್ನು ಪ್ರೋತ್ಸಾಹಿಸುತ್ತಿದ್ದಂಥ ರೀತಿಯನ್ನು ಇವತ್ತಿಗೂ ನಾವು ಗುರುತಿಸಬೇಕಾಗುತ್ತದೆ. ನಮ್ಮ ಜೊತೆಯಲ್ಲಿ ನಮ್ಮ ಪಕ್ಷದಲ್ಲಿರುವಾಗ ಅವರು ಈ ಮಾತನ್ನು ಸದಾ ಹಂಚಿಕೊಳ್ಳುತ್ತಿದ್ದರು. ಯುವಕರು ಜವಾಬ್ದಾರಿಯನ್ನು ತೆಗೆದುಕೊಂಡು ಮುಂದೆ ಬರಬೇಕು. ನಾವು ಅನೇಕ ಹೆಸರನ್ನು ಹೇಳಿದಾಗ ಹಾಗಲ್ಲ, ಈ ಯುವಕರು ಈ ರೀತಿಯಲ್ಲಿ ಸಾಮಾಜಿಕ ಜವಾಬ್ದಾರಿ, ರಾಜಕೀಯವಾಗಿ ಈ ರೀತಿ ಜವಾಬ್ದಾರಿ ತೆಗೆದುಕೊಂಡು ನಡೆಸಬೇಕು ಎನ್ನುವುದನ್ನು ಬಲವಾಗಿ ಪ್ರತಿಪಾದಿಸುತ್ತಿದ್ದವರು. ಯುವಕರಿಗೆ ಇರುವಂತಹ ಶಕ್ತಿ ಸಾಮರ್ಥ್ಯವನ್ನು ಗುರುತಿಸಿ, ಪ್ರೋತ್ಸಾಹಿಸಿ ಅನೇಕರು ರಾಜಕೀಯವಾಗಿ ಇವತ್ತು ತಮ್ಮ ವ್ಯಕ್ತಿತ್ವವನ್ನು ಸಮಾಜದಲ್ಲಿ ಸ್ಥಾಪಿಸಿಕೊಳ್ಳುವುದಕ್ಕೆ ಸಾಧ್ಯವಾಗಿರುವುದನ್ನು ಕಾಣುತ್ತಿದ್ದೇವೆ. ಅದರ ಜೊತೆಯಲ್ಲಿ ವಿಶೇಷವಾಗಿರುವಂಥ ಗುಣಗಳು, ಈಗಾಗಲೇ ಇಲ್ಲಿ ಉಲ್ಲೇಖವಾಗಿದೆ. ಅವರಿಗೆ ಕ್ರೀಡೆಯಲ್ಲಿ, ಸಂಗೀತದಲ್ಲಿ, ಸಾಹಿತ್ಯದಲ್ಲಿ ಇರುವಂಥ ಆಸಕ್ತಿ, ಅದು ಸಹಜವಾಗಿಯೇ ಇರುವಂಥ ಆಸಕ್ತಿಯಾಗಿತ್ತು. ಅದು ತೋರ್ಪಡಿಕೆಗಾಗಿ ಇರಲಿಲ್ಲ. ಅವರಿಗೆ ಅನೇಕ ಸಂದರ್ಭಗಳಲ್ಲಿ ಈ ಅಧಿವೇಶನದಲ್ಲಿ ಇಲ್ಲಿ ಮಾತನಾಡುವ ಸಂದರ್ಭ ಇರಬಹುದು, ಹೊರ ವೇದಿಕೆಗಳಲ್ಲಿ, ಸಮಾರಂಭಗಳಲ್ಲಿ ಮಾತನಾಡುತ್ತಿರುವಂಥ ಸಂದರ್ಭದಲ್ಲಿ ಇರಬಹುದು, ಸಾಹಿತ್ಯದ ಬಗ್ಗೆ, ಸಂಗೀತದ ಬಗ್ಗೆ ಅಥವಾ ಅವರಿಗೆ ಇದ್ದಂಥ ಬೇರೆ ಬೇರೆಯ ಪ್ರತಿಭೆಯ ಕಾರಣದಿಂದಾಗಿ ಅವರು ವ್ಯಕ್ತಪಡಿಸುತ್ತಿದ್ದಂಥ ಮಾತುಕತೆಗಳು ಇವೆಲ್ಲವೂ ಬಹಳ ಒಂದು ಮಾದರಿ ನಾಯಕನಾಗುವುದಕ್ಕೆ ಏನೇನು ಎಲ್ಲಾ ವಿಶೇಷ

ಗುಣಗಳು ಬೇಕಾಗಿತ್ತೋ ಅವೆಲ್ಲವೂ ಇತ್ತು. ಆ ರೀತಿಯಾದ ಒಂದು ಅದರ್ಶ ನಾಯಕತ್ವವನ್ನು ಕೊಟ್ಟಿರುವಂಥವರು, ಅವರು ರಾಷ್ಟ್ರ ರಾಜಕಾರಣವನ್ನು ನೋಡಿದ್ದಾರೆ, ರಾಜ್ಯ ರಾಜಕಾರಣವನ್ನು ನೋಡಿದ್ದಾರೆ. ಈ ರೀತಿ ಅನೇಕ ಅನುಭವಿಗಳು, ಅವರ ಜೊತೆಯಲ್ಲಿ ಭಾವನೆಗಳನ್ನು ಹಂಚಿಕೊಂಡಿರುವುದರಿಂದಾಗಿ ಅವರ ವ್ಯಕ್ತಿತ್ವದ ಬಗ್ಗೆ ಪರಿಪೂರ್ಣವಾದ ಕಲ್ಪನೆ ಇದೆ. ಅವರ ಈ ಎಲ್ಲಾ ಕಾರಣಗಳಿಂದಾಗಿ ಅವರು ನಮ್ಮ ರಾಜ್ಯದ ಒಬ್ಬ ಹಿರಿಯ ನಾಯಕರಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಾಗಿರುವುದು. ಅವರು ಕಂಡಂಥ ಅಪೇಕ್ಷೆಯ ಎಲ್ಲಾ ಜವಾಬ್ದಾರಿಗಳನ್ನು ಈಡೇರಿಸುವಂಥ ಒಂದು ನಿರ್ಧಾರಗಳನ್ನು ಸಹ ಈ ಸದನದ ಮೂಲಕ ನಾವು ಮಾಡೋಣ. ಅವರೆಲ್ಲರ ಅಪೇಕ್ಷೆಗಳಿದೆ, ಅವರ ಕುಟುಂಬದ ಅಥವಾ ಅವರ ಅಭಿಮಾನಿಗಳ, ಬಂಧುಬಳಗದವರ ಅಪೇಕ್ಷೆಗಳು ಸಾಕಷ್ಟಿದೆ. ಅವರ ಕುರಿತಂತೆ ಒಂದು ಅಧ್ಯಯನ ಪೀಠ ಆಗಬೇಕು ಎನ್ನುವುದು, ಸೊರಬದಲ್ಲಿ ಅವರ ಮೂರ್ತಿ ಸ್ಥಾಪನೆಯಾಗಬೇಕು, ಇತ್ಯಾದಿಗಳು ಬೇರೆ ಬೇರೆ ಸಂದರ್ಭಗಳಲ್ಲಿ ನಾವೆಲ್ಲರೂ ಸಂತಾಪ ಸೂಚನೆ ಸಭೆಗಳಲ್ಲಿ ಅಥವಾ ಬೇರೆ ಬೇರೆ ಸಭೆಗಳಲ್ಲಿ, ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಈ ರೀತಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲೂ ಸಹ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಷಯದ ಕುರಿತಂತೆ ಈಗಾಗಲೇ ಅನೇಕ ರೀತಿಯ ಅಭಿಪ್ರಾಯಗಳು ಏನು ಬಂದಿದೆ, ಅದನ್ನೆಲ್ಲವನ್ನು ಕ್ರೋಢೀಕರಿಸಿ ಬರುವ ದಿನಗಳಲ್ಲಿ ಒಂದು ಸೂಕ್ತವಾದ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂಬ ವಿನಂತಿಯನ್ನು ಸಹ ನಾನು ಮಾಡಿಕೊಳ್ಳುತ್ತಾ, ಅವರು ಸ್ವರ್ಗಸ್ಥರಾಗುವುದಕ್ಕಿಂತ ಒಂದು ತಿಂಗಳ ಮುಂಚೆ ಸೊರಬದಲ್ಲಿ ಒಂದು ಭಾಷಣ ಮಾಡಿದರು. ಒಂದೂ ಕಾಲು, ಒಂದೂವರೆ ಗಂಟೆಗಳು ಆ ಸಭೆಯಲ್ಲಿ ನಿರರ್ಗಳವಾದ ಭಾಷಣವನ್ನು ಮಾಡಿದ್ದಾರೆ. ಅವರು ಅವತ್ತು ಮಾತನಾಡಿರುವುದನ್ನು ನಮ್ಮ ಅನೇಕ ಸ್ನೇಹಿತರುಗಳು ಹೇಳಿದರು. ಅವರಿಗೆ ಆ ಇಳಿ ವಯಸ್ಸಿನಲ್ಲೂ ಸಹ ಸಮಾಜದ ಬಗ್ಗೆ, ಕ್ಷೇತ್ರದ ಜನತೆ

ಬಗ್ಗೆ ಒಂದು ಆಡಳಿತ ವ್ಯವಸ್ಥೆಯ ಬಗ್ಗೆ ಎಂಥ ಒಂದು ಕಾಳಜಿಯನ್ನು ವ್ಯಕ್ತಪಡಿಸಿರುವುದನ್ನು ಅವರು ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿ, ಹೇಳಿರುವುದನ್ನು ನಾವು ಕಂಡಿದ್ದೇವೆ. ಅವರ ಸಾವು ನಿಜವಾಗಿ ನಾಯಕತ್ವದಲ್ಲಿ ಇರಬೇಕಾದಂಥ ಹಿರಿತನವನ್ನು ಕಾಣುವುದಕ್ಕೆ ಬೇಕಾಗಿರುವಂಥ ರೀತಿಯಲ್ಲಿ ನಾವೆಲ್ಲ ಯೋಚಿಸಬೇಕಾದಂತಹದು. ನಾವು ಸಹ ರಾಜಕೀಯ ಕ್ಷೇತ್ರದಲ್ಲಿ ನಮ್ಮ ನಮ್ಮದೇ ಆದಂತಹ ಸ್ಥಾನಮಾನವನ್ನು ಗಳಿಸಿಕೊಂಡಿದ್ದೇವೆ. ಆದರೆ ಆ ರೀತಿ ಬಡವರ ಪರವಾಗಿ, ಸಮಾಜದ ಪರವಾಗಿ, ವ್ಯವಸ್ಥೆ ಪರವಾಗಿ ಆ ಕಾಳಜಿಯನ್ನು ತೋರಿಸುವಂಥ ನಾಯಕತ್ವ ಗುಣಗಳನ್ನು ನಾವೆಲ್ಲಾ ಹೊಂದುವಂತೆ ಅವರ ಪ್ರೇರಣೆಯಿಂದ ಆಗಲಿ ಎಂದು ನಾನು ಆಶಿಸುತ್ತಾ, ಮತ್ತೊಮ್ಮೆ ಇನ್ನೂ ಅನೇಕ ಜನ ಹಿರಿಯರೂ ಸಹ ಸ್ವರ್ಗಸ್ಥರಾಗಿದ್ದಾರೆ. ಅವರೆಲ್ಲರ ಆತ್ಮಕ್ಕೂ ಸಹ ಚಿರ ಶಾಂತಿಯನ್ನು ಕೋರುತ್ತಾ, ಅವರೆಲ್ಲರೂ ಅಪೇಕ್ಷೆ ಪಟ್ಟಿರುವಂಥ ಜವಾಬ್ದಾರಿಯನ್ನು ನಾವೆಲ್ಲಾ ಸಮರ್ಥವಾಗಿ ನಿರ್ವಹಿಸುವಂಥ ಒಂದು ನಿರ್ಣಯವನ್ನು ಇಂಥ ಸಂದರ್ಭದಲ್ಲಿ ಮಾಡೋಣವೆಂದು ಆಶಿಸುತ್ತಾ, ನನಗೆ ಈ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ನಾಡಗೌಡರು.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ):– ಸನ್ಮಾನ್ಯ ಸಭಾಧ್ಯಕ್ಷರೆ, ತಾವು ತಂದಂತ ಈ ದುಃಖಕರವಾದಂಥ ನಿರ್ಣಯಕ್ಕೆ ಅನುಮೋದನೆಯನ್ನು ನೀಡುತ್ತಾ, ಬಹಳ ಮುಖ್ಯವಾಗಿ ಎಸ್.ಬಂಗಾರಪ್ಪನವರು, ಮಾಜಿ ಮುಖ್ಯಮಂತ್ರಿಯವರು ಮತ್ತು ನಮ್ಮ ಯುವಕರಿಗೆ ಒಬ್ಬ ಮಾದರಿ ನಾಯಕನಾಗಿ, ಹಲವಾರು ಯುವಕರಿಗೆ ಇಲ್ಲಿ ಅವಕಾಶವನ್ನು ಮಾಡಿಕೊಟ್ಟರು. ನಮ್ಮ ಜೀವನದಲ್ಲೇ ಒಂದು ಹೊಸ ಬದುಕನ್ನು ನೀಡಿದಂಥ ಒಬ್ಬ ನಾಯಕ ಯಾರಾದರೂ ಇದ್ದರೆ ಅದು ಎಸ್.ಬಂಗಾರಪ್ಪನವರು ಎಂದು ಹೇಳಿ ಯಾವ ಕಾಲಕ್ಕಾದರೂ ಕೂಡಾ ಮರೆಯುವುದಕ್ಕೆ ಸಾಧ್ಯವಿಲ್ಲ ಎನ್ನುವಂಥ ಮಾತನ್ನು ಬಹಳ ಸ್ಪಷ್ಟವಾಗಿ ಇಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಹಲವಾರು

ನಾಯಕರುಗಳು ಈಗಾಗಲೇ ಅವರ ಗುಣಗಾನವನ್ನು ಮಾಡಿದ್ದಾರೆ. ನಾನೂ ಕೂಡಾ ಅವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರು ಬಹಳ ಸರಳ ಸ್ವಭಾವದ ಒಂದು ಜೀವನವನ್ನು ಸಾಗಿಸುತ್ತಿರತಕ್ಕಂಥ ವ್ಯಕ್ತಿ ಆಗಿದ್ದರು. ಬಹಳಷ್ಟು ಜನ ಅವರನ್ನು ಅಹಂಕಾರಿ ಎಂದು ಕರೆಯತಕ್ಕ ಮಟ್ಟಕ್ಕೆ ವಿಶ್ಲೇಷಣೆಯನ್ನು ಕೂಡ ಮಾಡಿದ್ದಾರೆ. ಅದು ಸರಿಯಾದಂಥದ್ದಲ್ಲ. ಯಾವ ವ್ಯಕ್ತಿ ತನ್ನ ಸ್ವಂತ ಬಲದಿಂದ ಮತ್ತು ಹೋರಾಟಮಯವಾದಂತಹ ಜೀವನದಿಂದ ಮೇಲಕ್ಕೆ ಬರುತ್ತಾನೋ, ಆ ನಾಯಕತ್ವವನ್ನು ಪಡೆಯುತ್ತಾನೋ, ಅವನು ಸ್ವಾಭಾವಿಕವಾಗಿ ಸ್ವಾಭಿಮಾನದ ಬದುಕನ್ನು ಹೆಚ್ಚು ಬೆಂಬಲಿಸುತ್ತಾನೆ. ಆ ರೀತಿಯಾಗಿ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾನೆ. ಅದು ಬಹಳಷ್ಟು ಜನರಿಗೆ ತಪ್ಪು ಅರ್ಥ ಆಗುವಂಥ ಸಾಧ್ಯತೆಯಿದೆ. ಆ ನಾಯಕತ್ವವನ್ನು ಬೆಳೆಸಿಕೊಂಡು ಬಂದಂಥವರು ಬಂಗಾರಪ್ಪನವರು. ಅವರು ನಿಷ್ಠೂರವಾದಿ. ಇದ್ದದ್ದನ್ನು ಇದ್ದ ಹಾಗೆ ಹೇಳತಕ್ಕವರಾಗಿದ್ದರು. ನಾನು ಹಲವಾರು ಸಲ ಈ ಮಾತನ್ನು ಹೇಳಿದ್ದೇನೆ. ರಾಜಕೀಯ ಜೀವನದಲ್ಲಿ ಇಲ್ಲಿ ಬಹಳಷ್ಟು ಜನ ಒಂದಲ್ಲಾ ಒಂದು ಹಿನ್ನೆಲೆಯಿಂದ ಬಂದಂಥ ವ್ಯಕ್ತಿಗಳಾಗಿರುತ್ತೇವೆ. ಆದರೆ ಯಾರು ಹಿಂದುಳಿದಂಥ ವರ್ಗದಿಂದ, ಅಲ್ಪಸಂಖ್ಯಾತರ ವರ್ಗದಿಂದ ಮತ್ತು ಹರಿಜನ ಗಿರಿಜನ ವರ್ಗದಿಂದ ಬಂದಿರತಕ್ಕ ನಾಯಕರುಗಳು ಅವರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಇವತ್ತು ನಾಯಕರಾಗಿ ಬೆಳೆದಿದ್ದಾರೆ, ಅವರು ನಿಜಕ್ಕೂ ಕೂಡ ನಾಯಕರುಗಳು. ನಾವೆಲ್ಲಾ ಕೂಡ ಯಾವುದೋ ಒಂದು ಹಿನ್ನೆಲೆಯಿಂದ ಬಂದಂಥವರು ಎನ್ನುವ ಮಾತನ್ನು ಹೇಳುತ್ತೇನೆ. ಅವರು ಜನರ ರೂವಾರಿಗಳು ಎನ್ನುವಂಥ ಮಾತನ್ನು ಹೇಳುತ್ತಿರುತ್ತೇನೆ. ಆ ವ್ಯಕ್ತಿತ್ವವನ್ನು ಬಿಂಬಿಸಿದಂಥವರು ಬಂಗಾರಪ್ಪನವರು. ನಾವು ಇವತ್ತು ಹಲವಾರು ಕಡೆ ಹೋದಾಗೆಲ್ಲಾ, ಮಾತನಾಡುವಾಗ ಅವರ ಯೋಜನೆ ಬಗ್ಗೆ ಇವತ್ತಿಗೂ ಕೂಡಾ ನೆನಪಿಸಿಕೊಳ್ಳುತ್ತೇವೆ. ಅವರ ಕಾಗೋಡು ಚಳುವಳಿಯಿಂದ ಹಿಡಿದು, ಗೇಣಿದಾರಿಕೆಗೆ ಏನು ಭೂಮಿಯನ್ನು ಯಾರು ಉಳುತ್ತಾನೆಯೋ ಅವನೇ ಅದರ ಒಡೆಯ, Land Reformsಗೆ ಹೆಚ್ಚು

ಒತ್ತನ್ನು ಕೊಟ್ಟು ಒಂದು ಕ್ರಾಂತಿಕರವಾದ ವಿಚಾರದಲ್ಲಿ ಅವರು ಮಾಡಿದಂಥ ಒಂದು ಹೋರಾಟ ಇವತ್ತಿಗೂ ಕೂಡಾ ನೆನಪಿಸಿಕೊಳ್ಳಬೇಕಾಗುತ್ತದೆ. ನಾನು ಹಲವಾರು ಸಂದರ್ಭದಲ್ಲಿ ಅವರನ್ನು ಕಂಡಾಗ ಬಹಳ ನಗುನಗುತ್ತಾ ಅವರು ಮಾತನಾಡುತ್ತಿದ್ದರು. ನಾವು ಯಾವಾಗಲೂ ಕೂಡಾ ಹೋಗಿ ಭೇಟಿಯಾದರೆ, ನಾವು ಮುನಿಯಪ್ಪನವರು, ಡಿ.ಕೆ.ಶಿವಕುಮಾರ್‌ರವರು, ಜಾರ್ಜ್‌ರವರು, ನಜೀರ್ ಅಹಮದ್‌ರವರು ನಾವೆಲ್ಲರೂ ಕೂಡಾ ಅವರನ್ನು ಕಂಡಾಗ ನಮ್ಮನ್ನು ನೋಡಿ ಬಹಳ ಸಂತೋಷಪಡುತ್ತಿದ್ದರು. ನಾವು ಯಾವ ರೀತಿಯಾಗಿ ಇರಬೇಕು ರಾಜಕೀಯ ಜೀವನದಲ್ಲಿ ಎನ್ನುವ ಬಗ್ಗೆ ನಮಗೆ ಉಪದೇಶ ಮಾಡುತ್ತಿದ್ದರು. ನನಗೆ ನೆನಪಿದೆ, by-election ಲೋಕಸಭೇ ಚುನಾವಣೆ ನಡೆದಂಥ ಸಂದರ್ಭದಲ್ಲಿ, ಬಾಗಲಕೋಟೆ ಲೋಕಸಭಾ ಚುನಾವಣೆ ನಡೆದಂಥ ಸಂದರ್ಭದಲ್ಲಿ ದಿವಂಗತ ರಾಮಕೃಷ್ಣ ಹೆಗ್ಗಡೆಯವರು ಸ್ಪರ್ಧೆ ಮಾಡಿದ್ದರು. ನಮ್ಮ ಪಕ್ಷದಿಂದ ಹೊಸ ಮುಖ, ಯಾರಿಗೂ ಕೂಡಾ ಹೆಚ್ಚು ಪರಿಚಯ ಇರಲಿಲ್ಲ. ಅವರು ಮಾಡಿದಂಥ ಕೆಲಸದ ಹಿನ್ನೆಲೆಯಲ್ಲಿ ಸಿದ್ದು ನ್ಯಾಮಗೌಡರ ಹೆಸರನ್ನು ಪ್ರಕಟಣೆ ಮಾಡಿ ಅವರನ್ನು ಚುನಾವಣೆ ಕಣಕ್ಕೆ ಇಳಿಸಿದರು. ಆಗ ಅಪ್ಪಾಜಿ, 'you should go and camp there'. ಅಂತ ಹೇಳಿದರು, He is a mighty man. ನಾನು ಹೇಳಿದೆ 'ನಾನು ಹೋಗಿ ಅಲ್ಲಿ ಏನು ಮಾಡಲಿ ಸಾರ್?' ನನಗೆ ಏನು ಗೊತ್ತು? ಬಾಗಲಕೋಟೆಯಲ್ಲಿ ಏನು ಮಾಡುವುದಕ್ಕೆ ಸಾಧ್ಯ? ಎಂದು ಹೇಳಿದೆ. 'you should prove yourself' ಅಂತ ಹೇಳಿದರು. 'you should act, ನೀನು ಇವತ್ತಿನ ಈ ಸಂದರ್ಭವನ್ನು challenge ನ್ನು ಒಂದು springboard ಆಗಿ ಸ್ವೀಕಾರ ಮಾಡಬೇಕು' ಎನ್ನುವಂಥ ಮಾತನ್ನು ಹೇಳಿದರು. ಅಷ್ಟೊಂದು ಯುವಕರಿಗೆ ಒಂದು ಪ್ರೋತ್ಸಾಹ ಕೊಡುತ್ತಿದ್ದರು. ಆ ಚುನಾವಣೆ ಆದ ನಂತರ ನಮಗನ್ನಿಸಿತು ಬಂಗಾರಪ್ಪನವರ ದೃಷ್ಟಿಕೋನ, ಎಷ್ಟೊಂದು ಮುಂದಾಲೋಚನೆ ಅವರು ಮಾಡಿದ್ದರು, ರಾಮಕೃಷ್ಣ ಹೆಗ್ಗಡೆಯವರಿಗೆ ಅವತ್ತು ಸೋಲಾಯಿತು. ಅವರ calculations ಸರಿಯಾಗಿ ಇತ್ತು ಎನ್ನುವಂಥ ಮಾತನ್ನು ನಾವೆಲ್ಲರೂ ಕೂಡಾ

ಒಪ್ಪಬೇಕಾದಂಥ ಒಂದು ಸಂಗತಿಯಾಯಿತು. ಅದೇ ರೀತಿಯಾಗಿ ಆ ಚುನಾವಣೆ ಸಂದರ್ಭದಲ್ಲಿ ಹೋದಾಗಲೆಲ್ಲಾ ಸಹ ಯಾರನ್ನು ಅವರು ಮೊದಲು ಮಾತನಾಡಿಸುತ್ತಿದ್ದರೆಂದರೆ ಅತಿ ಕಡು ಬಡವರನ್ನು ಅವರು ಮೊದಲು ಮಾತನಾಡಿಸುತ್ತಿದ್ದರು. ಅವರ ಗುಡಿಸಲಿನಲ್ಲಿ ಹೋಗುತ್ತಿದ್ದರು. ಅಲ್ಲಿ ಗುಡಿಸಲಿನಲ್ಲಿ ಹೋಗಿ ಒಂದು cup tea ಇತ್ತು ಅಂದರೆ ಟೀ ಕುಡಿಯುತ್ತಿದ್ದರು. ಅಲ್ಲಿ ಒಂದು ಸಂದರ್ಭದಲ್ಲಿ ಪಾಪ ಒಬ್ಬಳು ಮುದುಕಿ 'ಯಪ್ಪಾ ನನ್ಮನೆಯಲ್ಲಿ ಒಂದು ರೊಟ್ಟಿ ತಿನ್ನು', ಅಂತ ಅಂದಳು. ರೊಟ್ಟಿ ತಿನ್ನುವುದು ನಮ್ಮ ಕಡೆ ಅಭ್ಯಾಸ ಇತ್ತು. ಆಕೇ 'ನೀನು ಇನ್ನು ಸಣ್ಣ ಹುಡುಗನಿದ್ದೀಯಪ್ಪ, ರಾತ್ರಿಯೆಲ್ಲಾ ಅಡ್ಡಾಡುತ್ತೀ, ಒಂದು ರೊಟ್ಟಿ ತಿನ್ನು' ಅಂದಳು. ಆಗ ಬಂಗಾರಪ್ಪನವರು ನಕ್ಕರು, 'ನೋಡು, ಈ ಯಮ್ಮ ನನ್ನ ಸಣ್ಣ ಹುಡುಗ ಅನುತ್ತಾಳೆ' ಅಂತ ಹೇಳಿ. ಅವರಿಗಾಗಲೇ 63 ಪ್ರಾಯ ವಯಸ್ಸು ಆಗ. ಊಟ ಮಾಡಿದರು, ಆಕಿ ಕಡೆ ಕುಳಿತುಕೊಂಡು ಒಂದು ರೊಟ್ಟಿ ತಿಂದು ಎದ್ದು ಬಂದರು. ಅಂದರೆ ಎಷ್ಟು ಸರಳವಾದಂಥ ಒಂದು ಸ್ವಭಾವ ಅವರದ್ದಾಗಿತ್ತು ಎನ್ನುವುದಕ್ಕೋಸ್ಕರ ಈ ಮಾತುಗಳನ್ನು ನೆನಪು ಮಾಡಿಕೊಂಡು ಹೇಳುತ್ತಿದ್ದೇನೆ. ಬಿಜಾಪುರದಲ್ಲಿ ಬಿ.ಎಂ.ಪಾಟೀಲ್‌ರವರು ತೀರಿಹೋದ ಮೇಲೆ ಅಲ್ಲಿ ಬೈ ಎಲೆಕ್ಷನ್ ನಡೆಯಿತು. ಆಗ ಎಂ.ಬಿ.ಪಾಟೀಲ್ ರವರು ಬಂದು ಕ್ಯಾಂಪ್ ಹಾಕಿ ಚುನಾವಣೆಯ ಯಶಸ್ವಿಗಾಗಿ ಪ್ರಯತ್ನ ಮಾಡಿದರು. ಚುನಾವಣೆ ಮುಗಿದ ನಂತರ ಎಂ.ಬಿ.ಪಾಟೀಲ್, ನಾವು ಎಲ್ಲರೂ ಸೇರಿ ಬಂಗಾರಪ್ಪನವರಿಗೆ ಸಿಹಿಯನ್ನು ಕೊಟ್ಟು ಮಾತನಾಡುವಾಗ ಎಂ.ಬಿ.ಪಾಟೀಲ್‌ರವರು, 'ಸರ್ ನನಗೆ ಈ ಎಲೆಕ್ಷನ್‌ನಲ್ಲಿ ಬಹಳ ಕಷ್ಟವಾಯಿತು, ಈ ಸಂಸ್ಥೆ ದೊಡ್ಡದಾಗಿದ್ದು, ಇದನ್ನು ನೋಡಿಕೊಂಡು ಹೋಗಬೇಕಿದೆ', ಎಂದಾಗ ನಿಮಗೆ ಏನು ಆಗಬೇಕಿದೆ? ಎಂದು ಕೇಳಿದರು. 'ಸರ್ ನನಗೆ ಸೀಟ್ಸ್ ಹೆಚ್ಚಿಗೆ ಮಾಡಿಕೊಟ್ಟರೆ ಅನುಕೂಲವಾಗುತ್ತದೆ' ಎಂದಾಗ, ಗುರುವಾಗ cabinet proposal ಬರುತ್ತದೆ ಎಂದು ಹೇಳಿದರು. ಆಗ State Government ನವರೇ ಸೀಟ್‌ಗಳನ್ನು ಹೆಚ್ಚಿಗೆ ಮಾಡುತ್ತಿದ್ದರು. AICTE ಗೆ ಹೋಗುತ್ತಿರಲಿಲ್ಲ.

ಆಗ 16 ಸೀಟ್‌ಗಳನ್ನು ಹೆಚ್ಚು ಮಾಡಿಕೊಟ್ಟರು. ಅಂದರೆ ಯಾವುದಾದರೂ ಮಾತನ್ನು ಕೊಟ್ಟರೆ ಅದಕ್ಕೆ ಅಂಟಿಕೊಳ್ಳುವ ಒಂದು ಸ್ವಭಾವ ಅವರದಾಗಿತ್ತು. ಇವತ್ತು ಎಲ್ಲಾ ಕಡೆ ನಾವು ನಿವೇಶನಗಳಿಗಾಗಿ ಪರದಾಡುತ್ತಿದ್ದೇವೆ. ಆಶ್ರಯ ನಿವೇಶನಗಳ ಬಗ್ಗೆ ಹೇಳಬೇಕಾದರೆ ಇವತ್ತಿಗೂ ಕೂಡ ಬಂಗಾರಪ್ಪನವರ ಕಾಲದಲ್ಲಿ ನಾವು ಏನು ಜಮೀನು acquite ಮಾಡಿಕೊಂಡಿದ್ದೆವು ಅಥವಾ ಆಶ್ರಯ ಯೋಜನೆಗಳಿಗಾಗಿ ನಿವೇಶನಗಳನ್ನು ಖರೀದಿ ಮಾಡಿದ್ದೇವೆ, ಆ ನಿವೇಶನಗಳಲ್ಲಿ ಮನೆಗಳನ್ನು ಕೊಡುವ ಕಾರ್ಯಕ್ರಮ ಇನ್ನೂ ಜಾರಿಯಾಗಿಲ್ಲ. ಅದನ್ನು ನಾವು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳನ್ನು ಕೊಡಬೇಕಾದರೆ ಇವತ್ತು ನಿವೇಶನಗಳಿಲ್ಲ. ಸರ್ಕಾರ ಆ ದೃಷ್ಟಿಕೋನವನ್ನು ಇಟ್ಟುಕೊಂಡು ಕೆಲಸ ಮಾಡಬೇಕಿದೆ. ಬಡವರ ಹಲವಾರು ಯೋಜನೆಗಳನ್ನು ವಿಶ್ವ ಎನ್ನುವ ಯೋಜನೆ, ಗುಡಿ ಕೈಗಾರಿಕೆಗೋಸ್ಕರ, ಅವರು ನಜೀರ್ ರವರಿಗೆ ಹೇಳಿದರು. ಒಂದು ವಿಶೇಷವಾದ ಕಾರ್ಯಕ್ರಮವನ್ನು ಮಾಡಬೇಕು. ನೀವು ಜಪಾನ್ ಹಾಗೂ ಬೇರೆ ದೇಶಗಳಿಗೆ ಹೋಗಿ ತಿಳಿದುಕೊಂಡು ಬಂದು ಅದನ್ನು launch ಮಾಡಬೇಕೆಂದಾಗ ಆಗಿನ ಪ್ರಧಾನ ಮಂತ್ರಿಗಳಾಗಿದ್ದ ನರಸಿಂಹರಾಯರನ್ನು ಕರೆದು ಬೆಂಗಳೂರಿನ ಯಲಹಂಕದಲ್ಲಿ ಒಂದು ದೊಡ್ಡ ಕಾರ್ಯಕ್ರಮವನ್ನು ಮಾಡಿ ಅದಕ್ಕೆ ಪ್ರೋತ್ಸಾಹ ಕೊಡತಕ್ಕಂಹ ಕೆಲಸ ಮಾಡಿದರು. ಅಂದರೆ ಪ್ರತಿ ಬಡವ ಹೇಗೆ ಜೀವನ ಸಾಗಿಸುತ್ತಾನೆಂಬ ಬಗ್ಗೆ ಅರಿವು, ಅನುಭವ ಅವರಿಗಿತ್ತು. ಅವರು ಎಂದೂ ಜಾತಿವಾದಿಯಾಗಿರಲಿಲ್ಲ ಎಂಬುದು ಬಹಳ ಮುಖ್ಯ. ಅವರ ವೈಶಿಷ್ಟ್ಯ ಎಂದರೆ ಬಂಗಾರಪ್ಪ ಒಬ್ಬ ನಾಯಕರಾಗಿ ಬೆಳೆದಿದ್ದರೆಂದರೆ ಅವರು ಎಲ್ಲಾ ಸಮಾಜಕ್ಕೂ ನಾಯಕರಾಗಿ ಬೆಳೆದಿದ್ದರು. ಮುರುಘೇಂದ್ರ ಮಠಕ್ಕೆ ಪರಮ ಭಕ್ತರಾಗಿದ್ದರು. ಹುಬ್ಬಳ್ಳಿಯ ಮೂರು ಸಾವಿರ ಮಠಕ್ಕೆ ಪ್ರತಿ ವರ್ಷ ಒಂದು ಸಾರಿಯಾದರೂ ಹೋಗಿ ದರ್ಶನ ಪಡೆದು ಬರುತ್ತಿದ್ದರು. ಅದೇ ಪ್ರಕಾರ ಪಂಚಾಕ್ಷರಿ ಗವಾಯಿಗಳನ್ನು ಮೊದಲ ಬಾರಿ ಗುರುತಿಸಿ ಸನ್ಮಾನ ಮಾಡಿ, ಅವರನ್ನು ಹೆಚ್ಚು ಬೆಳಕಿಗೆ

ತರುವ ಪ್ರಯತ್ನ ಆಗಬೇಕೆಂದು ಹೇಳಿ ಅಲ್ಲಿ ಪ್ರಥಮವಾಗಿ ಕಾರ್ಯಕ್ರಮ ಮಾಡಿದವರು ಬಂಗಾರಪ್ಪನವರು. ಅವರದು ಬಹಳ ವಿಚಿತ್ರವಾದ ಸ್ವಭಾವ. ರಾಜಕೀಯದಲ್ಲಿ ಒಮ್ಮೊಮ್ಮೆ ತಪ್ಪುಗಳು ಎಲ್ಲರಿಂದಲೂ ಆಗುತ್ತದೆ. ನನ್ನ ಅನಿಸಿಕೆಯ ಪ್ರಕಾರ ಬಂಗಾರಪ್ಪನವರು ಮೇಲಿಂದ ಮೇಲೆ ಪಕ್ಷಾಂತರ ಮಾಡದಿದ್ದರೆ ಇಡೀ ರಾಷ್ಟ್ರದಲ್ಲಿ ಅವರು ಒಬ್ಬ ದೊಡ್ಡ ನಾಯಕರಾಗಿ ಬೆಳೆಯುವ ಸಾಧ್ಯತೆ ಇತ್ತು ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಕೊನೆಯವರೆಗೆ ಅವರ ಶಿಷ್ಯಂದಿರು, ಅವರನ್ನು ಹಿಂಬಾಲಿಸಿದಂತಹ ಒಂದು ಜನಾಂಗ ಏನಿದೆ ಅವರ ಮನಸ್ಸಿನಲ್ಲಿ ಆ ಕೊರಗು ಇವತ್ತಿಗೂ ಉಳಿದಿದೆ. ಅದಕ್ಕೋಸ್ಕರ ನಾವು ಬಂಗಾರಪ್ಪನವರು ಏನು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ, ಅದನ್ನು ಮುಂದುವರೆಸಿಕೊಂಡು ಹೋಗಬೇಕು. ಅದೇ ರೀತಿ ಯುವಕರಿಗೆ ರಾಜಕೀಯ ಜೀವನದಲ್ಲಿ ಪ್ರೋತ್ಸಾಹ ಕೊಟ್ಟರು ಮತ್ತು ಸ್ವಚ್ಛ ಜೀವನ ಮಾಡುವುದಕ್ಕಾಗಿ ಅವಕಾಶವನ್ನು ತಂದು ಕೊಟ್ಟರು, ಸ್ವಾಭಿಮಾನದ ಬದುಕನ್ನು ಬಾಳುವುದಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಟ್ಟರು ಅದನ್ನೆಲ್ಲಾ ಈ ಸರ್ಕಾರ ಮುಂದುವರೆಸಿಕೊಂಡು ಹೋಗಬೇಕು. ಅದರ ಜೊತೆ ಜೊತೆಗೆ ಬಂಗಾರಪ್ಪನವರ ಹೆಸರು ಇರಬೇಕು. ಬಿ.ಎಂ.ಪಾಟೀಲ್ ರವರು ತೀರುವುದಕ್ಕೆ ಮುಂಚೆ agriculture University ಯ ಬಗ್ಗೆ ಬೇಡಿಕೆ ಇತ್ತು. ಬಿಜಾಪುರದಲ್ಲಿ agriculture college ಪ್ರಾರಂಭವಾಗಬೇಕೆಂಬ ಬೇಡಿಕೆ ಇತ್ತು. ಅವರು ತೀರಿ ಹೋದ ಮೇಲೆ ಶತಾಯ-ಗತಾಯ ಅದನ್ನು announce ಮಾಡಿದರು. ಆ ರೀತಿಯಾದಂತಹ ಒಂದು ಪ್ರಯತ್ನ, ದೃಢ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಿದೆ. ಬಂಗಾರಪ್ಪನವರ ಹೆಸರು ಇತಿಹಾಸದ ಪುಟದಲ್ಲಿ ಉಳಿಯುವುದಕ್ಕೋಸ್ಕರ ಇರುವಂತಹ ಯಾವುದಾದರೂ universityಗೆ ಅವರ ಹೆಸರನ್ನು ಇಡಬೇಕು. ಇವತ್ತು ತಾವು ಮಾತನಾಡುತ್ತಿದ್ದೀರಿ. ಶಿವಮೊಗ್ಗದಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೊಸ University ಆರಂಭ ಮಾಡಬೇಕೆಂದು ಆಲೋಚನೆ ಈಗಾಗಲೇ ನಡೆದಿದೆ. ಅದಕ್ಕೆ ಬಂಗಾರಪ್ಪನವರ ಹೆಸರನ್ನು ಇಟ್ಟು ವಿದ್ಯಾ ಸಂಸ್ಥೆಯನ್ನು ಪ್ರಾರಂಭ

ಮಾಡುವ ಮುಖಾಂತರ ಅವರ ಆತ್ಮಕ್ಕೆ ಶಾಂತಿಯನ್ನು ತಂದಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮತ್ತೊಬ್ಬ ಯುವ ಸ್ನೇಹಿತ ದಿ.ಮಹದೇವ ರವರು ನಮ್ಮ ಜೊತೆ ಶಾಸಕರಾಗಿದ್ದರು. Such a brilliant man, ಎಷ್ಟು ಸ್ನೇಹ ಜೀವಿಯಾಗಿದ್ದ ಎಂದರೆ ನಿಜಕ್ಕೂ ನನ್ನ ಮನಸ್ಸಿಗೆ ಆಘಾತವಾಯಿತು. ಬಹಳ ಸಣ್ಣ ವಯಸ್ಸಿನಲ್ಲಿಯೇ ಅವರು ತೀರಿ ಹೋದರು. ಎಲ್ಲರ ಜೊತೆ ಬಹಳ ವಿಶ್ವಾಸ, ಪ್ರೇಮದಿಂದ ಬೆರೆಯುತ್ತಿದ್ದ ವ್ಯಕ್ತಿ ಇಂದು ನಮ್ಮ ಮುಂದಿಲ್ಲ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಇಂದು ತಾವು ತಂದಂತಹ ನಿರ್ಣಯದಲ್ಲಿ ನಿಧನರಾದವರೆಲ್ಲರ ಆತ್ಮಕ್ಕೂ ಶಾಂತಿ ಸಿಗಲಿ ಎಂದು ಹಾರೈಸುತ್ತಾ, ಅವರ ಕುಟುಂಬಕ್ಕೆ ಈ ನೋವನ್ನು ಸಹಿಸುವ ಶಕ್ತಿ ಸಾಮರ್ಥ್ಯವನ್ನು, ಈ ಒಂದು ಕಷ್ಟ ಸಂದರ್ಭದಲ್ಲಿ ಭಗವಂತ ಕೊಡಲಿ ಎಂದು ಹೇಳುತ್ತಾ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ):- ಮಾನ್ಯ ಅಧ್ಯಕ್ಷರೆ ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ಬೆಂಬಲವನ್ನು ಕೊಟ್ಟು ಈ ದಿನ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿ, ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿ ತಮ್ಮದೇ ಆದ ಛಾಪನ್ನು ರಾಜ್ಯದಲ್ಲಿ ಬಿಟ್ಟು ಹೋಗಿದ್ದಾರೆ ದಿವಂಗತ ಬಂಗಾರಪ್ಪನವರು. ಅವರು ಬಹುಮುಖ ಪ್ರತಿಭಾವಂತರು. ಎಲ್ಲಾ ಕ್ಷೇತ್ರಗಳಲ್ಲು, ವಿಶೇಷವಾಗಿ ಸಾಮಾಜಿಕವಾಗಿ ತಮ್ಮನ್ನು ತಾವು ಸಮರ್ಥನೆ ಮಾಡಿಕೊಂಡಿರತಕ್ಕಂತಹ ವ್ಯಕ್ತಿ ಅವರು. ಅದಕ್ಕೆ ಪ್ರತಿಯಾಗಿ ಅವರಿಗೆ ಮುಖ್ಯಮಂತ್ರಿಯಾಗಿ ಸಿಕ್ಕಂತಹ ಎರಡು ವರ್ಷದ ಅವಧಿಯಲ್ಲಿ ಬಹಳ ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಕೊಟ್ಟರು. ಈಗಾಗಲೇ ಹೇಳಿದಂತೆ ಆಶ್ರಯ, ವಿಶ್ವ, ಅಕ್ಷಯ ಮತ್ತು ಅಕ್ರಮ-ಸಕ್ರಮ ಯೋಜನೆಗಳು. ಅಕ್ರಮವಾಗಿ 5 ಎಕರೆಯೊಳಗೆ ಬಡ ರೈತರು ಯಾರೂ ಉಳುಮೆ ಮಾಡಿಕೊಳ್ಳುತ್ತಿದ್ದರೋ ಅವರಿಗೆ ಭೂಮಿಯನ್ನು ಸಕ್ರಮ ಮಾಡಿಕೊಡುವ ಕಾನೂನನ್ನು ಅವರ ಕಾಲದಲ್ಲಿಯೇ ಜಾರಿಗೆ ತಂದರು. ಅದರ ಜೊತೆಗೆ ಉಪಾಧ್ಯಾಯರ ನೇಮಕಾತಿ ಇತ್ತು. DLRC State Level recruitment

committee ಯನ್ನು ರದ್ದು ಮಾಡಿ merit-cum-age roster ಪದ್ಧತಿಯನ್ನು ಜಾರಿಗೆ ತಂದದ್ದು ಬಂಗಾರಪ್ಪನವರ ಕಾಲದಲ್ಲಿಯೇ. ಹೀಗೆ ಬಹಳ ರೀತಿಯ ಬದಲಾವಣೆಗಳಿಗೆ ಪ್ರಯತ್ನಪಟ್ಟಂತಹ ವಿಶಿಷ್ಟ ಗುಣವುಳ್ಳ ಒಬ್ಬ ವ್ಯಕ್ತಿ. ಅವರು ನಿಜವಾಗಿಯೂ ಯುವಕರಿಗೆ ಬಹಳ ಪ್ರೋತ್ಸಾಹ ಮಾಡುತ್ತಿದ್ದರು. ಅವರು ಮುಖ್ಯಮಂತ್ರಿಗಳಾದ ತಕ್ಷಣ ಅನೇಕ ಯುವಕರನ್ನು ಗುರುತಿಸಿದರು. ಅದರಲ್ಲಿ ನನ್ನಾದಿಯಾಗಿ ಡಿ.ಕೆ.ಶಿವಕುಮಾರ್, ನಾಡಗೌಡರು, ಜಾರ್ಜ್, ಎಸ್.ರಮೇಶ್ ಹೀಗೆ ಅನೇಕ ಯುವಕರನ್ನು ಗುರುತಿಸಿ ಅವರಿಗೆ ಮಂತ್ರಿಮಂಡಲದಲ್ಲಿ ಸೇವೆ ಮಾಡತಕ್ಕ ಅವಕಾಶವನ್ನು ಕಲ್ಪಿಸಿಕೊಡುವ ಮುಖಾಂತರ ಈ ರಾಜ್ಯಕ್ಕೆ ಹೊಸ ಮುಖಗಳನ್ನು ಪರಿಚಯ ಮಾಡಿಕೊಟ್ಟಿರತಕ್ಕ ಒಬ್ಬ ಧೀಮಂತ ನಾಯಕ. ಈಗಾಗಲೇ ಹೇಳಿದಂತೆ ಅವರ ಕಾರ್ಯಕ್ರಮಗಳ ಜೊತೆಗೆ ಅವರದು ಬಹಳ ವರ್ಣರಂಜಿತ ವ್ಯಕ್ತಿತ್ವ. ಅವರು ಬಹುಮುಖ ಪ್ರತಿಭೆಗಳನ್ನು ಬೆಂಬಲಿಸುತ್ತಾ, ಸದಾಕಾಲ ನಗುಮುಖರಾಗಿ ರಾಜಕೀಯವಾಗಿ ಈ ರಾಜ್ಯದ ಜನರ ಬಗ್ಗೆ ಚಿಂತನೆ ಮಾಡಿದ ಒಬ್ಬ ಮೇಧಾವಿ ರಾಜಕಾರಣಿ. ತಮ್ಮನ್ನು ತಾವು ರಾಜಕಾರಣದಲ್ಲಿ ಅರ್ಪಣೆ ಮಾಡಿಕೊಂಡಿದ್ದರು. ಅವರು ದೇಹ ಬಿಟ್ಟ ದಿನ ನಾವು ಸೊರಬಕ್ಕೆ ಹೋಗಿದ್ದೆವು. ಆ ಜನಸ್ತೋಮವನ್ನು ನೋಡಿ ನಾವು ಗಾಬರಿಗೊಂಡೆವು. ಬಹಳ ತಡವಾದರೂ ಲಕ್ಷಾಂತರ ಜನ ಸೇರಿದ್ದರು. ಲೆಕ್ಕ ಇಲ್ಲ. ರೋಡೆಲ್ಲಾ ಭರ್ತಿ. ಅಷ್ಟು ಜನಸ್ತೋಮ. ಅಷ್ಟೊಂದು ಜನಸ್ತೋಮದ ಮಧ್ಯೆ ಅವರ ಕಾರ್ಯಕ್ರಮವಾಯಿತು ಎಂದರೆ ಬಹುಶಃ ಅವರ ಸೇವೆಗೆ ಜನ ಸ್ಪಂದನೆ ಮಾಡಿದ್ದಾರೆ ಎಂಬುದನ್ನು ನಾವೆಲ್ಲಾ ಅರ್ಥ ಮಾಡಿಕೊಳ್ಳಬೇಕು. ಅಂತಹ ವ್ಯಕ್ತಿತ್ವದ ವ್ಯಕ್ತಿ ಬಂಗಾರಪ್ಪನವರ ಜ್ಞಾಪಕಾರ್ಥವಾಗಿ ಸರ್ಕಾರ ಏನಾದರೂ ಚಿಂತನೆ ಮಾಡಬೇಕು. ಸಮಾಜವಾದಿಗಳಾಗಿ ಅವರ ಚಿಂತನೆಗಳು ಏನು ಇತ್ತು ಅದಕ್ಕೆ ಬೆಂಬಲ ಕೊಡತಕ್ಕ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ತರುವ ಪ್ರಯತ್ನ ಎಲ್ಲರೂ ಸೇರಿ ಮಾಡಬೇಕಾದ ಅವಶ್ಯಕತೆ ಇದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ, ಇವತ್ತು ಅವರ ಅಗಲಿಕೆಯಿಂದ ಇಡೀ ರಾಜ್ಯಕ್ಕೆ

ಅಲ್ಲ, ರಾಷ್ಟ್ರಕ್ಕೆ ಅಲ್ಲ, ನಮ್ಮೆಲ್ಲರಿಗೂ ಸಹ ಅಪಾರವಾದ ನಷ್ಟವಾಗಿದೆ. ಅದರಲ್ಲೂ ವಿಶೇಷವಾಗಿ ಅವರು ತಮ್ಮ ಕುಟುಂಬದೊಡನೆ ಬಹಳ ನಿಕಟವರ್ತಿಯಾಗಿದ್ದು, ಸಂಬಂಧ ಕಳೆದುಕೊಂಡಿರತಕ್ಕ ಅವರ ಅಗಲಿಕೆಯಿಂದಾದ ನಷ್ಟವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ಭಗವಂತ ನೀಡಲೆಂದು ಹಾರೈಸಿ, ಜೊತೆಯಲ್ಲಿ ಮಾಜಿ ಶಾಸಕರಾಗಿದ್ದ ಮಹದೇವ ರವರು, ರಾಮಾ ಸಿದ್ದಲಿಂಗ ನಡೋಣಿ ಯವರು, ಸೋಮಪ್ಪ ಸುವರ್ಣ ರವರುಗಳ ಆತ್ಮಕ್ಕೆ ಶಾಂತಿ ಕೋರುತ್ತೇನೆ ಮತ್ತು ಎಲ್.ಬಸವರಾಜು ರವರು ನಮ್ಮ ಜಿಲ್ಲೆಯವರು. ಬಹಳ ವಿಶಿಷ್ಟವಾದ ಕವಿಗಳು. ಅವರು ಕವಿಗಳಷ್ಟೇ ಅಲ್ಲದೆ ಸಂಶೋಧಕರಾಗಿ ಸುಮಾರು 56 ಕ್ಕೂ ಮೇಲ್ಪಟ್ಟು ಕೃತಿಗಳನ್ನು ರಚನೆ ಮಾಡುವ ಮುಖಾಂತರ ಈ ರಾಜ್ಯಕ್ಕೆ ಸಾಹಿತ್ಯದ ಮೂಲಕ ಅನೇಕ ಮಾರ್ಗದರ್ಶನಗಳನ್ನು ಕೊಟ್ಟು ಹೋಗಿರುವ ಇವರು, ನಮ್ಮ ಗೌರಿಬಿದನೂರು ತಾಲ್ಲೂಕಿನವರು. ಆದ್ದರಿಂದ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬಕ್ಕೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹಾರೈಸಿ ಮತ್ತೊಮ್ಮೆ ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಂಡೆಪ್ಪ ಕಾಂಶೆಂಪೂರ್ (ಬೀದರ್ ದಕ್ಷಿಣ):- ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ವಿಶೇಷವಾಗಿ ಎಸ್.ಬಂಗಾರಪ್ಪನವರು, ಮಾಜಿ ಮುಖ್ಯಮಂತ್ರಿಗಳಾಗಿ, ಹಿಂದುಳಿದ ವರ್ಗಕ್ಕೆ ಅಪಾರವಾಗಿ ಬಹಳಷ್ಟು ಕೆಲಸ ಮಾಡಿ ನಿಧನ ಹೊಂದಿದ್ದಾರೆ. ಅವರಿಗೆ ಇವತ್ತು ಸಂತಾಪ ಸೂಚನೆಯನ್ನು ತಂದಿರುವುದಕ್ಕೆ ನಾನು ನನ್ನ ಸಂಪೂರ್ಣ ಬೆಂಬಲವನ್ನು ಸೂಚಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು, ಸ್ವಾಭಿಮಾನಿ ಎಂದು ಹೇಳಿದರು. ಇವತ್ತು ನಿಜಕ್ಕೂ ಸ್ವಾಭಿಮಾನಿ ಎಂಬ ಪದಕ್ಕೆ ಬೇರೊಂದು ಹೆಸರೆಂದರೆ, ಅದು ಬಂಗಾರಪ್ಪನವರು. ಏಕೆಂದರೆ, ನಾವು ಇತ್ತೀಚೆಗೆ ನೋಡಿದಾಗ, ಒಂದು ಸಲ ಗೆಲ್ಲುವುದೇ ಬಹಳ ಕಷ್ಟವಿದೆ, ಆದರೆ 7 ಸಲ ಗೆದ್ದು, 3 ಸಲ

ಪಾರ್ಲಿಮೆಂಟ್‌ಗೆ ಗೆದ್ದು ಇವತ್ತು ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ಹೆಸರನ್ನು ಬಿಟ್ಟು ಒಂದು ಕೆಲಸ ಮಾಡಿದಂಥ ವ್ಯಕ್ತಿ. ಅವರದು ಪಕ್ಷವಿರಲಿಲ್ಲ, ಅವರೇ ಹುಟ್ಟುಹಾಕಿದಂಥ ಪಕ್ಷಗಳು ಇದ್ದವು. ಅಂತಹ ಒಂದು ಶಕ್ತಿ ಅವರದ್ದಾಗಿತ್ತು. ವಿಶೇಷವಾಗಿ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಆಶ್ರಯ, ಗ್ರಾಮೀಣ ಕೃಪಾಂಕ ಸೇರಿದಂತೆ ಇವೆಲ್ಲಾ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಟ್ಟಿದ್ದಾರೆ. ನಮ್ಮ ಭಾಗಗಳಿಗೆ ಬಂದಾಗ, ಅವರ ಅಭಿಮಾನಿಗಳು ಬಹಳಷ್ಟು ಅಭಿಮಾನಿಗಳು ಇವತ್ತಿನವರೆಗೆ ಎಲ್ಲಾ ಗ್ರಾಮಗಳಲ್ಲಿದ್ದಾರೆ. ಕೃಷಿಕರಿಗೆ ಫ್ರೀ ಪಂಪ್‌ಸೆಟ್ ಕೊಡುವುದು ಅವರ ಕಾಲದಲ್ಲೇ ಪ್ರಾರಂಭವಾಗಿದ್ದು ಮತ್ತು ಇತ್ತೀಚೆಗೆ ನಮ್ಮ ಪಕ್ಷಕ್ಕೆ ಬಂದು ನಾವು ಅವರ ಒಡನಾಡಿಯಾಗಿ ಅವರ ಹಲವಾರು ಸಭೆಗಳನ್ನು ನೋಡಿದಾಗ, ಅವರ ವಯಸ್ಸಿಗೆ ನಮ್ಮನ್ನು ಕಂಪೇರ್ ಮಾಡಿದರೆ ಬಹಳಷ್ಟು ಆಕ್ಟಿವ್. ಸುಮಾರು 5 ತಿಂಗಳ ಮೊದಲು 3 ಜಿಲ್ಲೆ ಇಂಚಾರ್ಜ್ ಅನ್ನು ದೇವೇಗೌಡರು ಕೊಟ್ಟು, ನೀವು, ಅಲ್ಲಿ ಹೋಗಿ ಪಕ್ಷವನ್ನು ಸರಿಪಡಿಸಿರಿ ಎಂದು ನಮಗೆಲ್ಲಾ ವಹಿಸಿದರು, ನಾವು ಇನ್ನೂ ನಮ್ಮಲ್ಲೇ ಇದ್ದೇವೆ, ಅವರು ಹೋಗಿ ಅಲ್ಲೆಲ್ಲಾ ವಿಚಾರಣೆ ಮಾಡಿ ತಮ್ಮದೇ ಆದ ಒಂದು ವರದಿಯನ್ನು ಕೊಟ್ಟರು. ಆಂದರೆ ಇಂತಹ ವಯಸ್ಸಿನಲ್ಲಿ ಅವರ ಆಕ್ಟಿವ್ನೆಸ್ ಇತ್ತಲ್ಲಾ ಅದನ್ನು ಬಹಳ ಮೆಚ್ಚಬೇಕಾದ್ದು. ಅವರೇನು ಇವತ್ತು ನಿಧನವನ್ನು ಹೊಂದಿದ್ದಾರೆ, ಇದರಿಂದ ನಮ್ಮ ಕರ್ನಾಟಕಕ್ಕೆ ನಿಜಕ್ಕೂ ದೊಡ್ಡ ನಷ್ಟವಾಗಿದೆ; ವಿಶೇಷವಾಗಿ ಹಿಂದುಳಿದ ವರ್ಗಕ್ಕೆ ಬಹಳ ನಷ್ಟವಾಗಿದೆ, ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬಕ್ಕೆ ಅವರ ಅಗಲಿಕೆಯ ನಷ್ಟವನ್ನು ಭರಿಸುವ ಶಕ್ತಿಯನ್ನು ದೇವರು ಕೊಡಲೆಂದು ನಾನು ಹೇಳಬಯಸುತ್ತೇನೆ.

ಮಂಚನಹಳ್ಳಿ ಮಹದೇವ ಅವರು ಕಳೆದ ಸಾರಿ ಗೆದ್ದಾಗ, ನಾವು ಅವರು ಒಂದೇ ಸಾರಿ ಮೊದಲ ಸಲ ಅಸೆಂಬ್ಲಿಗೆ ಬಂದದ್ದು. ನಮಗೂ ಒಳ್ಳೆಯ ಸ್ನೇಹಿತರಾಗಿದ್ದರು, ಬಹಳ ಆಕ್ಟಿವ್ ಆಗಿದ್ದರು. ಅವರು ನಮ್ಮ ಕುರುಬ ಸಮಾಜದಲ್ಲಿ ಒಂದು ಒಳ್ಳೆಯ ರೀತಿಯಲ್ಲಿ ಯಂಗ್ ಲೀಡರ್

ಆಗಿದ್ದರು. ಅವರ ಅಗಲಿಕೆಯಿಂದ ನಿಜಕ್ಕೂ ನಮ್ಮ ಸಮಾಜಕ್ಕೆ ದೊಡ್ಡ ನಷ್ಟವಾಗಿದೆ ಎಂದು ನಾನು ಭಾವಿಸುತ್ತೇನೆ. ಅವರ ಆತ್ಮಕ್ಕೂ ಶಾಂತಿ ಸಿಗಲಿ ಮತ್ತು ವಿಶೇಷವಾಗಿ ಸಂತಾಪ ಸೂಚನೆಗೆ ಗಣ್ಯರೆಲ್ಲಾ ಏನು ಬೆಂಬಲವನ್ನು ಸೂಚಿಸಿದರು, ಅದಕ್ಕೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಎಚ್.ಶಿವಶಂಕರ ರೆಡ್ಡಿ (ಗೌರಿಬಿದನೂರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು, ನಾಡಿನ ಅನೇಕ ಗಣ್ಯರು ನಮ್ಮನ್ನು ಅಗಲಿರುವ ಈ ಸಂದರ್ಭದಲ್ಲಿ ಮಂಡಿಸಿರತಕ್ಕ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಇವತ್ತು ಎಲ್.ಬಸವರಾಜು ಅವರು ಶ್ರೇಷ್ಠ ಸಾಹಿತಿಗಳು, ನಮ್ಮ ರಾಜ್ಯದಲ್ಲಿ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ನೀಡಿರುವ ಇವರು, ನಮ್ಮ ತಾಲ್ಲೂಕಿನ ಇಡಗೂರು ಗ್ರಾಮದಲ್ಲಿ ಜನಿಸಿ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಸ್ವಗ್ರಾಮದಲ್ಲೇ ಮಾಡಿ, ಆಮೇಲೆ ಸಿದ್ದಗಂಗೆಯಲ್ಲಿ ವಿದ್ಯಾಭ್ಯಾಸ ಮಾಡಿ, ಬೆಂಗಳೂರಿನಲ್ಲಿ ಪ್ರೌಢ ಶಿಕ್ಷಣವನ್ನು ಮುಗಿಸಿ, ಮೈಸೂರಿನಲ್ಲಿ ಪದವೀಧರರಾಗಿ, ಅಧ್ಯಾಪಕರಾಗಿ ಕೆಲಸ ನಿರ್ವಹಿಸತಕ್ಕ ಸಂದರ್ಭದಲ್ಲಿ ಸುಮಾರು 56 ಕೃತಿಗಳನ್ನು ರಚನೆ ಮಾಡಿರುವುದು ಅಪಾರ ಕೊಡುಗೆಯಾಗಿದೆ. ಅವರ ಅಂತ್ಯಕ್ರಿಯೆ ಬಹುಶಃ ನಾಳೆ ಮೈಸೂರಿನಲ್ಲಿ ನಡೆಯುವ ಬಗ್ಗೆ ಪತ್ರಿಕೆಯಲ್ಲಿ ಓದಿದೆ ಮತ್ತು ಇವತ್ತು ಅವರ ಮಗ ಮಗಳು ಬರುತ್ತಾರೆನ್ನುವ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಸರ್ಕಾರದ ಸಕಲ ಗೌರವಗಳೊಡನೆ ಅವರ ಅಂತ್ಯಕ್ರಿಯೆಯನ್ನು ನಡೆಸಿಕೊಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಂಡು, ಅವರ ಕುಟುಂಬಕ್ಕೆ ಶಕ್ತಿ, ಶಾಂತಿಯನ್ನು, ನೆಮ್ಮದಿಯನ್ನು ಕೊಡತಕ್ಕಂಥದ್ದನ್ನು ಭಗವಂತ ಕೊಡಲೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಅಭಯಚಂದ್ರ ಜೈನ್ (ಮೂಡಬಿದ್ರೆ):- ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಮಾಜಿ ಶಾಸಕರು, ದಿ: ಸೋಮಪ್ಪ ಸುವರ್ಣರವರು, 1980ರಲ್ಲಿ ಮೂಡಬಿದ್ರೆ ಕ್ಷೇತ್ರದ 9ನೇ ವಿಧಾನಸಭೆಗೆ ಶಾಸಕರಾಗಿ ಆರಿಸಿ

ಬಂದವರು. ಅವರು ಶಾಸಕರಾದಂಥ ಸಂದರ್ಭದಲ್ಲಿ ಒಕ್ಕಲು ಮಸೂದೆ, Land Reform Act ನಲ್ಲಿ ಬಡವರಿಗೆ ಅಪಾರವಾದ ಸೇವೆ ಮಾಡಿದಂಥ ಶಾಸಕರು. Today ban ಆದಂಥ ಸಂದರ್ಭದಲ್ಲಿ ಅದಕ್ಕೆ ಹೆಚ್ಚಿನ ಪರಿಶ್ರಮವನ್ನು ಬಹಿಸಿ ಅವರಿಗೆ ಪರಿಹಾರವನ್ನು ಒದಗಿಸಿಕೊಡುವಲ್ಲಿ ಕೂಡ ಸನ್ಮಾನ್ಯ ಸೋಮಪ್ಪ ಸುವರ್ಣರವರು ದೊಡ್ಡ ಪ್ರಯತ್ನವನ್ನು ಮಾಡಿದಂಥವರು. ನನ್ನ ಕ್ಷೇತ್ರದಲ್ಲಿ ನಾರಾಯಣ ಗುರು ವಿದ್ಯಾಸಂಸ್ಥೆಯನ್ನು ಸ್ಥಾಪನೆ ಮಾಡಿ ಇವತ್ತು ಸುಮಾರು 2000 ವಿದ್ಯಾರ್ಥಿ- ವಿದ್ಯಾರ್ಥಿನಿಯರು ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪಿ.ಯು. ಕಾಲೇಜಿನವರೆಗೆ ಆ ವಿದ್ಯಾಸಂಸ್ಥೆಯನ್ನು ನಡೆಸಿ ಅಲ್ಲಿಯ ಸಾಮಾಜಿಕ ಪರಿವರ್ತನೆಯಲ್ಲಿ ದೊಡ್ಡ ಸೇವೆಯನ್ನು ಮಾಡುತ್ತಿದ್ದಾರೆ. ಅಲ್ಲದೇ ತುಳುನಾಡಿನ ವೀರಪುರುಷರಾದಂತಹ ಕಾಂತಾಬಾರೆ ತುದಾಬಾರೆ ಕ್ಷೇತ್ರದ ಅಭಿವೃದ್ಧಿಯನ್ನು ಕೂಡ ಅವರು ಅಲ್ಲಿ ಮಾಡುತ್ತಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮ ಜಿಲ್ಲೆಯಲ್ಲಿರುವ ಆ ಹಿಂದುಳಿದವರ್ಗದ ವೀರಪುರುಷರಾದಂತಹ ಕಾಂತಾಬಾರೆ ತುದಾಬಾರೆ ಕ್ಷೇತ್ರದ ಅಭಿವೃದ್ಧಿಗೆ ಈ ಸಲದ ಬಜೆಟ್‌ನಲ್ಲಿ 2 ಕೋಟಿ ರೂಪಾಯಿಗಳ ಅನುದಾನವನ್ನು ಇಟ್ಟು ಅಭಿವೃದ್ಧಿಪಡಿಸಬೇಕೆಂದು ಕೇಳಿಕೊಂಡು, ಇವತ್ತು ಸೋಮಪ್ಪ ಸುವರ್ಣರವರ ನಿಧನಕ್ಕೆ ನಾನು ನನ್ನ ಸಂತಾಪವನ್ನು ಸೂಚಿಸುತ್ತಿದ್ದೇನೆ.

ಶ್ರೀ ಕೆ.ಜೆ.ಜಾರ್ಜ್ (ಸರ್ವಜ್ಞನಗರ):- ಮಾನ್ಯ ಅಧ್ಯಕ್ಷರೆ, ಈ ದಿವಸ ದಿ:ಬಂಗಾರಪ್ಪನವರ ವಿಚಾರದಲ್ಲಿ ತಾವು ಸೂಚಿಸಿದ ಸಂತಾಪ ಸೂಚನೆ ಬಗ್ಗೆ ನಾನು ಎರಡು ಮಾತುಗಳನ್ನಾಡುವುದಕ್ಕೆ ಬಯಸುತ್ತೇನೆ. ಬಂಗಾರಪ್ಪನವರು, ಬಹುಶಃ ನಾವು ರಾಜಕೀಯದಲ್ಲಿ ಕಂಡಂಥ ನಾಯಕರಲ್ಲಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿ. ಬಹುಶಃ ಅವರು ಇಲ್ಲಿಯವರೆಗೆ ಎಷ್ಟು ಚುನಾವಣೆಗಳಲ್ಲಿ ಗೆದ್ದಿದ್ದಾರೆ, ಅವರ ರಾಜಕೀಯ ಜೀವನದಲ್ಲಿ ಯಾವ ರೀತಿ ಬಡವರ ಪರವಾಗಿ ಕೆಲಸ ಮಾಡಿದ್ದಾರೆ, ಗೇಣಿದಾರರ ಪರವಾಗಿ ಕೆಲಸ ಮಾಡಿದ್ದಾರೆ, ಅವರು ಸಮಾಜವಾದದಲ್ಲಿ

ಅಚಲ ವಿಶ್ವಾಸವನ್ನಿಟ್ಟು ಕೆಲಸ ಮಾಡಿದ್ದಾರೆ. ಆದುದರಿಂದ ಅವರು ರಾಜಕೀಯ ಜೀವನದಲ್ಲಿ ಸಾಕಷ್ಟು ಯಶಸ್ಸನ್ನು ಸಾಧಿಸಲು ಸಾಧ್ಯವಾಯಿತು. ಅವರು 1979ನೇ ಇಸವಿಯಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ, ಮತ್ತು ರಾಜೀವ್ ಗಾಂಧಿಯವರು ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದಾಗ, ನಾನು ಅವರೊಡನೆ ಕೆಲಸ ಮಾಡಿದ್ದೇನೆ. ಅದೇ ರೀತಿಯಲ್ಲಿ 1985ರಲ್ಲಿ ವಿರೋಧಪಕ್ಷದ ನಾಯಕರಾಗಿದ್ದಾಗ, ನಾನು ಇಲ್ಲಿ ಶಾಸಕನಾಗಿ ಅವರೊಡನೆ ಕೆಲಸ ಮಾಡಿಕೊಂಡು ಬಂದಿದ್ದೇನೆ. 1989ನೇ ಇಸವಿಯಲ್ಲಿ ದಿ:ವೀರೇಂದ್ರಪಾಟೀಲ್ ಅವರ ಮಂತ್ರಿಮಂಡಲದಲ್ಲಿ ನಾನು ಸಚಿವನಾಗಿದ್ದೆ, ಅವರು ಕೂಡ ಅದರಲ್ಲಿ Cabinet ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಅವರು ಮುಖ್ಯಮಂತ್ರಿಗಳಾಗಿದ್ದಾಗಲೂ ಕೂಡ ಅವರ ಜೊತೆ Housing and Urban Development Minister ಆಗಿ ಕೆಲಸ ಮಾಡಿದಾಗ, ಅವರನ್ನು ಹತ್ತಿರದಲ್ಲಿ ನೋಡಿದ್ದೇನೆ. ಬಡವರ ಪರವಾಗಿ ಎಷ್ಟು ಕಾರ್ಯಕ್ರಮಗಳನ್ನು ಮಾಡಿದ್ದಾರೆಂದರೆ, ರೈತರ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಕೊಡುವ ಕೆಲಸ, ಗ್ರಾಮೀಣ ಪ್ರದೇಶದಲ್ಲಿರುವ ಯಾರು ಉದ್ಯೋಗಾಕಾಂಕ್ಷಿಗಳಾಗಿದ್ದಾರೆ. ಒಂದು ಗ್ರೇಸ್ ಮಾರ್ಕ್ ಕೊಟ್ಟು ಸಾಕಷ್ಟು ಜನರಿಗೆ ಉದ್ಯೋಗ ಸಿಗುವಂಥ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿ ಈಗಾಗಲೇ ಹಲವಾರು ಮಾನ್ಯ ಸದಸ್ಯರು ಮಾತನಾಡಿದರು, ಅವರ ಕಾರ್ಯಕ್ರಮಗಳು, ಅದು ಆಶ್ರಯವಿರಬಹುದು, ಅದಕ್ಕೆ ನಾನೇ ಮಂತ್ರಿಯಾಗಿದ್ದೆ, ಎಂ.ಎಲ್.ಎ. ಗಳನ್ನು ಕಮಿಟಿಯಲ್ಲಿ ಛೇರ್ಮನ್ ಆಗಿ ಮಾಡುವುದು ಯಾವುದೇ ರಾಜಕೀಯ ಪಕ್ಷದ ಭೇದವಿಲ್ಲದೆ ಪ್ರತಿಯೊಂದು ಕ್ಷೇತ್ರದ ಶಾಸಕರನ್ನು ಆಶ್ರಯ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಯಿತು. ಅವತ್ತು ಬಂಗಾರಪ್ಪನವರು ಮುಖ್ಯಮಂತ್ರಿ ಮತ್ತು ಆರ್ಥಿಕ ಮಂತ್ರಿಯಾಗಿ ಒಂದು ಮಾತನ್ನು ಹೇಳಿದರು. ನೋಡಿ ನಮ್ಮಲ್ಲಿ ಹಣದ ಕೊರತೆ ಇಲ್ಲವೇ ಇಲ್ಲ, ಎಷ್ಟು ಬೇಕಾದರೂ ಹಣ ಕೊಡುತ್ತೇವೆ, ಆಶ್ರಯ ಸಮಿತಿಗೆ ಸರ್ಕಾರದ ಜಾಗವಿದ್ದರೆ ಅದನ್ನು ವರ್ಗಾವಣೆ ಮಾಡಿ. ಎಲ್ಲಾದರೂ ಸರ್ಕಾರದ ಜಾಗವಿಲ್ಲದಿದ್ದರೂ ಕೂಡ ಖಾಸಗಿಯವರೊಡನೆ negotiate ಮಾಡಿ

ಖರೀದಿ ಮಾಡಿ, ಅದಕ್ಕೆ ಎಷ್ಟು ಹಣಬೇಕಾದರೂ ಕೊಡುತ್ತೇವೆಂದು ಹೇಳಿದರು. ಯಾವ ಎಂಎಲ್‌ಎ ಎಷ್ಟು ದುಡ್ಡು ಕೇಳಿದರೂ ಕೊಟ್ಟು, ಸಾಕಷ್ಟು ಆಶ್ರಯ ಮನೆಗಳನ್ನು ಕಟ್ಟುವ ಮತ್ತು ಜಾಗವನ್ನು ಖರೀದಿ ಮಾಡುವ ಕೆಲಸವನ್ನು ಮಾಡಿದ್ದರು. ಅದೇ ರೀತಿಯಲ್ಲಿ ವಿಶ್ವ ಕಾರ್ಯಕ್ರಮ, ಇವತ್ತು ನಾವು ನೋಡುತ್ತಿದ್ದೇವೆ, ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಕುಶಲ ಕಾರ್ಮಿಕರಿದ್ದಾರೆ, handicrafts ಮಾಡುವವರಿದ್ದಾರೆ, ಅದರಲ್ಲೂ ಮಹಿಳೆಯರಿಗೆ ಆದ್ಯತೆಯನ್ನು ಕೊಟ್ಟು ಅವರಿಗೆ ಹಣ ಸಹಾಯ ಮಾಡಿ ಅವರು ಉತ್ಪಾದನೆ ಮಾಡುವ ವಸ್ತುಗಳನ್ನು ಸರ್ಕಾರದವರೇ ಖರೀದಿ ಮಾಡಿ ಮಾರಾಟ ಮಾಡುವಂಥ ಕೆಲಸವನ್ನು ಮಾಡಿದ್ದೇವೆ. ಬಹುಶಃ ಅಂದಿನ ಪ್ರಧಾನ ಮಂತ್ರಿಯಾದ ದಿ:ನರಸಿಂಹ ರಾವ್ ಅವರು ಕರ್ನಾಟಕಕ್ಕೆ ಬಂದಿದ್ದಾಗ ಇದೇ ವಿಧಾನ ಸಭೆಯಲ್ಲಿ ಅದರ ಒಂದು exhibition ಮಾಡಿದ್ದೇವೆ. ನಂತರ ಒಂದು Public meeting ಮಾಡಿದ್ದೇವೆ. ಅದರಲ್ಲಿ ಅವರು ಒಂದು ಒಳ್ಳೆಯ ಕಾರ್ಯಕ್ರಮವೆಂದು ಶ್ಲಾಘನೆ ಮಾಡಿದರು. ಅದೇ ರೀತಿಯಲ್ಲಿ 1 ರೂಪಾಯಿ ಕೊಡುವ 'ಅಕ್ಷಯ' ಕಾರ್ಯಕ್ರಮವನ್ನೂ ಅವರೇ ರೂಪಿಸಿದ್ದರು. ಅದರ ವಿಚಾರದಲ್ಲಿ ಚರ್ಚೆಯಾಯಿತು. ನಾವೇನಾದರೂ ಮಧ್ಯಾಹ್ನ ಊಟ ಮಾಡಬೇಕೆಂದರೆ 1 ರೂ.ಗೆ ಊಟ ಬರುವುದಿಲ್ಲ. ಆದರೆ ಅವತ್ತು 1 ರೂಪಾಯಿಗೆ ಮಧ್ಯಾಹ್ನ ಊಟ ಬರುತ್ತಿತ್ತು. ಮಧ್ಯಾಹ್ನ ಊಟ ಮಾಡಲಿಕ್ಕೆ ನಮ್ಮ teachers ಮತ್ತು ಮಕ್ಕಳಿಗೆ ಕಷ್ಟವಾಗುತ್ತದೆ, ಆದ್ದರಿಂದ ತಿಂಗಳಿನ 25 ದಿವಸಕ್ಕೆ 25 ರೂ.ಗಳನ್ನು ಕೊಟ್ಟರೆ, ಆ ದುಡ್ಡಿನಿಂದ ಅವರು ಒಳ್ಳೆಯ ಆಹಾರ ಪದಾರ್ಥಗಳನ್ನು ಖರೀದಿ ಮಾಡಿ, ಮನೆಯಲ್ಲಿ ಮಕ್ಕಳಿಗೆ ಊಟ ಮಾಡಿಕೊಡುತ್ತಾರೆ ಎಂಬ ಉದ್ದೇಶದಿಂದ ಅವರು ಅದನ್ನು ಜಾರಿಗೆ ತಂದಿದ್ದರು. 'ಆರಾಧನಾ' ಕಾರ್ಯಕ್ರಮ ಕೂಡ ಜಾರಿಗೆ ತಂದಿದ್ದರು. ಕೇವಲ ದೊಡ್ಡ ದೊಡ್ಡ ಚರ್ಚ್‌ಗಳು, ದೇವಸ್ಥಾನಗಳು ಮತ್ತು ಮಸೀದಿಗಳ ಅಭಿವೃದ್ಧಿಯನ್ನು ಮಾತ್ರವೇ ಗಮನದಲ್ಲಿಟ್ಟುಕೊಂಡರೆ ಸಾಲದು, ಬಡವರು ಇರುವ ಕೇರಿಗಳೇನಿವೆ, ಅಲ್ಲಿರುವ ದೇವಸ್ಥಾನಗಳ ಪುನರುತ್ಥಾನ ಸಹ

ಆಗಬೇಕು ಎಂಬ ಉದ್ದೇಶದಿಂದ ಅವತ್ತು 'ಆರಾಧನಾ" ಸ್ಕೀಮ್ ಅನ್ನು ಜಾರಿಗೆ ತಂದರು. ಈ ರೀತಿಯಲ್ಲಿ ಹಲವಾರು ಸ್ಕೀಮ್‌ಗಳನ್ನು ಜಾರಿಗೆ ತಂದಿದ್ದರು. ಮಂಡ್ಯದ ಕಾವೇರಿ ಜಲವಿವಾದದ ವಿಚಾರ ಬಂದಾಗ ಅದಕ್ಕಾಗಿಯೇ Ordinanceವೊಂದನ್ನು ಜಾರಿಗೆ ತಂದರು. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದ್ದರೂ ಸಹ, ಕರ್ನಾಟಕ ಜಲವನ್ನು ರಕ್ಷಣೆ ಮಾಡುವಂತಹ ಕೆಲಸವನ್ನು Ordinance ಮೂಲಕ ಮಾಡಿದವರು ಶ್ರೀಮಾನ್ ಬಂಗಾರಪ್ಪನವರು. ಅಂತಹ ಹಲವಾರು ಒಳ್ಳೆಯ ಕಾರ್ಯಕ್ರಮಗಳನ್ನು ಮಾನ್ಯ ಬಂಗಾರಪ್ಪನವರು ಈ ರಾಜ್ಯಕ್ಕೆ ಕೊಟ್ಟಿದ್ದಾರೆ. ಆದರೆ ದುರದೃಷ್ಟವಶಾತ್ ಅವರ ಮೇಲೆ ಅಪಪ್ರಚಾರ ಮಾಡಿದರು. ಕ್ಲಾಸಿಕ್ ಕಂಪ್ಯೂಟರ್ ಪ್ರಕರಣದ ಬಗ್ಗೆ ಇವತ್ತು ನಿಮಗೆ ಗೊತ್ತಿದೆ. ಇಡೀ State Government ಅನ್ನು computerize ಮಾಡಬೇಕು, ಅದಕ್ಕಾಗಿ ಒಳ್ಳೆಯ ಕಂಪ್ಯೂಟರ್‌ಗಳನ್ನು purchase ಮಾಡಬೇಕು ಎಂಬ ಉದ್ದೇಶದಿಂದ Apple computers ಅನ್ನು purchase ಮಾಡಲಿಕ್ಕೆ Cabinet ನಲ್ಲಿ ನಿರ್ಧಾರವನ್ನು ಅವರು ತೆಗೆದುಕೊಂಡರು. ಅದರ ವಿಚಾರದಲ್ಲಿ ಸಾಕಷ್ಟು ಅಪಪ್ರಚಾರವನ್ನು ಮಾಡಲಾಯಿತು. CBI ನವರು ಅವರನ್ನು ಅರೆಸ್ಟ್ ಮಾಡಿದರು. ಸಾಕಷ್ಟು ಪತ್ರಿಕೆಗಳಲ್ಲಿ, ಟಿ.ವಿಯಲ್ಲಿ ಈ ಬಗ್ಗೆ ವಿವರವಾಗಿ ವರದಿ ಪ್ರಕಟಿಸಲಾಗಿತ್ತು. ಆದರೆ ಕೊನೆಯದಾಗಿ ಏನಾಯಿತು? CBI ನವರು ಹೂಡಿದ ಪ್ರಕರಣದಲ್ಲಿ ಕೋರ್ಟ್ ಅವರನ್ನು ನಿರ್ದೋಷಿ ಎಂದು ಆರೋಪಮುಕ್ತಗೊಳಿಸಿತು. ಇವತ್ತು Apple ಕಂಪೆನಿ ವಿಚಾರದ ಬಗ್ಗೆ ಯೋಚನೆ ಮಾಡುವುದಾದರೆ, ತಮಗೆ ಗೊತ್ತಿದೆ, ಅದರ ಮುಖ್ಯಸ್ಥ ಸ್ಟೀವ್ ಜಾಬ್ಸ್ ಅವರು ಮೊನ್ನೆತಾನೇ ತೀರಿಹೋದರು. Apple Company ಬಹುಶಃ ಇಡೀ ಪ್ರಪಂಚದಲ್ಲಿಯೇ ಕಂಪ್ಯೂಟರ್‌ನಲ್ಲಿ ಮೊಟ್ಟಮೊದಲ ಕಂಪೆನಿಯಾಗಿದೆ. ಅಂತಹ ಕಂಪೆನಿಯ Macintosh computers purchase ಮಾಡಿದ್ದಕ್ಕಾಗಿ ಅವರ ಮೇಲೆ ಆರೋಪವನ್ನು ಮಾಡಲಾಗಿತ್ತು. ಅವತ್ತು ಅವರು ಮುಖ್ಯಮಂತ್ರಿಯಾಗಿದ್ದಾಗ, ಯಾವ ಹೋಟೆಲ್ ನೋಡಿದರೂ, 'ಇದು ಬಂಗಾರಪ್ಪನವರದು', ಯಾವ ಬಿಲ್ಡಿಂಗ್

ನೋಡಿದರೂ, 'ಇದು ಬಂಗಾರಪ್ಪನವರದು', ಎಂದು ಕೆಲವರು ಹೇಳುತ್ತಿದ್ದರು. ಅವರು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದ ಮೇಲೆ, ಪಾಪ! ಅವರ ಕೈಯ್ಯಲ್ಲಿ ದುಡ್ಡೇ ಇರಲಿಲ್ಲ. ಅವರ ಮನೆ ಜಪ್ತಿಗೆ ಬಂದಿತ್ತು. ಇದೇ ರೀತಿಯಲ್ಲಿ ರಾಜಕಾರಣಿಗಳ ಮೇಲೆ ಎಷ್ಟೋ ಹೇಳುತ್ತಾರೆ. ಯಾರೇ ಇರಲಿ, 'ರಾಜಕಾರಣಿಗಳು ದುಡ್ಡು ಮಾಡುತ್ತಾರೆ' ಎನ್ನುತ್ತಾರೆ. ಬಹುಶಃ ದುಡ್ಡು ಮಾಡುವಂತಹ ರಾಜಕಾರಣಿಗಳು ಇದ್ದಾರೆ. ಆದರೆ ಮಾಡದವರ ಮೇಲೆ ಹೇಳುತ್ತಾರೆ. ಇದು ಬಹಳ ದುಃಖದ ವಿಚಾರ. ಇಂತಹ ಒಳ್ಳೆಯ ರಾಜಕಾರಣಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ದೇವರು ಅವರ ಆತ್ಮಕ್ಕೆ ಶಾಂತಿ ಕೊಡಲಿ. ಅವರನ್ನು ಕಳೆದುಕೊಂಡ ಅವರ ಮನೆಯವರಿಗೆ, ದೇವರು ಆತ್ಮಸ್ಥೈರ್ಯವನ್ನು ಕೊಡಲೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಸೋಮಪ್ಪ ಸುವರ್ಣನವರು, ಅವರೂ ಸಹಿತ ನಮ್ಮೊಂದಿಗೆ ಶಾಸಕರಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದರು. ಅವರನ್ನೂ ಸಹಾ ನಾನು ಈ ಸಂದರ್ಭದಲ್ಲಿ ನೆನಪಿಸಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):– ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದ ನಂತರ ರಾಜ್ಯದ ಐವರು ಪ್ರಮುಖರನ್ನು ನಾವು ಕಳೆದುಕೊಂಡಿದ್ದೇವೆ. ಆ ನಿಟ್ಟಿನಲ್ಲಿ ತಾವು ತಂದಿರುವ ಈ ಸಂತಾಪ ಸೂಚನೇ ನಿರ್ಣಯವೇನಿದೆ, ಅದನ್ನು ನಾನು ಬೆಂಬಲಿಸುತ್ತೇನೆ. ಮಾಜಿ ಮುಖ್ಯಮಂತ್ರಿಗಳಾಗಿದ್ದಂತಹ ದಿವಂಗತ ಎಸ್.ಬಂಗಾರಪ್ಪನವರು ನಮ್ಮ ಜಿಲ್ಲೆಯವರು ಮತ್ತು ನಮ್ಮ ಮಹಾನ್ ನಾಯಕರಾಗಿದ್ದರು. ಬಹುಶಃ ಕರ್ನಾಟಕ ಕಂಡಿರತಕ್ಕಂಥ ಒಬ್ಬ ಅದ್ಭುತ ನಾಯಕ ಅವರು. ಕರ್ನಾಟಕ ರಾಜ್ಯದಲ್ಲಿ ಅನೇಕರು ಇದ್ದರೂ ಕೂಡ, ಶಿವಮೊಗ್ಗ ಜಿಲ್ಲೆಯಲ್ಲಿ ಶಾಸಕರಾಗಿ ಆಯ್ಕೆಯಾಗಬೇಕೆಂದರೆ, ಎಲ್ಲೋ ಒಂದು ಕಡೆ, ಒಂದು ರೀತಿಯಲ್ಲಿ ಬಂಗಾರಪ್ಪನವರ ಬೆಂಬಲ ಇಲ್ಲದಿದ್ದರೆ ಕಷ್ಟ ಎನ್ನತಕ್ಕ ರೀತಿಯಲ್ಲಿ ಅಭಿಪ್ರಾಯ ವ್ಯಕ್ತವಾಗಿತ್ತು. ಬಹಳ ಪ್ರಮುಖವಾಗಿ ಅವರು ಅನೇಕ ರಾಜಕೀಯ ನಿಲುವುಗಳನ್ನು ತೆಗೆದುಕೊಂಡಿದ್ದರು. ಈಗಾಗಲೇ ಅವರ

ಕ್ಷೇತ್ರದಿಂದ ಬಂದಿರುವ, ನಮ್ಮ ಮಿತ್ರರಾಗಿರುವ ಮಾನ್ಯ ಹಾಲಪ್ಪನವರೂ ಕೂಡ ಈ ಬಗ್ಗೆ ಆಗಲೇ ಹೇಳಿದರು. ಬಹುಶಃ ಬಡವರ ಪರವಾಗಿ ಇರತಕ್ಕಂಥ ಅವರ ನಿಲುವಿನಿಂದಾಗಿಯೇ, ಮಾನ್ಯ ಬಂಗಾರಪ್ಪನವರು ಒಬ್ಬ ಅದ್ಭುತ ರಾಜಕಾರಣಿ, ಒಬ್ಬ ಅದ್ಭುತ ನಾಯಕ ಎನ್ನುವುದನ್ನು ಅವರ ಸಾವಿನ ನಂತರ ಅನೇಕ ಜನರು ಅರ್ಥಮಾಡಿಕೊಂಡಿದ್ದಾರೆ. ಅವರು ತೆಗೆದುಕೊಂಡಿರತಕ್ಕಂಥ ನಿಲುವುಗಳು ಚೆನ್ನಾಗಿದ್ದವು. ಅವರೇನು ಒಂದು ಗಟ್ಟಿ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದರೋ, ಅದನ್ನು ಇನ್ನೊಬ್ಬರ ಹತ್ತಿರ ಕೇಳಿ, ಚರ್ಚೆ ಮಾಡಿ, ಯೋಚನೆ ಮಾಡುತ್ತಿರಲಿಲ್ಲ. ಅವರೇನು ನಿರ್ಧಾರವನ್ನು ತೆಗೆದುಕೊಂಡಿರುತ್ತಿದ್ದರೋ, ಆ ನಿಲುವನ್ನು ಅನುಷ್ಠಾನಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಬಹುಶಃ ರಾಜ್ಯದ ಮುಖ್ಯಮಂತ್ರಿಯಾದ ನಂತರ ಅವರು ತೆಗೆದುಕೊಂಡಿರತಕ್ಕಂಥ ನಿಲುವುಗಳನ್ನು ನೋಡಿದರೆ, ನಮಗೆ ಇದರ ಅರಿವಾಗುತ್ತದೆ. ಇವತ್ತು ಆಶ್ರಯ ಮನೆ ಬಗ್ಗೆ ಹೇಳುವುದಾದರೆ, ನಾವು ಕಳೆದ ಎರಡು ವರ್ಷಗಳಿಂದ ಜಿಜ್ಞಾಸೆಯಲ್ಲಿದ್ದೇವೆ. ಇನ್ನೂ ಕೂಡ ನಮಗೆ ಹಕ್ಕುಪತ್ರಗಳನ್ನು ಕೊಡಲಿಕ್ಕೆ ಆಗುತ್ತಿಲ್ಲ. ಆ ನಿಟ್ಟಿನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ನಾನು ಮೊನ್ನೆ ಹೇಳಿದ್ದೇನೆ. ಮಾನ್ಯ ಬಂಗಾರಪ್ಪನವರ ಕೈಯ್ಯಲ್ಲಿ ಇಂತಹ ಸಮಸ್ಯೆಯೊಂದು ಸಿಕ್ಕಿದ್ದರೆ, ಹತ್ತು ನಿಮಿಷದಲ್ಲೇ ಇದನ್ನು ಬಗೆಹರಿಸುತ್ತಿದ್ದರು ಎನಿಸುತ್ತದೆ. Actually ನಮಗೆ ಹಾಗೆ ಅನಿಸುತ್ತಿದೆ. ಆ ಸಂದರ್ಭದಲ್ಲಿ ಅವರು ಅನೇಕ ದಿಟ್ಟ ನಿಲುವುಗಳನ್ನು ತೆಗೆದುಕೊಂಡಿದ್ದಾರೆ. ನಾನೂ ಕೂಡ ಸೋಷಿಯಲಿಸ್ಟ್ ಪಾರ್ಟಿ ಮೂಲಕ ರಾಜಕೀಯ ವ್ಯವಸ್ಥೆಗೆ ಬಂದಿರತಕ್ಕವನಾಗಿದ್ದೇನೆ. ಆ ಸಂದರ್ಭದಲ್ಲಿ, 1967ರಲ್ಲಿ, ಐದು ಜನ ಸೋಷಯಲಿಸ್ಟ್ ಪಾರ್ಟಿಯವರು ಶಿವಮೊಗ್ಗ ಜಿಲ್ಲೆಯಿಂದ elect ಆಗಿ ಬಂದಿದ್ದರು. ಅದರಲ್ಲಿ ಮಾನ್ಯ ಬಂಗಾರಪ್ಪನವರೂ ಕೂಡ ಒಬ್ಬರು. ಬಹಳ ಪ್ರಮುಖವಾಗಿ ಗೇಣಿ ರೈತರ ಮೂಲಕ ರಾಜಕೀಯ ಹೋರಾಟವನ್ನು ಪ್ರಾರಂಭ ಮಾಡಿದ್ದರು. ಅವರ ಅನೇಕ ನಿಲುವುಗಳು ಪ್ರಮುಖವಾಗಿದ್ದವು. ಅವರು ಮುಖ್ಯಮಂತ್ರಿಯಾಗಿದ್ದಾಗ 'ಕರ್ನಾಟಕ ರತ್ನ'

ಪ್ರಶಸ್ತಿಯನ್ನು declare ಮಾಡಿದರು. ಅದರ ಮೊದಲನೇ ಪ್ರಶಸ್ತಿಯನ್ನು ಕುವೆಂಪುವರಿಗೆ ಮತ್ತು ಡಾ:ರಾಜ್‌ಕುಮಾರ್‌ರವರಿಗೆ ಪ್ರದಾನ ಮಾಡಿದರು. ಖಂಡಿತವಾಗಿಯೂ ಕೂಡ, ಅದು ನಮ್ಮೆಲ್ಲರಿಗೂ ನೆಮ್ಮದಿ ಮತ್ತು ಸಂತೋಷ ಕೊಡತಕ್ಕ ನಿರ್ಣಯವಾಗಿತ್ತು. ಒಮ್ಮೆ ಅನೇಕ ಪ್ರಮುಖ ಸಾಹಿಗಳೆಲ್ಲಾ ಹೋಗಿ ಅವರ ಹತ್ತಿರ ಹೋಗಿ ಕುವೆಂಪು ಹೆಸರಿನಲ್ಲಿ ಪ್ರತಿಷ್ಠಾನವೊಂದನ್ನು ಸ್ಥಾಪಿಸಬೇಕೆಂದು ನಿವೇದನೆ ಮಾಡಿಕೊಳ್ಳುತ್ತಾರೆ. ಇದಕ್ಕಾಗಿ ಇವರು ಕೇಳುವುದಕ್ಕೆ ಹೋಗಿದ್ದು ರೂ.10 ಲಕ್ಷ, ಆದರೆ ಅವರು ಕೊಟ್ಟಿದ್ದು ರೂ. 25 ಲಕ್ಷ. ಈ ರೀತಿಯಾಗಿ ಅವರ ನಿಲುವುಗಳಿದ್ದವು. ಇವತ್ತು ಇಡೀ ಕರ್ನಾಟಕದಲ್ಲಿ ಅತ್ಯಂತ ಒಳ್ಳೆಯ ರೀತಿಯಲ್ಲಿ ನಡೆಯತಕ್ಕ ಪ್ರತಿಷ್ಠಾನಗಳಲ್ಲಿ ಕುಪ್ಪಳ್ಳಿಯಲ್ಲಿ ಇರತಕ್ಕ ಕುವೆಂಪು ಪ್ರತಿಷ್ಠಾನವೂ ಕೂಡ ಒಂದಾಗಿದೆ. ಅದಕ್ಕೆ ಮಾನ್ಯ ಬಂಗಾರಪ್ಪನವರೇ ನಾಂದಿ ಹಾಡಿರತಕ್ಕವರು. ಇಂತಹ ಅನೇಕ ರಾಜಕೀಯ ನಿಲುವುಗಳನ್ನು ಅವರು ತೆಗೆದುಕೊಂಡಿದ್ದರು. ಅವರ ನಿಲುವುಗಳೇನು ಇರುತ್ತಿತ್ತು, ಅವರ ಪ್ರತಿಯೊಂದು ನಿಲುವು ಬಡವರ ಪರವಾಗಿರುವುದನ್ನು ಕಾಣಬಹುದಾಗಿತ್ತು. ಗೇಣಿ ಶಾಸನದ ಮೂಲಕ ಹೋರಾಟ ಪ್ರಾರಂಭಿಸಿದ ಅವರು ಎಲ್ಲದಕ್ಕೂ ಪೂರಕವಾಗಿ ನಿಂತರು. 'ಆಶ್ರಯ" ಯೋಜನೆ ಜಾರಿಗೆ ತಂದರು. ಈಗಾಗಲೇ 1 ರೂ. ಕೊಡತಕ್ಕದ್ದರ ಬಗ್ಗೆ ಹೇಳಿದರು, ಅದು 'ಅಕ್ಷರ ತುಂಗಾ' ಕಾರ್ಯಕ್ರಮ. ಬಡವರ ಮಕ್ಕಳು ಶಾಲೆಗೆ ಬರುವುದಿಲ್ಲ. ಅವರು ಶಾಲೆಗೆ ಬರುವ ಹಾಗೆ ಮಾಡಬೇಕು. ಅವರನ್ನು ಶಾಲೆಗೆ ಕಳುಹಿಸಲಿಕ್ಕೆ ಬಡವರಿಗೆ ಹಣ ಇಲ್ಲ ಎನ್ನುವ ಕಾರಣಕ್ಕಾಗಿ, 'ಅಕ್ಷರ ತುಂಗಾ' ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಅನಂತರ ಅದು ಇತ್ತೀಚೆಗೆ 'ಅಕ್ಷರ ದಾಸೋಹ' ಕಾರ್ಯಕ್ರಮದ ಮೂಲಕ ಅನುಷ್ಠಾನಕ್ಕೆ ಬಂದಿದೆ. ಬಹುಶಃ ಇಡೀ ರಾಜ್ಯ ಕಂಡಿರತಕ್ಕ ಒಬ್ಬ ಪ್ರಬುದ್ಧ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ. ಒಂದು ಅತ್ಯುತ್ತಮವಾಗಿರತಕ್ಕಂಥ ಪ್ರತಿಷ್ಠಾನವನ್ನು ಸೊರಬದಲ್ಲಿ ಅವರ ಹೆಸರಿನಲ್ಲಿ, ಅವರ ನೆನಪಿನಲ್ಲಿ ಮಾಡಬೇಕು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾನೊಂದು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ತೀರ್ಥಹಳ್ಳಿಯಲ್ಲಿ ಮೊನ್ನೆ ಮೂರು ದಿನ All India Invition Kh0-Kho Tournament ಅನ್ನು ಮಾನ್ಯ ಬಂಗಾರಪ್ಪನವರ ಹೆಸರಿನಲ್ಲಿ ನಡೆಸಿದ್ದೆವು. ಕರ್ನಾಟಕ ಸರ್ಕಾರದ ವತಿಯಿಂದ ಅದಕ್ಕಾಗಿ 2 ಲಕ್ಷ ರೂ.ಗಳ ಹಣವನ್ನು ಕೊಡುತ್ತೇವೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬಕ್ಕೆ ಅವರ ಅಗಲಿಕೆಯನ್ನು ಸೈರಿಸುವ ಶಕ್ತಿಯನ್ನು ಭಗವಂತನು ಕೊಡಲಿ ಎನ್ನುವ ಮಾತನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೆ, ಸಾಮಾಜಿಕ ಕಳಕಳಿ, ಕಾಳಜಿ ಹಿನ್ನೆಲೆಯಿಂದ ಬಂದಂತಹವರು ಮಾನ್ಯ ಬಂಗಾರಪ್ಪನವರು. ಸಾಮಾಜಿಕ ಕಳಕಳಿ, ಕಾಳಜಿಯ ಚಿಂತನೆಯ ಚಿಲುಮೆಯಲ್ಲಿ ನೊಂದು, ಬೆಂದು ಸೋಷಯಲಿಸ್ಟ್ ಪಾರ್ಟಿಯ ಮುಖಾಂತರ ರಾಜಕೀಯ ಪ್ರವೇಶಿಸಿದ ಬಂಗಾರಪ್ಪನವರು ಹಿಂದುಳಿದವರ ಪರವಾಗಿ, ದೀನ ದಲಿತರ ಪರವಾಗಿ ಧ್ವನಿ ಎತ್ತತಕ್ಕ ಧೈರ್ಯ ಅವರಿಗಿತ್ತು. ನಾನು ದಲಿತರ ಪರವಾಗಿ, ಹಿಂದುಳಿದವರ ಪರವಾಗಿ ಇದ್ದೇನೆ ಎಂದು ಅವರು ಬಹಿರಂಗವಾಗಿ ಹೇಳಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ, ಸಮಾಜವಾದದ ಮೂಲಕ ರೈತರ ಏಳಿಗೆಯನ್ನು ಬಯಸತಕ್ಕವರಾಗಿದ್ದರು. ಸಮಾಜವಾದದ ಮೂಲಕ ಜನಮನ ಮುಟ್ಟತಕ್ಕ ರೀತಿಯಲ್ಲಿ ಸಮಾಜವಾದದ ಚಿಂತನೆಗಳನ್ನು ಹಂಚಿದವರು ಮಾನ್ಯ ಬಂಗಾರಪ್ಪನವರು. ಅವರ ಅಗಲಿಕೆಯಿಂದ ಸಾಮಾಜಿಕ ಕ್ಷೇತ್ರಕ್ಕೆ ನಷ್ಟವಾಗಿದೆ. ಮೃತರ ಕುಟುಂಬಕ್ಕೆ ನಾನೂ ಕೂಡ ಶ್ರದ್ಧಾಂಜಲಿಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಮೃತರ ಗೌರವಾರ್ಥ ಸದನವು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

[ಈ ಹಂತದಲ್ಲಿ ಸದನವು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು]

ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

[ಸದನವನ್ನು ಮಧ್ಯಾಹ್ನ 1 ಗಂಟೆ 9 ನಿಮಿಷಕ್ಕೆ ಮುಂದೂಡಲಾಯಿತು. ಸದನವು ಪುನಃ ದಿನಾಂಕ 1ನೇ ಫೆಬ್ರವರಿ 2012ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು]